ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೧೫ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೪ ಸಂಚಿಕೆ: ೮

ಮಹಿಳಾ ವಿಶೇಷ ಸಂಚಿಕೆ

ಚಂದಾ : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟಗಳು: ೨೪

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨೪೨೨೮೪ ಈಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು


ಪ್ರಿಯ ಓದುಗರೇ,

ಈ ಫೆಬ್ರುವರಿಯಲ್ಲಿ ನಾವು ಕೆಲವು ಗೆಳೆಯರು ಮಧ್ಯಪ್ರದೇಶ ಪ್ರವಾಸ ಕೈಗೊಂಡಿದ್ದೆವು. ಅದು ಪ್ರಸಿದ್ಧ ಪ್ರವಾಸಿ ಸಂಸ್ಥೆಯೊಂದು ಆಯೋಜಿಸಿದ ಪ್ರವಾಸ. ಹಾಗಾಗಿ ಊಟ-ವಸತಿಗಳಿಗೇನೂ ತೊಂದರೆ ಇಲ್ಲದ್ದು. ಆದರೆ ಮಧ್ಯಪ್ರದೇಶ ನಮ್ಮಂತಹ ಹಿರಿಯ ನಾಗರಿಕ ಪ್ರವಾಸಿಗಳಿಗೆ ಅಷ್ಟೇನೂ ಸುಲಭ ಮತ್ತು ಆಕರ್ಷಕವಲ್ಲದ ಜಾಗ. ಯುವಸಾಹಸಿ ಪ್ರವಾಸಿಗರದ್ದು ಬೇರೆ ವಿಷಯ.

ಆದರೆ ನಾವು ಮಧ್ಯಪ್ರದೇಶಕ್ಕೆ ಹೋಗಿ ಎರಡು ಮೂರು ಸ್ಥಳಗಳಿಗೆ ಭೇಟಿ ನೀಡುತ್ತಿದ್ದಂತೆ ನಮ್ಮ ಅಭಿಪ್ರಾಯ ಬದಲಾಯಿತು. ಅವು ನಾವು ನೋಡಿದ ಭಾರತದ ಬೇರೆ ಭಾಗಗಳಿಗಿಂತ ಬಹುಭಿನ್ನವಾಗಿ ನಮ್ಮನ್ನು ಸೆಳೆದವು. ಈ ರಾಜ್ಯ, ಅದರ ಪಶ್ಚಿಮ ಭಾಗ ಬಿಟ್ಟರೆ ಪೂರಾ ಗುಡ್ಡಗಾಡು ಪ್ರದೇಶ. ದೇಶದ ಉತ್ತರ ಮತ್ತು ದಕ್ಷಿಣಗಳನ್ನು ಪುರಾತನ ಕಾಲದಿಂದಲೂ ವಿಭಾಗಿಸಿರುವ (ಸಾಂಸ್ಕೃತಿಕವಾಗಿ ಕೂಡ) ವಿಂಧ್ಯಾಚಲ ಹರಡಿರುವ ಪ್ರದೇಶವಿದು. ಈಗ ರಾಷ್ಟ್ರದ ಅತಿದೊಡ್ಡ ರಾಜ್ಯವಾಗಿರುವ ಮಧ್ಯಪ್ರದೇಶ ಅಷ್ಟೇನೂ ಅಭಿವೃದ್ಧಿ ಕಾಣದ ರಾಜ್ಯ. ಹಾಗಾಗಿಯೇ ಸುಂದರವಾಗಿದೆ. ನರ್ಮದಾ ನದಿ ರಾಜ್ಯವನ್ನು ಅಡ್ಡವಾಗಿ ಸೀಳಿಹರಿಯುತ್ತಾ ಭೂಮಿಯನ್ನು ಫಲವತ್ತಾಗಿಸಿದೆ. ಆದರೆ ನಾವು ನರ್ಮದೆಯಲ್ಲಿ ದೋಣಿ ವಿಹಾರ ಮಾಡಿದ ಬೇಡಾಘಾಟ್ ಮಾತ್ರ ಕಲ್ಲು ಪ್ರದೇಶ. ಇಲ್ಲಿ ನರ್ಮದೆ ಬೆಣಚುಕಲ್ಲು ಶಿಖರಗಳ ನಡುವೆ ತನ್ನ ಗುಣಕ್ಕೆ ವಿರುದ್ಧವಾಗಿ ಪ್ರಶಾಂತವಾಗಿ ಹರಿಯುತ್ತಾಳೆ. ಅಕ್ಕಪಕ್ಕದಲ್ಲಿನ ವಿಶಾಲ ಗೋಧಿ ಮತ್ತು ಸಾಸಿವೆ ಹೊಲಗಳು ನಮ್ಮ ಕಣ್ಮನಗಳನ್ನು ಸೆಳೆಯುತ್ತವೆ. ನಾವು ನೋಡಿದಂತೆ ಈ ರಾಜ್ಯದಲ್ಲಿ ಜನನಿಬಿಡತೆ ಕಡಿಮೆ. ಇರುವ ಜನ ಕೂಡ ಇಲ್ಲಿನ ಆದಿವಾಸಿ ಸಂಸ್ಕೃತಿಯಿಂದ ಪ್ರಭಾವಿತರಾದಂತೆ ಸರಳ ಮನಸ್ಸಿನ ಸಾತ್ವಿಕ ಜನರಂತೆ ಕಾಣುತ್ತಾರೆ.

ನಮ್ಮನ್ನು ಸೆಳೆದ ಇನ್ನೊಂದು ಜಾಗ ಮಾಂಡು. ಇಲ್ಲಿಗೆ ಹೋಗುವುದೇ ಒಂದು ಹರ ಸಾಹಸ. ಕೊರಕಲುಗಳು ಮತ್ತು ಬಂಡೆಗಲ್ಲುಗಳ ಮೇಲೆ ನಮ್ಮ ವಾಹನ ಸಾಗುತ್ತಿದ್ದಂತೆ ನಮ್ಮ ದೇಹ ಇಡಿಯಾದದ್ದಲ್ಲ, ಬಿಡಿಭಾಗಗಳಿಂದ ಕೂಡಿದ್ದು ಎಂಬ ಹೊಸ ಅರಿವು ನಮಗೆ ಉಂಟಾಗತೊಡಗುತ್ತದೆ! ಆದರೆ ಅಲ್ಲಿಗೆ ತಲುಪಿದ ಮೇಲೆ ಅಂತಹ ದುರ್ಗಮ ಜಾಗದಲ್ಲಿ ಇತಿಹಾಸ ಪ್ರಸಿದ್ಧ ಭೋಜರಾಜ ಮತ್ತು ಆನಂತರ ಖಿಲ್ಜಿ ದೊರೆಗಳು ಕಟ್ಟಿಸಿದ ಅರಮನೆ-ದೇವಾಲಯ-ಕೊಳ-ಮಸೀದಿಗಳನ್ನು ನೋಡಿದರೆ, ಆಧುನಿಕ ಸಿವಿಲ್‌ಎಂಜಿನಿಯರಿಂಗ್‌ನ ಸಾಧನೆಗಳ ನಮ್ಮ ಹೆಮ್ಮೆ ಬರೀ ಬೊಗಳೆ ಎನ್ನಿಸಿಬಿಡುತ್ತದೆ. ಈ ವಿಶಿಷ್ಟ ಜಾಗದ ಬಗ್ಗೆ ಬೇರೆಲ್ಲಾದರೂ ಬರೆಯಬೇಕು.

ಇನ್ನುಳಿದಂತೆ ಗ್ವಾಲಿಯರ್, ಖಜುರಾಹೋ, ಸಾಂಚಿ, ಭೂಪಾಲ, ಜಬ್ಬಲ್‌ಪುರ, ಇಂದೂರು, ಓಂಕಾರೇಶ್ವರ, ಉಜ್ಜಯಿನಿ ಇತ್ಯಾದಿಗಳೆಲ್ಲ ನಮ್ಮ ಇತರೆ ಪ್ರವಾಸಿ ಕೇಂದ್ರಗಳಂತೆಯೇ ಸಾಂಪ್ರದಾಯಿಕ ಕೋಟೆ, ಅರಮನೆ, ದೇವಾಲಯ, ಮಾರುಕಟ್ಟೆಗಳ ಸ್ಥಳಗಳು. ಆದರೆ ಎರಡು ವಿಷಯ ಹೇಳಬೇಕು. ನಮ್ಮ ರಾಜ್ಯದ ಸ್ಮಾರಕಗಳ ಸಂರಕ್ಷಣೆಗೆ ಹೋಲಿಸಿದರೆ ಇಲ್ಲಿನ ಸ್ಮಾರಕಗಳ ಸಂರಕ್ಷಣೆ ಶ್ರೇಷ್ಠವಾಗಿದೆ; ಪ್ರವಾಸಿ ಸ್ನೇಹಿಯಾಗಿದೆ. ವಿಶೇಷವಾಗಿ ಖಜುರಾಹೋ ದೇವಾಲಯಗಳ ಮತ್ತು ಸಾಂಚಿ ಸ್ತೂಪ ಸಂಕೀರ್ಣಗಳ ಸುತ್ತಣ ತೋಟ ಮತ್ತು ಬಯಲು ಈ ಸ್ಮಾರಕಗಳಿಗೆ ಒಂದು ವಿಶೇಷ ಸೊಬಗನ್ನು ನೀಡುತ್ತವೆ. ಇನ್ನು ಭೂಪಾಲ ರಾಜ್ಯದ ರಾಜಧಾನಿಯಾದರೂ ಜನದಟ್ಟಣೆ ಆಗಲೀ ವಾಹನದಟ್ಟಣೆ ಆಗಲೀ ಇರದ ವಿಶಾಲ ರಸ್ತೆಗಳ ಮತ್ತು ಸರೋವರಗಳ ಸುಂದರ ನಗರ. ಕ್ಷಿಪ್ರಾ ನದಿಯ ದಂಡೆಯಲ್ಲಿರುವ ಹಾಗೂ ವಿಕ್ರಮಾದಿತ್ಯ-ಕಾಳಿದಾಸರ ನಗರ ಉಜ್ಜಯಿನಿ ಅಸಂಖ್ಯ ಗುಡಿಗೋಪುರಗಳ ಮಧ್ಯೆ ಹಾಳು ಸುರಿಯುತ್ತಿದ್ದು, ಸದಾ ಜನ ಮುತ್ತಿರುವ ಜ್ಯೋತಿರ್ಲಿಂಗವಿರುವ ಇಲ್ಲಿನ ಮಹಾಕಾಲೇಶ್ವರ ದೇವಾಲಯದ ಸುತ್ತಣ ಕೊಳಕನ್ನು ಮೋದಿಯವರ *ಸ್ವಚ್ಛಭಾರತ* ಆಂದೋಲನವಿನ್ನೂ ಮುಟ್ಟಿದ ಹಾಗೆ ತೋರುವುದಿಲ್ಲ.



ಪಂಚಮಢಿ ಮಧ್ಯಪ್ರದೇಶದ ಗಿರಿಧಾಮ. ನಾವು ಅಲ್ಲಿಗೆ ಹೋದಾಗ ಕೊರೆಯುವ ಚಳಿ. ಅದೊಂದು ಗಿರಿ ಕಂದರಗಳ ಕಾಡುಪ್ರದೇಶ. ಆದರೆ ವಿಶೇಷವೆಂದರೆ, ಇಲ್ಲಿ ಹೆಸರಿಗೂ ಒಂದು ಪಕ್ಷಿ ಹಾರಿದ್ದು ಕಾಣಲಿಲ್ಲ. ಕಾರಣ, ಅದು ಕಲ್ಲುಪ್ರದೇಶವಾದ್ದರಿಂದ ಅಲ್ಲಿ ಬೇಸಾಯವಿಲ್ಲದೆ, ಹಕ್ಕಿಗಳಿಗೆ ಬೇಕಾದ ಕಾಳುಕಡ್ಡಿ ಲಭ್ಯವಿಲ್ಲ. ಅಲ್ಲಿ ಸಮೃದ್ಧವಾಗಿರುವ ಪುರಾತನ ಮರಗಿಡಗಳೂ ಹಕ್ಕಿಗಳನ್ನು ಪೋಷಿಸುತ್ತಿಲ್ಲ! ಪಂಚಮಢಿ ಬರೀ ಸರ್ಕಾರಿ ತರಬೇತಿ ಕೇಂದ್ರಗಳಿರುವ; ಹಾಗಾಗಿ ಮನೆಮಠಗಳಿರುವ ಜನರಿಲ್ಲದ ಒಣ ಊರು. ಗೊಂಡ ಮತ್ತು ಭಿಲ್ಲ ಆದಿವಾಸಿಗಳು ಇಲ್ಲಿನ ಗಿರಿ ಕಂದರಗಳ ತುಂಬಾ ತಮ್ಮ ಆರಾಧ್ಯ ದೈವ ಶಿವನನ್ನೇ ಕಂಡಂತೆ ಅಲ್ಲಲ್ಲಿ ಅವನ ಗುಹೆ-ಗುಡಿಗಳನ್ನು ಮಾಡಿಕೊಂಡು ಹೆಂಗಸು-ಮಕ್ಕಳೆನ್ನದೆ ಆ ಕೊರೆಯುವ ಚಳಿಯಲ್ಲೂ ಗುಂಪು ಗುಂಪಾಗಿ ಬಂದು ಅಲ್ಲಿ ಬೀಡುಬಿಡುತ್ತಿದ್ದುದನ್ನು ಕಂಡು ನಾವು ಆಶ್ಚರ್ಯಪಟ್ಟೆವು.

ನಾವು ಶಿವನ ಬೀಡಾದ ಗಿರಿಕಂದರಗಳ ಈ ಪಂಚಮಢಿಯಲ್ಲಿದ್ದಾಗಲೇ ದೆಹಲಿ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಪ್ರಕಟವಾಗತೊಡಗಿದ್ದು. ಅಲ್ಲಿ ಬಹಳಷ್ಟು ಕಡೆ ದೂರವಾಣಿ ಸಂಪರ್ಕ ಲಭ್ಯವಿಲ್ಲದ ಕಾರಣ, ಆದ್ಮಿ ಪಕ್ಷದ ಅಭಿಮಾನಿ ಸಂಘದಂತಿದ್ದ ನಮ್ಮ ಗೆಳೆಯರ ಗುಂಪು ಚಡಪಡಿಸತೊಡಗುತ್ತಿರುವಾಗಲೇ, ದೂರವಾಣಿ ಸಂಪರ್ಕ ಲಭ್ಯವಿರುವ ಸಣ್ಣ ಜಾಗ ಬಂದರೂ ಸಾಕು, ನಾವು ಕರೆ ಮಾಡುವ ಮುನ್ನವೇ ಕರ್ನಾಟಕದಿಂದ ನಮಗೇ ಕರೆಗಳು ಬರತೊಡಗಿದವು. ಹಾಗೆ ಮೊದಲ ಕರೆ ಬಂದದ್ದು ಕಡಿದಾಳು ಶಾಮಣ್ಣನವರ ಮನೆಯಿಂದ, ಅವರ ಪತ್ನಿ ಶ್ರೀದೇವಿಯವರಿಂದ. ಮತ ಎಣಿಕೆಯ ಆರಂಭದ ಒಲವುಗಳಿಂದಲೇ ಅವರಿಗೆ ಖುಷಿಯೋ ಖುಷಿ! ನಮ್ಮೊಂದಿಗೆ ಅದನ್ನು ಹಂಚಿಕೊಳ್ಳುವ ಕಾತರ. 'ನಿಮ್ಮ ಪತ್ರಿಕೆ ಹಾರೈಕೆ ನಿಜವಾಗಿಬಿಟ್ಟಿದೆ ನೋಡಿ' ಎಂದು ನನಗೆ ಅಭಿನಂದನೆ! ಮರುಕ್ಷಣ ಶಿವಮೊಗ್ಗದ ದಿವಾಕರ ಹೆಗಡೆಯವರ ಕರೆ ಮತ್ತು ಶುಭಸುದ್ದಿ. ನಂತರ ಹಾಸನದ ಶಿವಕುಮಾರರದ್ದು! ಹೀಗೆ ಇಡೀದಿನ ಅಲ್ಲಿನ ಚಳಿ ಮರೆಸುವಂತಹ ಆಪ್‌ನ ದಿಗ್ವಿಜಯದ ಸಂಭ್ರಮದ ಬಿಸಿಬಿಸಿ ಸುದ್ದಿ ಪ್ರವಾಹ! ಸಂಜೆ ವೇಳೆಗೆ ಆಪ್‌ಗೆ ೭೦ರಲ್ಲಿ ೬೭ ಸ್ಥಾನ ಮತ್ತು ಕಿರಣ್ ಬೇಡಿ ಸೋತರು ಎಂಬ ಸುದ್ದಿ ತಲುಪಿದಾಗ ಬಿಜೆಪಿಯ ಕಟ್ಟಾ ಬೆಂಬಲಿಗರಾಗಿದ್ದ ನಮ್ಮ ಪ್ರವಾಸದ ಮಾರ್ಗದರ್ಶಿಗಳಿಗೆ(ಅವರು ದ.ಕ.ದ ಹುಡುಗರು) ಆಘಾತ! ಅದನ್ನು ಎಲ್ಲ ಬಿಜೆಪಿ ಬೆಂಬಲಿಗರಂತೆ ಮುಚ್ಚಿಟ್ಟದ್ದು, ಇದು ಪಕ್ಷದ ಒಳ್ಳೆಯದಕ್ಕೆಂದೇ ಮೋದಿ-ಅಮಿತ್ ಶಾರ ಜೋಡಿ ಆಯೋಜಿಸಿದ್ದ

ಸೋಲು ಎಂಬ ವಾದ ಮಂಡಿಸಿ! ಅವರಿಗೆ ನಮ್ಮ ಸಂತಾಪ ಸೂಚಿಸಿದೆವು! ಇರಲಿ.

ಆಂ ಆದ್ಮಿ ಪಕ್ಷದ ವಿಜಯದ ದಿನ ಭಾರತದ ಚುನಾವಣಾ ಇತಿಹಾಸದಲ್ಲಿ ಒಂದು ಐತಿಹಾಸಿಕ ದಿನ. ಹಲವು ಕಾರಣಗಳಿಗಾಗಿ. ಮುಖ್ಯವಾಗಿ ಅದು ನಮ್ಮ ಪ್ರಜಾಪ್ರಭುತ್ವದ ಭರವಸೆಯ ದಿನ. ಮೋದಿಯವರಿಗೆ ಒಂದು ಐತಿಹಾಸಿಕ ಜಯ ನೀಡಿದ ಒಂಬತ್ತು ತಿಂಗಳಗಳಲ್ಲೇ ಅವರ ಪಕ್ಷವನ್ನು ದೇಶದ ರಾಜಧಾನಿಯ ಜನ ಅಕ್ಷರಶಃ ಮಣ್ಣು ಮುಕ್ಕಿಸಿದ್ದಾರೆ. ಆ ಮೂಲಕ ಮೋದಿ ಸರ್ಕಾರ ತನ್ನ ಜಯದ ಹಮ್ಮಿನಲ್ಲಿ ಆರಂಭಿಸಿದ್ದ ವಿಚ್ಛಿದ್ರಕಾರಿ ಸಾಂಸ್ಕೃತಿಕ ರಾಜಕಾರಣ ಮತ್ತು ಏಕವ್ಯಕ್ತಿ ಆಡಳಿತ ಶೈಲಿಯ ವಿರುದ್ಧ ತಮ್ಮೆಲ್ಲ ಕ್ರೋಧವನ್ನು ದಾಖಲಿಸಿದ್ದಾರೆ. ದೆಹಲಿ ಕೇವಲ ಒಂದು ನಗರ ಎನ್ನುವವವರಿಗೆ ಆ ನಗರ ಕಳೆದ ಲೋಕಸಭಾ ಚುನಾವಣೆಗಳಲ್ಲಿ ಮೋದಿಯವರಿಗೇ ತನ್ನೆಲ್ಲ ಏಳು ಕ್ಷೇತ್ರಗಳನ್ನೂ ಒಪ್ಪಿಸಿತ್ತು ಮತ್ತು ಆ ನಗರ ಒಂದು ಮಿನಿಭಾರತ ಎಂಬುದನ್ನು ನೆನಪಿಸಬೇಕಾಗಿದೆ.

ಈ ಫಲಿತಾಂಶ ಐತಿಹಾಸಿಕ ಎನ್ನುವುದಕ್ಕೆ ಇನ್ನೊಂದು ಮುಖ್ಯ ಕಾರಣವೆಂದರೆ, ಅದು ಕೇಜ್ರಿವಾಲ್‌ರ ತಂಡ ಪ್ರತಿಪಾದಿಸುತ್ತಿದ್ದ ಹಣಬಲ, ತೋಳ್ಬಲ ಮತ್ತು ಜಾತಿ-ಧರ್ಮಗಳ ಬಲಗಳನ್ನಾದರಿಸಿದ ಸಾಂಪ್ರದಾಯಿಕ ರಾಜಕಾರಣದ ವಿರುದ್ಧ ಜನಶಕ್ತಿಯನ್ನಷ್ಟೇ ಆಧರಿಸಿದ ಪರ್ಯಾಯ ರಾಜಕಾರಣ ಕಾರ್ಯ ಸಾಧ್ಯ ಎಂಬುದೀಗ ಸಾಬೀತಾಗಿರುವುದು. ಇದಕ್ಕಾಗಿ ಕೇಜ್ರಿವಾಲ್ ಮತ್ತು ಅವರ ಬಳಗವನ್ನು ಎಷ್ಟು ಅಭಿನಂದಿಸಿದರೂ ಸಾಲದು. ಸ್ಪರ್ಧಾತ್ಮಕ ರಾಜಕಾರಣದ ಆವೇಶದಲ್ಲಿ ಈ ಹಿಂದೆ ಮಾಡಿದ ತಪ್ಪುಗಳನ್ನು ಜನತೆಯ ಮುಂದೆ ಪ್ರಮಾಣಿಕವಾಗಿ ಒಪ್ಪಿಕೊಂಡು ತನ್ನ ಬಳಗದ ಪರಿಶ್ರಮದ ಮೂಲಕವೇ ಅವರ ಮನಗೆದ್ದ ಕೇಜ್ರಿವಾಲರ ರಾಜಕಾರಣದ ಮಾದರಿ ಈಗ ಹಲವು ರಾಜಕೀಯ ವಿಶ್ಲೇಷಕರ ಕುತೂಹಲ ಮತ್ತು ಗಂಭೀರ ವಿಶ್ಲೇಷಣೆಗಳಿಗೆ ಕಾರಣವಾಗಿರುವುದು ಅಚ್ಚರಿಯೇನಲ್ಲ. ಆದರೆ ನಿಜವಾದ ಕುತೂಹಲವಿರುವುದು, ಅವರು ನೀಡಿದ ಭರವಸೆಗಳನ್ನು ಮನಸಾ ನಂಬಿ, ಕೇಜ್ರಿವಾಲರ ಭಾಷೆಯಲ್ಲೇ ಹೇಳುವುದಾದರೆ, 'ಭಯ ಹುಟ್ಟಿಸುವಂತಹ ಬಹುಮತ' ನೀಡಿರುವ ಜನತೆಯ ನಿರೀಕ್ಷೆಗಳನ್ನು ಅವರ ಸರ್ಕಾರ ಎಷ್ಟರಮಟ್ಟಿಗೆ ಈಡೇರಿಸಿ ತೋರಿಸುತ್ತದೆಂಬುದು. ಈಗ ಎಲ್ಲೆಲ್ಲೂ *ಆಂ ಆದ್ಮಿಯ* ಡಿಂಡಿಮದ ಕನಸು ಕಾಣುತ್ತಿರುವ *ಆಂ ಆದ್ಮಿ* ಪಕ್ಷದ ಬೆಂಬಲಿಗರು ನಿಜವಾಗಿ ಎದುರು ನೋಡಬೇಕಾದ ಅಗ್ನಿ ಪರೀಕ್ಷೆ ಇದು. ಈ ಅಗ್ನಿ ಪರೀಕ್ಷೆಯಲ್ಲೂ ಕೇಜ್ರಿವಾಲ ನೇತೃತ್ವದ ತಂಡ ಯಶಸ್ವಿಯಾಗುವುದೆಂದು ಹಾರೈಸುತ್ತಾ ನಿಜವಾದ 'ಅಚ್ಚೇ ದಿನ'ಗಳಿಗಾಗಿ ಕಾಯೋಣ.

-ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಫೆಬ್ರುವರಿ ಸಂಚಿಕೆಯಲ್ಲಿ ನಮ್ಮ ಸಂವಿಧಾನ ಕುರಿತ ಲೇಖನಗಳು ತಜ್ಞ ಅನಿಸಿಕೆಯೊಂದಿಗೆ ಗಮನ ಸೆಳೆಯುತ್ತವೆ. ಭಾಷಾವಾರು ಪ್ರಾಂತ್ಯಗಳ ಮುನ್ನವೇ ಸಂವಿಧಾನ ಅಸ್ತಿತ್ವಕ್ಕೆ ಬಂದುದರಿಂದ ದೇಶ ಭಾಷೆಗಳ ಕುರಿತು ಅದರಲ್ಲಿ ರಕ್ಷೆ ಇಲ್ಲವಾಗಿದೆ. ಅಪವಾದಕ್ಕೆಂಬಂತೆ ೨೧ ಎ ಮತ್ತು ೩೫೦ ಎ ಕಲಂಗಳನ್ನು ಸೇರಿಸಿ ದೇಶಭಾಷೆಗಳಿಗೆ ಔದಾರ್ಯ ತೋರಿಸಲಾಗಿದೆಯಷ್ಟೆ. ಈ ಸಂವಿಧಾನದಲ್ಲಿ ಏನಿದ್ದರೂ ಹಿಂದಿ ಭಾಷೆಯನ್ನು ದೇಶದ ಮೇಲೆ ಹೇರಲು ಅವಕಾಶ ಕಲ್ಪಿಸಲಾಗಿದೆಯಷ್ಟೆ. ಈ ಗುರಿ ಕೈಗೂಡುವವರೆಗೆ ಇಂಗ್ಲಿಷನ್ನು ಸಂಪರ್ಕ ಭಾಷೆಯನ್ನಾಗಿ ಇಟ್ಟುಕೊಳ್ಳಬೇಕೆಂದಾಗಿದ್ದರೂ, ಇಂದು ಇಂಗ್ಲಿಷ್ ಇಡೀ ದೇಶದ ಮೇಲೆ ಸವಾರಿ ಮಾಡತೊಡಗಿರುವುದನ್ನು ನಾವು ಕಾಣಬಹುದು. ನ್ಯಾಯಾಂಗ ಇಂದು ಕಾರ್ಯಾಂಗ ಮತ್ತು ಶಾಸಕಾಂಗಗಳ ಮೇಲೆ ಸವಾರಿ ಮಾಡತೊಡಗಿದ್ದು ಕಾರ್ಯಾಂಗ-ಶಾಸಕಾಂಗಗಳು ಅದನ್ನು ಪ್ರತಿಭಟಿಸಲಾಗದಷ್ಟು ದುರ್ಬಲಗೊಂಡು ದೇಶ ಭಾಷೆಗಳ ಪರಿಸ್ಥಿತಿ ಇನ್ನಷ್ಟು ಹದಗೆಡುವಂತಾಗಿದೆ. ಇದನ್ನು ಸರಿ ದಾರಿಗೆ ತರಬಲ್ಲ ವ್ಯಕ್ತಿತ್ವದ ರಾಷ್ಟ್ರಾಧ್ಯಕ್ಷರೂ ಇಲ್ಲವಾಗಿ ಇಂದು ಸಂವಿಧಾನದ ಬಗ್ಗೆಯೇ ಭ್ರಮನಿರಸನವಾಗುವಂತಾಗಿದೆ. ಶಿಕ್ಷಣ ಹಕ್ಕು ಕಾಯ್ದೆಯಡಿ ಒಂದರಿಂದ ಎಂಟನೇ ತರಗತಿವರೆಗೆ ಪ್ರಾಥಮಿಕ ಶಿಕ್ಷಣವೆಂದು ಪರಿಗಣಿತವಾಗಿ ಆ ಹಂತದವರೆಗೂ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಘೋಷಿಸುವ ಧೈರ್ಯ ತೋರಿ ಕರ್ನಾಟಕ ಸರ್ಕಾರ ಇತರ ರಾಜ್ಯಗಳಿಗೆ ಮಾದರಿಯಾಗಬೇಕಿತ್ತು. ಆದರೀಗ ಸಾಹಿತ್ಯ ಪರಿಷತ್ತಿನ ಠರಾವು ಮತ್ತು ರಾಜ್ಯ ಸರ್ಕಾರದ ದೃಢ ನಿಲುವನ್ನೇ ನಂಬಿ ಕೂರಬೇಕಾಗಿದೆ!

ಇಸ್ಲಾಮಿ ಭಯೋತ್ಪಾದನೆ ಕುರಿತ 'ಸಾಹಸ ಹಾಗೂ ಹುತಾತ್ಮತೆ...' ಲೇಖನ ಸಾಮಾನ್ಯ ಮುಸ್ಲಿಮರಿಗೆ ತಲುಪಬೇಕು. ಈ ಕುರಿತು ನಮ್ಮ ಮುಸ್ಲಿಂ ಬುದ್ಧಿಜೀವಿ-ಲೇಖಕರು ಪ್ರಯತ್ನಿಸಬೇಕು. ರಾಚಪ್ಪ ಹಡಪದರನ್ನು ಕುರಿತ ಲೇಖನ ಆಪ್ತವಾಗಿದೆ.

ಪತ್ರಿಕೆ ಪ್ರಖರ ವೈಚಾರಿಕತೆಯೊಡನೆ ಹೊರಬರುತ್ತಿದ್ದು, ನೀವೇ ಹೇಳಿದಂತೆ, 'ಎಲ್ಲರೂ ಎಲ್ಲವನ್ನೂ ಕಳೆದುಕೊಳ್ಳುತ್ತಿರುವ' ಇಂದಿನ ಸಂದರ್ಭದಲ್ಲಿ 'ಹೊಸ ಮನುಷ್ಯ' ನಮಗೆಲ್ಲ ಒಂದು ಆಶಾಕಿರಣವಾಗಿ ಉಳಿಯಲಿ.

-ವೆಂಕಟೇಶ ಮಾಚಕನೂರ, ಧಾರವಾಡ

ನಮ್ಮ ರಾಜಕಾರಣ ಮತ್ತು ನ್ಯಾಯಾಂಗ ಇಂದು ಕೆಲಸ ಮಾಡುತ್ತಿರುವ ಪರಿ ನೋಡಿದರೆ, ಈ ದೇಶ ಏಕಾತ್ಮಕವಾಗಿದ್ದಷ್ಟು ಕಾಲವೂ ಯಾರಿಗೂ ಯಾವುದೇ ನ್ಯಾಯ ಸಿಗಲಾರದೆಂದು ದಿನೇ ದಿನೇ ಸಾಬೀತಾಗುತ್ತಿದೆ. ಐರೋಪ್ಯ ಒಕ್ಕೂಟದಂತೆ ಒಂದು ಮಹಾಸಂಘದ ಸ್ವರೂಪ ಪಡೆದರೆ ಮಾತ್ರ ಜನಸಾಮಾನ್ಯರಿಗೆ ಒಂದಿಷ್ಟಾದರೂ ಧ್ವನಿ ದೊರಕೀತು.

ರಕ್ಷಣೆ, ವಿದೇಶಾಂಗ ವ್ಯವಹಾರ, ಅಂತರರಾಜ್ಯ ವಿವಾದಗಳಂತಹ ಕೆಲವು ಖಾತೆಗಳ ಹೊರತಾಗಿ ಮಿಕ್ಕೆಲ್ಲ ಅಧಿಕಾರಗಳನ್ನೂ ರಾಜ್ಯಗಳಿಗೆ ನೀಡುವ ಒಕ್ಕೂಟ ವ್ಯವಸ್ಥೆ ಮಾತ್ರ ಗಾಂಧಿ ಕಂಡ ಜನಸಾಮಾನ್ಯನ ಭಾರತವನ್ನು ನಿರ್ಮಿಸೀತು. ಇದಕ್ಕಾಗಿ ನಾವೆಲ್ಲ ಇಂದು ದನಿ ಎತ್ತಬೇಕಿದೆ.

-ಎಂ.ಆರ್. ಮಲ್ಲಿಕಾರ್ಜುನ, ಮೈಸೂರು

ಮೋದಿಯವರ ನೀತಿ ಆಯೋಗದ ಚೌಕಟ್ಟಿನಲ್ಲಿ ರಾಜ್ಯಗಳ ಅಸ್ಮಿತೆಗೆ ಯಾವ ಮಹತ್ವವಿರುತ್ತದೆ? ಆಯೋಗವನ್ನು ಸಮತೋಲನಗೊಳಿಸಿ ಒಕ್ಕೂಟ ವ್ಯವಸ್ಥೆಯನ್ನು ಸದೃಢಗೊಳಿಸುವ ಬಗ್ಗೆ ಇಂದು ಆಲೋಚಿಸಬೇಕಿದೆ. ಅದು ಬಿಟ್ಟು ಕೇಂದ್ರ ಯೋಜನೆಗಳನ್ನು ನಿಮ್ಮ ಕಾರ್ಯಸೂಚಿ ಮಾಡಿಕೊಳ್ಳಿ ಎಂದರೆ ಅದು ಹೇಗೆ ವಿಕೇಂದ್ರೀಕರಣ ಆಗುತ್ತೆ?

-ಅಪೂರ್ವ ಡಿ'ಸಿಲ್ವ, ಚಾಮರಾಜನಗರ

ಕಳೆದೆರಡು ಸಂಚಿಕೆಗಳ ನಿಮ್ಮ ಸಂಪಾದಕೀಯಗಳು ಅದ್ಭುತವಾಗಿವೆ. ಫೆಬ್ರುವರಿ ಸಂಚಿಕೆಯಲ್ಲಿ ಇಂದಿರಾ ಕೃಷ್ಣಪ್ಪ ನಿರೂಪಿಸಿರುವ ತುಂಗಳ 'ಕಥೆ' ಓದಿ ರೋಮಾಂಚಿತನಾದೆ! 'ಹೊಸ ಮನುಷ್ಯ' ಇಂದಿನ ಸಂದರ್ಭದ ಬಹುಮುಖ್ಯ ಪತ್ರಿಕೆಯಾಗಿ ಒಡಮೂಡುತ್ತಿದೆ. ನಿಮಗೆ ಅಭಿನಂದನೆಗಳು.

-ಜಿ.ಕೆ. ಗೋವಿಂದರಾವ್, ಬೆಂಗಳೂರು

ಜನವರಿ ಸಂಚಿಕೆಯಲ್ಲಿ 'ಯುವ ಸಮಾಜವಾದಿ ಚಿಂತನೆ ವೇದಿಕೆ'ಯಲ್ಲಿ ಪ್ರಕಟವಾದ ಚರಿತಾರವರ "ದೊಡ್ಡೋಳಾಗೋದಂದ್ರೆ" ಬರಹ ಆಳವಾದ ಒಳನೋಟಗಳನ್ನೊಳಗೊಂಡಿದೆ. ಲೇಖಕಿ ಹೆಣ್ಣು-ಗಂಡಿನ ಸಂಕೀರ್ಣ ಸಂಬಂಧಗಳನ್ನು ಸರಳ ಶೈಲಿಯಲ್ಲಿ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ.

ಲೇಖಕಿ ಜಾನಪದ ಹಾಡುಗಾರ್ತಿ ದೇವದಾಸಿ ಅಜ್ಜಿಯನ್ನು ಸಂಧಿಸಲು ಹೊರಟ ಪ್ರಯಾಣದುದ್ದಕ್ಕೂ, ಗಂಡಸರ ಕುರಿತು ಅನುಭವಿಸಿದ ಪೂರ್ವಗ್ರಹಿತ ಭಯ ತಲ್ಲಣಗಳು ಮರು ಪ್ರಯಾಣದಲ್ಲಿ ಮಾಯವಾಗಿ ಅಕ್ಕಪಕ್ಕದ ಗಂಡಸರಾರು ಕಾಣದಂತಾದ ಕ್ರಿಯೆಯಲ್ಲಿ ಪರಿಹಾರ ಸೂಚಿಸಿದಂತಿದೆ. ದೇವದಾಸಿಯಾಗಿದ್ದ ಅಜ್ಜಿ, ತನ್ನೆಲ್ಲ ನೋವು, ಸಂಕಟ, ಸಿಟ್ಟುಗಳನ್ನು ಹದವಾಗಿಸಿ ಬಸಿದು ಎದೆಯ ಹಾಡಾಗಿಸಿಕೊಂಡು ಜೀವನವನ್ನು ಸಂಭ್ರಮಿಸುತ್ತಿರುವ ಪರಿಯನ್ನು ಕಂಡ ಲೇಖಕಿಗೆ ತನ್ನ 'ಸಂಕುಚಿತತೆ' ಅರಿವಾಗಿರುವುದನ್ನು ಗಮನಿಸಬಹುದು. ದೊಡ್ಡೋಳಾಗೋದಂದ್ರೆ, ದೈಹಿಕವಾಗಿ, ಬಾಹ್ಯವಾಗಿ ಮಾತ್ರವಲ್ಲ ಆಂತರಿಕವಾಗಿ ಜೀವನಾನುಭವಗಳ ಬೆಳಕಿನಲ್ಲಿ ವಿಸ್ತರಣೆಗೊಳ್ಳುತ್ತ, ನೋವು, ಸಂಕಟ ಭಯ, ತಲ್ಲಣಗಳನ್ನು ಇಲ್ಲವಾಗಿಸಿಕೊಳ್ಳುವುದು ಎಂಬುದು ಲೇಖಕಿ, ಅಜ್ಜಿಯಿಂದ ಪಡೆದ ಅರಿವು ಆಗಿದೆ.

ಪ್ರತಿ ಹಂತದಲ್ಲಿ ವಿಜ್ಞಾನಕ್ಕೆ ಸವಾಲೆಸೆಯುತ್ತಿರುವ ನಿಸರ್ಗಾಧಾರಿತ ಮಾನವ ಶರೀರಕ್ಕೆ ಆಧುನಿಕ ನಾಗರೀಕ ಸಮಾಜ ರೂಪಿಸಿರುವ, ಸ್ವಾತಂತ್ರ್ಯ, ಸಮಾನತೆಯ ಭಾಷೆ ಅರ್ಥವಾಗಲಾರದೇನೋ? ಇಂತಹ ಮೌಲಿಕ ಲೇಖನ ನೀಡಿರುವ ಲೇಖಕಿಗೆ ಧನ್ಯವಾದಗಳು.

-ಅಜ್ಜಪ್ಪ ಬಿರಡಿ, ಗೋಕಾಕ.

ಕೆ.ಎಸ್. ಕಾರಂತರನ್ನು 'ನಮ್ಮ ಸಮಾಜವಾದಿಗಳು' ಅಂಕಣದಲ್ಲಿ ಪರಿಚಯಿಸಿದ್ದಕ್ಕಾಗಿ ವಂದನೆಗಳು. ತಮ್ಮ ಇಳಿ ವಯಸ್ಸಿನಲ್ಲಿ ತೀವ್ರ ಬೆನ್ನು ನೋವಿನಿಂದ ನರಳುತ್ತಿರುವ ಕಾರಂತರು ನೀವು ಕಳಿಸಿದ 'ಹೊಸ ಮನುಷ್ಯ'ದ ಎಲ್ಲ ಸಂಚಿಕೆಗಳನ್ನೂ ಕುತೂಹಲದಿಂದ ಓದುವ ಪ್ರಯತ್ನ ಮಾಡುತ್ತಿದ್ದಾರೆ.

ಈ ದುಷ್ಕಾಲದಲ್ಲೂ ನೀವು ಲೋಹಿಯಾ ಪ್ರತಿಷ್ಠಾನ, ಪತ್ರಿಕೆ ಇತ್ಯಾದಿಗಳ ಮೂಲಕ ಸಮಾಜವಾದಿ ಕೆಲಸ ಮಾಡುತ್ತಿರುವುದನ್ನು ನೋಡಿ ನಮಗೆ ಆಶ್ಚರ್ಯವೂ, ಸಂತೋಷವೂ ಆಗಿದೆ. ನಿಮಗೆ ಭಗವಂತ ಒಳ್ಳೆಯದನ್ನು ಮಾಡಲಿ.

-ನಿರ್ಮಲಾ ಕಾರಂತ, ಮುಂಬೈ

ನಮ್ಮ ಸಮಾಜವಾದಿಗಳು | ಬಹುಮುಖ ಪ್ರತಿಭೆಯ ಕಮಲಾದೇವಿ



ಭಾರತೀಯ ಸಮಾಜವಾದಿ ಆಂದೋಲನದ ಇತಿಹಾದಲ್ಲಿ ಎದ್ದು ಕಾಣುವ ಎರಡು ಧೀಮಂತ ಮಹಿಳೆಯರ ಚಿತ್ರಗಳೆಂದರೆ, ಒಂದು ಅರುಣಾ ಅಸೀಫ್ ಅಲಿಯವರದ್ದು, ಇನ್ನೊಂದು ಕಮಲಾದೇವಿ ಚಟ್ಟೋಪಾಧ್ಯಾಯರದ್ದು. ಇಬ್ಬರೂ ತಮ್ಮ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ಸಮಾಜವಾದಿ ಆಂದೋಲನದೊಂದಿಗೆ ಸಂಪರ್ಕ ಕಳೆದುಕೊಂಡರಾದರೂ, ನಂತರದ ಬದುಕಿನಲ್ಲೂ ಅವರು ಬೆಳಗಿದ್ದು ಸಮಾಜವಾದಿ ಮೌಲ್ಯಗಳನ್ನೇ ಎಂದು ಹೇಳಬಹುದು. ಅದೇನೇ ಇರಲಿ, ಈ ಇಬ್ಬರು ಮಹಿಳಾ ಸಮಾಜವಾದಿಗಳಲ್ಲಿ ನಮಗೆ ಹೆಚ್ಚು ಮುಖ್ಯವೆನಿಸುವವರು ಕಮಲಾದೇವಿಯವರು. ಏಕೆಂದರೆ, ಅವರು ಕನ್ನಡಿಗರು. ಅದಕ್ಕೂ ಮುಖ್ಯವಾಗಿ, ಭಾರತೀಯ ಸಮಾಜವಾದಿ ಆಂದೋಲನದ ಆರಂಭದ ದಿನಗಳಲ್ಲೇ ಜಯಪ್ರಕಾಶ್ ನಾರಾಯಣರ ಮಾರ್ಗದರ್ಶನದಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಆಂದೋಲನ ಮತ್ತು ಪಕ್ಷವನ್ನು ಕಟ್ಟಲು ಶ್ರಮಿಸಿದವರು. ಕನ್ನಡದ ಮೊದಲ ಸಮಾಜವಾದಿ ಪತ್ರಿಕೆ 'ಜಾಗೃತಿ'ಯ ಅಡಿಗಲ್ಲು ಹಾಕಿದವರು.

ಮಂಗಳೂರಿನ ಪ್ರತಿಷ್ಠಿತ ಶ್ರೀಮಂತ ಸಾರಸ್ವತ ಕುಟುಂಬದಲ್ಲಿ ಜನಿಸಿದ(೧೯೦೩) ಕಮಲಾದೇವಿ, ಆ ಕಾಲಕ್ಕೇ ಆಧುನಿಕ ಮನೋಭಾವವನ್ನು ರೂಢಿಸಿಕೊಂಡಿದ್ದ ತಾಯಿ ಗಿರಿಜಾಬಾಯಿ ಮತ್ತು ವಿಧವೆಯಾಗಿದ್ದೂ ದಿಟ್ಟೆಯಾಗಿ ಸಾರ್ವಜನಿಕ ಜೀವನದಲ್ಲಿ ತುಂಬು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ ಅಜ್ಜಿಯ ಬದುಕಿನಿಂದ ಆಳವಾಗಿ ಪ್ರಭಾವಿತರಾಗಿದ್ದರು. ಆಗ ಮಂಗಳೂರಿಗೆ ಆಗಮಿಸಿದ್ದ ಅನಿಬೆಸೆಂಟ್, ಗಾಂಧೀಜಿಯವರ ಭೇಟಿಯಿಂದ ಸ್ವಾತಂತ್ರ್ಯದ ಬಯಕೆ, ರಾಜಕೀಯ ಚಿಂತನೆಗಳು ಗರಿಗೆದರಿದ್ದವು. ತನ್ನ ಕುಟುಂದಲ್ಲೇ ಆದ ಮಹಿಳೆಯರ ಮೇಲಿನ ದೌರ್ಜನ್ಯ, ಆರ್ಥಿಕ ಸಂಕಷ್ಟ, ಕೌಟುಂಬಿಕ ಸಮಸ್ಯೆಗಳಿಂದ ಮಹಿಳೆಯರ ಪರ ಹೋರಾಡುವ ಕೆಚ್ಚು ಮೂಡಿತು. ಹಾಗಾಗಿಯೇ ಅವರು ಬಾಲ್ಯ ವಿವಾಹಕ್ಕೆ ತುತ್ತಾಗಿ, ನಂತರ ಬಾಲ ವಿಧವೆಯಾಗಿ, ಅದರಿಂದ ವಿಚಲಿತರಾಗದೆ ಸ್ವಲ್ಪಕಾಲ ರಂಗನಟಿ ಮತ್ತು ಮೂಕಿ ಚಲನಚಿತ್ರ ನಟಿಯಾಗಿ ತಮ್ಮ ಬದುಕನ್ನು ಪುನರ್ಸಂಘಟಿಸಿಕೊಂಡು, ಆನಂತರ ಉನ್ನತ ವಿದ್ಯಾಭ್ಯಾಸಕ್ಕೆಂದು ಮದ್ರಾಸ್‌ಗೆ ತರಳಿ ಅಲ್ಲಿ ವಿಚಿತ್ರ ಪ್ರತಿಭೆಯ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಪ್ರೀತಿಸಿ ಮದುವೆಯಾಗಿ, ಆ ವಿವಾಹದಲ್ಲೂ ನೆಮ್ಮದಿ ಕಾಣದೆ ಮುಂದೆ ಗಾಂಧಿ ಪ್ರಭಾವದಲ್ಲಿ ಹೊಸ ಬದುಕನ್ನು ಕಟ್ಟಿಕೊಳ್ಳುವವರೆಗಿನ ಜೀವನ ವೃತ್ತಾಂತದ ಹಲವು ಏಳುಬೀಳುಗಳನ್ನು ಸಹಿಸಿ ಯಶಸ್ವಿಯಾಗಲು ಸಾಧ್ಯವಾಯಿತು.

೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದೇ ಕಮಲಾದೇವಿಯವರು ಗಾಂಧೀಜಿ ನಡೆಸಿದ್ದ ರಾಷ್ಟ್ರೀಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೇಪಣೆಯಾಯಿತು. ೧೯೩೦ ಜನವರಿ ೨೬ ಪೂರ್ಣ ಸ್ವರಾಜ್ಯ ದಿನದಂದು ಮುಂಬೈನ ಆಜಾದ್ ಮೈದಾನದಲ್ಲಿ ನಡೆದ ಗಲಭೆಯಲ್ಲಿ ಕೈಯಲ್ಲಿ ರಕ್ತ ಸುರಿಯುತ್ತಿದ್ದರೂ ಲೆಕ್ಕಿಸದೇ ತ್ರಿವರ್ಣ ಧ್ವಜದ ಗೌರವವನ್ನು ಕಾಪಾಡಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರನ್ನು ದೂರವಿಟ್ಟ ಗಾಂಧೀಜಿಯವರೊಂದಿಗೆ ವಾದ ಮಾಡಿ ಮಹಿಳೆಯರೂ ಈ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಟ್ಟರು. ರಾಷ್ಟ್ರೀಯ ಚಳುವಳಿಯಲ್ಲಿ ನಾಲ್ಕು ಬಾರಿ ಜೈಲು ಸೇರುವಂತಾದ ಕಮಲಾದೇವಿ, ಬ್ರಿಟಿಷ್ ಪ್ರಭುತ್ವದ ಮೊದಲ ಮಹಿಳಾ ರಾಜಕೀಯ ಕೈದಿ ಎನಿಸಿಕೊಂಡರು. ಹಾಗೇ ಜೈಲಿನಲ್ಲಿ ತೀವ್ರ ಅನಾರೋಗ್ಯಕ್ಕೂ ತುತ್ತಾದರು.

೧೯೩೪ ಸೆಪ್ಟೆಂಬರ್ ತಿಂಗಳಲ್ಲಿ ಕಮಲಾದೇವಿಯವರು ಬಂಧಮುಕ್ತರಾದರು. ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಕಾಂಗ್ರೆಸ್‌ನೊಳಗೇ ಸ್ಥಾಪಿತವಾದ ಸಮಾಜವಾದಿ ಕಾಂಗ್ರೆಸ್ ಪಕ್ಷ ಅವರನ್ನು ಆಕರ್ಷಿಸಿತು. ಇದು ಗಾಂಧೀಜಿಯೊಂದಿಗೆ ಮಹಿಳೆಯರು ಮತ್ತು ಇತರೆ ಶೋಷಿತ ವರ್ಗದವರ ಉನ್ನತಿಗೆ ಅವಶ್ಯಕವಾದ ವಿಶೇಷ ರಾಜಕೀಯ ಕಾರ್ಯಕ್ರಮ ಮತ್ತು ಮಾರ್ಗಗಳ ಬಗ್ಗೆ ತಾತ್ವಿಕವಾಗಿ ಜಗಳವಾಡಲು ಒಂದು ವೇದಿಕೆ ಸಿಕ್ಕಂತಾಯಿತು. ಕಮಲಾರ ಸ್ವತಂತ್ರ ನಡೆನುಡಿಗಳನ್ನು 'ಅತಿ' ಎಂದು ಟೀಕಿಸುತ್ತಿದ್ದ ಗಾಂಧೀಜಿಗೆ ಸೂಕ್ತ ಉತ್ತರ ಕೊಡಲು ಜೆಪಿ, ಲೋಹಿಯಾ, ಪಟವರ್ಧನ್, ಮುಂತಾದ ಪ್ರಖರ ಯುವ ಚಿಂತಕರ ಪಡೆಯ ಬೆಂಬಲವೂ ಅವರಿಗೆ ಇಲ್ಲಿ ದೊರಕಿ ಅವರ ವ್ಯಕ್ತಿತ್ವ ಇನ್ನಷ್ಟು ಸಮೃದ್ಧವಾಗಲು ಸಹಾಯಕವಾಯಿತು. ಅವರು ಈ ಸಂಘಟನೆಯಲ್ಲಿ ತಮ್ಮ ವಿಚಾರಶೀಲತೆ, ದಿಟ್ಟತನ ಮತ್ತು ಪರಿಶ್ರಮಗಳಿಂದ ಎಷ್ಟು ಕ್ಷಿಪ್ರ ಗತಿಯಲ್ಲಿ ತಮ್ಮ ಛಾಪನ್ನು ಮೂಡಿಸಿದರೆಂದರೆ, ಅವರು ೧೯೩೬ರಲ್ಲಿ ಸಮಾಜವಾದಿಗಳ ಅಧಿವೇಶನದ ಅಧ್ಯಕ್ಷತೆ ವಹಿಸಲು ಅವರನ್ನು ಆರಿಸಲಾಯಿತು.

ಈ ಮಧ್ಯೆ ಮಗನ ಶಿಕ್ಷಣದ ಸಂಬಂಧವಾಗಿ ವಿದೇಶಕ್ಕೆ ತೆರಳಿದ್ದ ಕಮಲಾರವರು ೧೯೪೧ರಲ್ಲಿ ತಿರುಗಿ ಬಂದು ಮತ್ತೆ ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ೧೯೪೨ರ 'ಭಾರತ ಬಿಟ್ಟು ತೊಲಗಿ' ಆಂದೋಲನದಲ್ಲಿ ಸಮಾಜವಾದಿಗಳು ನಡೆಸಿದ ರೋಚಕ ಭೂಗತ ಹೋರಾಟದಲ್ಲಿ ಕಮಲಾರವರ ಪಾತ್ರವೂ ಬಹು ದೊಡ್ಡದು. ನಂತರ ದೇಶದ ವಿವಿಧೆಡೆ ಸಮಾಜವಾದಿ ಆಂದೋಲನವನ್ನು ಸಂಘಟಿಸುವಲ್ಲಿ ತೊಡಗಿಕೊಂಡ ಅವರು ಕರ್ನಾಟಕದಲ್ಲಿ ಕೆ.ಕೆ.ಶೆಟ್ಟಿ, ಅಮ್ಮೆಂಬಳ ಬಾಳಪ್ಪ, ಆನಂದ, ಕೆ.ಎಸ್. ಕಾರಂತ, ಉಮಾಬಾಯಿ ಕುಂದಾಪುರ, ಸೋಗಾಲ ನಾಗಭೂಷಣ, ಭಾಸು ಕೃಷ್ಣಮೂರ್ತಿ, ಖಾದ್ರಿ ಶಾಮಣ್ಣ ಮುಂತಾದವರನ್ನೊಳಗೊಂಡ ಯುವಪಡೆಯೊಂದನ್ನು ನಿರ್ಮಿಸಿ, ಮಂಗಳೂರು, ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ಸಮಾಜವಾದಿ ಪಕ್ಷದ ಚಟುವಟಿಕೆಗಳು ಆರಂಭವಾಗಲು ಕಾರಣರಾದರು.

ನಂತರ ಸ್ವಾತಂತ್ರ್ಯೋದಯ– ರಾಷ್ಟ್ರವಿಭಜನೆಯ ಸಂದರ್ಭದಲ್ಲಿ ಭುಗಿಲೆದ್ದ ಕೋಮುಗಲಭೆಗಳು ದೇಶದ ಅನೇಕ ಕಡೆ ನಿರಾಶ್ರಿತರ ಬೃಹತ್ ಸಮಸ್ಯೆಯನ್ನು ಸೃಷ್ಟಿಸಿದಾಗ ಕಮಲಾದೇವಿಯವರು ದೆಹಲಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಸಿದ ಪರಿಹಾರ ಮತ್ತು ಪುನರ್ವಸತಿ ಕೆಲಸ ಗಾಂಧೀಜಿಯವರ ಗಮನ ಸೆಳೆಯಿತು. ಅವರ ಸಹಾಯ ಮತ್ತು ಪ್ರೋತ್ಸಾಹಗಳಿಂದ ಕಮಲಾದೇವಿಯವರು ತಾವು ಈಗಾಗಲೇ ಸಂದರ್ಶಿಸಿದ್ದ ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಮತ್ತು ಚೀನಾಗಳಲ್ಲಿ ಸಹಕಾರೀ ತತ್ವದ ಮೇಲೆ ನಡೆಯುತ್ತಿದ್ದ ಒಕ್ಕಲುತನ, ಕೈಗಾರಿಕೋದ್ಯಮಗಳ ಮಾದರಿಗಳನ್ನು ಇಲ್ಲಿಯೂ ಅಳವಡಿಸುವ ಪ್ರಯತ್ನ ಮಾಡಿದರು. ಭಾರತೀಯ ಸಹಕಾರ ಸಂಘವು ಜನ್ಮತಾಳಿತು. ಇಂದಿನ ಫರೀದಾಬಾದ್ ನಗರ ಕಮಲಾರ ಇಂತಹ ಪರಿಶ್ರಮದ ಫಲವೇ ಆಗಿದೆ. ಆ ದಿನಗಳಲ್ಲಿ ಹೀಗೆ ರಾಜಕಾರಣಕ್ಕಿಂತ ಹೆಚ್ಚಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಂಡು ಅದರಲ್ಲಿಯೇ ತೃಪ್ತಿ ಪಡೆಯಲಾರಂಭಿಸಿದ ಕಮಲಾರನ್ನು ಗಾಂಧೀಜಿಯ ಆಕಸ್ಮಿಕ ಸಾವು ಕಂಗೆಡಿಸಿತು. ರಾಜಕಾರಣದಲ್ಲಿ ಅವರ ಆಸಕ್ತಿ ಕಡಿಮೆಯಾಗತೊಡಗಿತು. ಕಾಂಗ್ರೆಸ್ ಕೂಡ ಅಧಿಕಾರ ರಾಜಕಾರಣದಲ್ಲಿ ಮುಳುಗಿ ಭ್ರಷ್ಟವಾಗತೊಡಗಿತ್ತು. ಸಮಾಜವಾದಿಗಳು ಕಾಂಗ್ರೆಸ್ಸಿನಿಂದ ಹೊರಬಂದ ಮೇಲೂ ಒಗ್ಗಟ್ಟಾಗಿರಲಾರದೆ ಕಲಹಗಳು ಆರಂಭವಾಗಿದ್ದವು. ಇದರಿಂದ ಬೇಸತ್ತ ಅವರು ೫೦ರ ದಶಕದ ಕೊನೆಯ ಹೊತ್ತಿಗೆ ರಾಜಕಾರಣಕ್ಕೆ ಸಂಪೂರ್ಣ ವಿದಾಯ ಹೇಳಿದರು.

ಆನಂತರ ಅವರು ಆಸಕ್ತಿ ವಹಿಸಿದ್ದು ನಮ್ಮ ಪಾರಂಪರಿಕ ಮತ್ತು ಜನಪದ ಕಲೆ ಮತ್ತು ಕರಕೌಶಲ್ಯಗಳ ಅಧ್ಯಯನ ಮತ್ತು ಸಂರಕ್ಷಣೆಯ ಕಡೆಗೆ. ಎಪ್ಪತ್ತಾರರ ವಯಸ್ಸಿನಲ್ಲೂ ಅವರು ದೇಶದ ಮೂಲೆಮೂಲೆಗಳ ಹಳ್ಳಿಹಳ್ಳಿಗಳನ್ನು ತಿರುಗಿ ಅಳಿವಿನಂಚಿನಲ್ಲಿದ್ದ ಭಾರತೀಯ ಕರಕೌಶಲ್ಯಗಳ ಸಂರಕ್ಷಣೆಯ ಸಾಹಸ ಕೈಗೊಂಡರು. ಇದರ ಫಲವಾಗಿ ಭಾರತ ಸರ್ಕಾರದ ಆಶ್ರಯದಲ್ಲಿ ಭಾರತೀಯ ಕರಕುಶಲ ಅಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬಂದು ಅವರು ಅಧ್ಯಕ್ಷರಾದರು. ಮಹಾಬಲಿಪುರದ ಶಿಲ್ಪಕಲಾ ಕಾಲೇಜು ಸ್ಥಾಪನೆ ಇವರ ಒಂದು ದೊಡ್ಡ ಸಾಧನೆ. ಇದಲ್ಲದೆ ಇಂದು ಕಾಳಹಸ್ತಿಯ ಕಲಂಕಾರಿ ಕಲೆ, ನಂದ್ರಾ, ಪೂಚಂಪಲ್ಲಿ ಸೀರೆಗಳು, ಜೈಪುರದ ನೀಲಿ ಮಡಕೆಗಳು, ತೋಡಾ ಕಸೂತಿ ಕಲೆಗಳೆಲ್ಲ ನಮ್ಮ ಮಧ್ಯೆ ಜೀವಂತವಾಗಿದ್ದರೆ ಅದರ ಹಿಂದೆ ಇರುವುದು ಕಮಲಾದೇವಿಯವರ ಪರಿಶ್ರಮ. ಹಾಗೇ ದೆಹಲಿಯ ರಾಷ್ಟ್ರೀಯ ನಾಟಕಶಾಲೆಯ ಸ್ಥಾಪನೆಗೂ ಇವರೇ ಸ್ಫೂರ್ತಿ.

ಆಧುನಿಕ ಭಾರತದ ಮಹಿಳಾ ಇತಿಹಾಸದಲ್ಲಿ ತಮ್ಮ ಬಹುಮುಖ ಪ್ರತಿಭೆ ಮತ್ತು ಸೇವೆಯ ಮೂಲಕ ಅನುಪಮ ಸಾಧಕಿ ಎನಿಸಿದ ಈ ಕನ್ನಡಿತಿ ತಮ್ಮ ೮೫ನೇ ವಯಸ್ಸಿನಲ್ಲಿ (೧೯೮೮) ನಮ್ಮನ್ನಗಲಿ ಹೋದರು.

(ಸಂಗ್ರಹ ಲೇಖನ: **ಮಂಜುಳಾ ಎಂ. ರಾಜು**)

ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೨೯

–ಇಂದಿರಾ ಬಿ. ಕೃಷ್ಣಪ್ಪ

ರೈತ ಸಂಘ v/s ದಸಂಸ

ಕರ್ನಾಟಕ ರಾಜ್ಯ ರೈತಸಂಘವು, ಪ್ರಗತಿಪರ ಚಿಂತನೆಗಳ ತವರೆಂದೇ ಹೆಸರಾದ ಶಿವಮೊಗ್ಗಾ ಜಿಲ್ಲೆಯಲ್ಲಿ, ೧೯೮೦ರಲ್ಲಿಯೇ ಆರಂಭವಾಗಿತ್ತು. ರಾಜ್ಯ ರೈತಸಂಘವು, ನೇಗಿಲಯೋಗಿಯ ಸಮಸ್ಯೆಗಳನ್ನೆತ್ತಿಕೊಂಡು ಹೋರಾಡುತ್ತಾ ಅಲ್ಪಾವಧಿಯಲ್ಲಿಯೇ, ರಾಜ್ಯ ವ್ಯಾಪಿ ಸಂಘಟನೆಯನ್ನು ವಿಸ್ತರಿಸಿಕೊಂಡಿತ್ತು. ದಸಂಸದ ಮುಖಂಡರಾದ, ಪ್ರೊ. ಬಿ. ಕೃಷ್ಣಪ್ಪ, ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಮುಂತಾದವರು ಮತ್ತು ರೈತ ಚಳುವಳಿಯ ನಾಯಕರಾದ ಪ್ರೊ. ಎಂ.ಡಿ. ನಂಜುಂಡ ಸ್ವಾಮಿ, ಎನ್. ಡಿ. ಸುಂದರೇಶ್, ಕಡಿದಾಳು ಶಾಮಣ್ಣ, ತೇಜಸ್ವಿ ಮುಂತಾದವರು ಈ ಎರಡೂ ಚಳುವಳಿಯ ಪೂರ್ವದಿಂದಲೂ ಅಂದರೆ, ಸಮಾಜವಾದಿ ಯುವಜನಸಭಾ ಕಟ್ಟುವಲ್ಲಿ ಒಟ್ಟಾಗಿ ದುಡಿದವರು. ಆದಾಗ್ಯೂ ಈ ಎರಡು ಚಳುವಳಿಯ ನಾಯಕರು ಈಗ ಪರಸ್ಪರ ಭಿನ್ನ ಸೈದ್ಧಾಂತಿಕ ನಿಲುವನ್ನು ತಳೆದಿದ್ದರು. ಹಾಗಿದ್ದಾಗ್ಯೂ ಕರ್ನಾಟಕದಲ್ಲಿ ರಾಜಕೀಯ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆ ಹಾಗೂ ಅಭಿವೃದ್ಧಿಯಲ್ಲಿ ಈ ಚಳುವಳಿಗಳು ಪ್ರಧಾನ ಪಾತ್ರ ವಹಿಸಿವೆ. ಆದರೆ ಚಳುವಳಿಯ ಮಾರ್ಗದಲ್ಲಿ ಅನೇಕ ಘರ್ಷಣೆಗಳನ್ನು ಪರಸ್ಪರ ಎದುರಿಸಿವೆ.

ಜಾತಿವಿನಾಶವನ್ನೇ ಪ್ರಧಾನವಾಗಿಟ್ಟುಕೊಂಡು, ಜಾತಿವಿನಾಶ ಸಮ್ಮೇಳನವನ್ನು ಆಯೋಜಿಸಿದ ಸಮಾಜವಾದಿ ಯುವಜನ ಸಭಾದ ನಾಯಕ ನಂಜುಂಡಸ್ವಾಮಿಯವರು ರೈತ ಸಂಘದ ಅಂಗಳದಲ್ಲಿ ಜಾತಿ ಪ್ರಶ್ನೆಯನ್ನೇ ಎತ್ತಲಿಲ್ಲ. ರೈತ ಸಂಘದ ಜಿಲ್ಲಾ-ತಾಲ್ಲೂಕು ಮಟ್ಟದ ಪದಾಧಿಕಾರಿಗಳು ಬಹುಪಾಲು ಗೌಡ-ಲಿಂಗಾಯಿತ ಸಮುದಾಯಕ್ಕೆ ಸೇರಿದ್ದು, ಅವರ ಹೊಲಗಳಲ್ಲಿ ಜೀತ-ಕೂಲಿ-ಕೆಲಸ ಮಾಡುವವರು ದಲಿತರಾಗಿದ್ದಾರೆ. ಹೀಗೆ, ಶೋಷಣೆಗೈಯುವ ಸಮುದಾಯದ ಚಳುವಳಿಯಾಗಿ ರೈತ ಸಂಘವೂ, ಶೋಷಿತರ ಧ್ವನಿಯಾಗಿ ದಸಂಸವೂ ಇದೆ ಎಂದು ದಲಿತ ಚಳುವಳಿಯ ಕಾರ್ಯಕರ್ತರು ಭಾವಿಸತೊಡಗಿದ್ದರು. ಇಂಥಹ ನೆಲೆಯಲ್ಲಿ ರೈತರು ಎಸಗಿದ ಅನೇಕ ದೌರ್ಜನ್ಯ-ಅತ್ಯಾಚಾರ-ಕೊಲೆ ಪ್ರಕರಣಗಳು ದಸಂಸದ ಸಭೆಗಳಲ್ಲಿ ಚರ್ಚಿತವಾಗುತ್ತಿದ್ದವು. ದಸಂಸದ ರಾಜ್ಯ ಸಮಿತಿ ಸಭೆಯಲ್ಲಿಯೂ, ರೈತ ಸಂಘ -ದಸಂಸ ಘರ್ಷಣೆ ಬಗ್ಗೆ ಚರ್ಚೆ ನಡೆಯಿತು. 'ಇಂಥಹ ತಪ್ಪುಗಳನ್ನು ತಿದ್ದಿಕೊಳ್ಳಿ ಎಂದು ರೈತರಿಗೆ ಎಚ್ಚರಿಕೆ ಕೊಡುವುದು ಸೂಕ್ತ. ಅವರು ತಿದ್ದಿಕೊಳ್ಳದಿದ್ದಲ್ಲಿ, ಉಳಿದ ಪ್ರಕರಣಗಳನ್ನು ನಿರ್ವಹಿಸಿದಂತೆ ನಿರ್ವಹಿಸಬೇಕೆಂದೂ, ಇದುವರೆಗೂ ರೈತ ಸಂಘ ನಡೆಸಿರುವ ಹಲ್ಲೆ-ದಬ್ಬಾಳಿಕೆ ಪ್ರಕರಣಗಳನ್ನು, ರೈತ ಸಂಘದ ಪ್ರಮುಖರಾದ ಹೆಚ್. ಎಸ್. ರುದ್ರಪ್ಪ ಹಾಗೂ ಎಂ.ಡಿ. ನಂಜುಂಡಸ್ವಾಮಿ ಅವರನ್ನು, ಆಯಾ ಶಾಖೆಯವರು ಭೇಟಿ ಮಾಡಿ ಪರಿಸ್ಥಿತಿಯ ಗಾಂಭೀರ್ಯವನ್ನು ಅವರಿಗೆ ಹೇಳಿ, ರೈತ ಸಂಘದೊಳಗಿನ ಕೆಲ ದುಷ್ಟ ಶಕ್ತಿಗಳನ್ನು ನಿಯಂತ್ರಿಸಲು ಅದಕ್ಕೊಂದು ಅವಕಾಶಕೊಡತಕ್ಕದ್ದು' ಎಂದು ನಿರ್ಣಯವಾಗಿ, ಅದರಂತೆ ಪತ್ರ ಬರೆಯುವಿಕೆ, ಭೇಟಿಗಳು ನಡೆದವು.

ಇದೇ ಸಂದರ್ಭದಲ್ಲಿ ದೇವನೂರು ಮಹಾದೇವರವರು 'ಪಂಚಮ' ಪತ್ರಿಕೆಯಲ್ಲಿ "ದಲಿತರನ್ನು ಕೊಲ್ಲುತ್ತಾ, ಸಾವಿನ ಕಡೆಗೆ ನಡೆಯುತ್ತಿರುವ ರೈತ ಸಂಘ" ಎಂಬ ಶೀರ್ಷಿಕೆಯಡಿಯಲ್ಲಿ, ಹಾಸನ ಜಿಲ್ಲಾದ್ಯಂತ ಭೂ ಮಾಲೀಕರಿಂದಾದ ದೌರ್ಜನ್ಯಗಳು ಮತ್ತು ದಲಿತ ಪುಟ್ಟಯ್ಯನ ಕೊಲೆಯ ವಾಸ್ತವ ಚಿತ್ರಣವುಳ್ಳ ಲೇಖನವನ್ನೂ ಬರೆದರು. ಇದಕ್ಕೂ ಮುನ್ನ ಭದ್ರಾವತಿ ತಾಲ್ಲೂಕು ನಾಗಸಮುದ್ರದಲ್ಲಿ ನಡೆದ ರೈತರ ಮೇಲಿನ ಗೋಲೀಬಾರ್ ಪ್ರಕರಣದಲ್ಲಿ, ತನಿಖಾ ಸಮಿತಿಯವರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಸತ್ಯದರ್ಶನವನ್ನು ಪ್ರೊ.ಬಿ.ಕೃಷ್ಣಪ್ಪ 'ಪಂಚಮ'ಕ್ಕಾಗಿ ಬರೆದಿದ್ದರು. ಇದರ ಜೊತೆಗೆ ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ರೈತ ಮುಖಂಡರೊಂದಿಗೆ ನಡೆದ ಮಾತುಕತೆಯ ಪರಿಣಾಮವಾಗಿ ದಸಂಸ ನಡೆಸುತ್ತಿದ್ದ ಡಾ.ಅಂಬೇಡ್ಕರ್ ದಿನಾಚರಣೆಗಳಲ್ಲಿ ಆಗಿನ ರೈತಸಂಘದ ಉಪಾಧ್ಯಕ್ಷರಾದ ಹೆಚ್. ಶ್ರೀನಿವಾಸ್‌ರವರು ಭಾಗವಹಿಸುತ್ತಿದ್ದರು. ಚಿಕ್ಕಮಗಳೂರು ಜಿಲ್ಲೆ ದಸಂಸ ವತಿಯಿಂದ, ಆಗಿನ ಜಿಲ್ಲಾ ಸಂಚಾಲಕ ದಿ. ಎಂ.ಡಿ. ಗಂಗಯ್ಯನವರ ಅಧ್ಯಕ್ಷತೆಯಲ್ಲಿ ದಲಿತ ಮತ್ತು ರೈತ ಚಳುವಳಿಯ ಪಂಚಮ ವಿಶೇಷಾಂಕವನ್ನು ಜಿಲ್ಲಾ ರೈತ ಸಂಘದ ಉಪಾಧ್ಯಕ್ಷರಾದ, ಹೆಚ್. ಎಸ್. ಮಂಜಪ್ಪನವರು ಬಿಡುಗಡೆಗೊಳಿಸಿದ್ದರು. ಇದರಲ್ಲಿ ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಷಣ ಅವರು ಬಿ.ಕೆ.ಯವರೊಂದಿಗೆ



ಕಾಲೇಜಿನ ಪ್ರಾಂಶುಪಾಲರಾಗಿ ಎನ್.ಸಿ.ಸಿ. ಸಮಾರಂಭವೊಂದರಲ್ಲಿ ಪ್ರೊ. ಬಿ. ಕೃಷ್ಣಪ್ಪ

ಈ ಎರಡೂ ಸಂಘಟನೆಗಳ ನಡುವಿದ್ದ ಹಲವಾರು ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ವಿಚಾರಗಳನ್ನು ಕುರಿತು ಚರ್ಚಿಸಿದ್ದಾರೆ.

ರೈತ ಸಂಘದ ಮುಖಂಡರಾದ ಕಡಿದಾಳು ಶಾಮಣ್ಣ- ಶ್ರೀದೇವಿ ಹಾಗೂ ಎನ್.ಡಿ. ಸುಂದರೇಶ್-ಶೋಭಾ ಇವರ ಮನೆಗಳಿಗೆ ನಾನು ಕೃಷ್ಣಪ್ಪ ಒಂದೆರಡು ಬಾರಿ ಹೋಗಿದ್ದೇವೆ; ತಂಗಿದ್ದೇವೆ. ಹತ್ತಾರು ವಿಚಾರಗಳನ್ನು ಚರ್ಚಿಸಿದ್ದೇವೆ. ಶಾಮಣ್ಣನವರ ಸರೋದ್‌ವಾದನವನ್ನು ಕೇಳುತ್ತಾ, ಶ್ರೀದೇವಿಯವರ ಕೈ ಅಡುಗೆ ರುಚಿ ಸವಿದಿದ್ದೇವೆ. ಗದ್ದೆ ಸುತ್ತಾಡಿದ್ದೇವೆ. ಶಾಮಣ್ಣನವರು ಶಿವಮೊಗ್ಗದಲ್ಲಿ ನಾನಿದ್ದ ಕಚೇರಿಗೆ ಬಂದಾಗೊಮ್ಮೆ ನನ್ನ ಹಲವಾರು ಭಾವಭಂಗಿಯ ಫೋಟೋಗಳನ್ನು ಕ್ಲಿಕ್ಕಿಸಿ, ಪ್ರಿಂಟ್ ಹಾಕಿಸಿ ಕಳುಹಿಸಿದ್ದಾರೆ. ಅವುಗಳು, ಅವರ ನೆನಪಿನಲ್ಲಿ ಈಗಲೂ ನನ್ನ ಬಳಿ ಇವೆ. ಸಂಘಟನೆಯ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ನಮ್ಮ ಕೌಟುಂಬಿಕ ಸ್ನೇಹ -ಸಂಪರ್ಕಕ್ಕೆ ಎಂದೂ ಅಡ್ಡಿಯಾಗಿಲ್ಲ.

ತದನಂತರದಲ್ಲಿ ಮೈಸೂರು ವಿಶ್ವವಿದ್ಯಾಲಯದ ದಲಿತ ವಿದ್ಯಾರ್ಥಿ ಒಕ್ಕೂಟದ ಉದ್ಘಟನಾ ಸಮಾರಂಭದಲ್ಲಿ ಶ್ರೀ ಚದುರಂಗರವರ ಅಧ್ಯಕ್ಷತೆಯಲ್ಲಿ 'ದಲಿತ ಮತ್ತು ರೈತ ಚಳುವಳಿ' ಎಂಬ ವಿಚಾರ ಸಂಕಿರಣಕ್ಕೆ ಎರಡೂ ಚಳುವಳಿಗಳ ಪ್ರಮುಖರು ಮತ್ತು ಹಿತೈಷಿಗಳನ್ನು ಆಹ್ವಾನಿಸಿ, ಈ ಎರಡೂ ಚಳುವಳಿಗಳ ನಡುವಣ ವೈರುಧ್ಯ ಮತ್ತು ತಪ್ಪು ತಿಳುವಳಿಕೆಗಳನ್ನು ಕಡಿಮೆ ಮಾಡಿ ಪರಸ್ಪರ ಹತ್ತಿರಕ್ಕೆ ತರುವ ಪ್ರಯತ್ನ ಮಾಡಲಾಯಿತು.

ಅಲ್ಲಿಂದಾಚೆ ಎರಡೂ ಚಳುವಳಿಗಳು ಪರಸ್ಪರ ಕೈಹಿಡಿದು ನಡದದ್ದೇನು ಇಲ್ಲ. ಆದರೆ ಚಳುವಳಿಯ ಹಾದಿಯಲ್ಲಿ ಘರ್ಷಣೆಗಳು ಕಡಿಮೆಯಾಗಿವೆ. ಚಳುವಳಿಗಳ ನಡುವಿನ ವೈರತ್ವದ ಕಾವು ತಗ್ಗಿತು. ಪರಸ್ಪರ ಮುಖಾಮುಖಿಯಾಗುವ, ಸ್ಥಳೀಯ ಸಮಸ್ಯೆಗಳಲ್ಲಿ, ಬೆಂಬಲಿಸುವ ಕಾರ್ಯಗಳಾದವು. ಚಿಕ್ಕಮಗಳೂರಿನ ರೈತ ಸಮಾವೇಶಕ್ಕೆ ಗ್ರಾಮಾಂತರ ಪ್ರದೇಶದಿಂದ ಬರುತ್ತಿದ್ದ ರೈತರನ್ನು ವಾಹನಗಳಿಂದ ಎಳೆದು ಹಲ್ಲೆ ನಡೆಸಿದ್ದ ಪೋಲೀಸ್ ದೌರ್ಜನ್ಯದ ವಿರುದ್ಧ ಪ್ರೊ.ಕೃಷ್ಣಪ್ಪ ಖಂಡನಾ ಪತ್ರವನ್ನು ಸರ್ಕಾರಕ್ಕೆ ಕಳುಹಿಸಿ ಹಲ್ಲೆ ನಡೆಸಿದ ಪೋಲೀಸರ ಮೇಲೆ ಉಗ್ರಕ್ರಮ ಕೈಗೊಳ್ಳುವುದೂ, ನೊಂದವರಿಗೆ ಪರಿಹಾರ, ಜಿಲ್ಲಾಧಿಕಾರಿ-ಜಿಲ್ಲಾವರಿಷ್ಠಾಧಿಕಾರಿಗಳ ವರ್ಗಾವಣೆ- ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟಿದ್ದರು ಎಂಬುದನ್ನು ಇಲ್ಲಿ ಸ್ಮರಿಸಲೇಬೇಕು.

ಹಾಗೆಯೇ, ಕರ್ನಾಟಕದ ರೈತ ಹೋರಾಟಗಳು ಕುರಿತಾಗಿ ಪ್ರೊ. ಎಂ.ವಿ. ನಾಡಕರ್ಣಿಯವರು ನಡೆಸಿದ ಅಧ್ಯಯನಕ್ಕಾಗಿ ನಡೆಸಿದ ಸಂದರ್ಶನದಲ್ಲಿ, ಪ್ರೊ.ಬಿ.ಕೆಯವರು ಪ್ರಸ್ತಾಪಿಸಿದ ಕೆಲವು ಅಂಶಗಳನ್ನು ಇಲ್ಲಿ ದಾಖಲಿಸಬಹುದು:

(೧) ರೈತ ಹೋರಾಟಗಳು, ಅಲ್ಪಾವಧಿ ಲಾಭಗಳಿಗಾಗಿ, ಪ್ರಯತ್ನಿಸುತ್ತವೆಯೇ ಹೊರತು, ಇಡೀ ವ್ಯವಸ್ಥೆಯನ್ನು ಬದಲಾಯಿಸಲು ಅಲ್ಲ. (೨) ರೈತ ಹೋರಾಟಗಳಲ್ಲಿ ಕೃಷಿಕಾರ್ಮಿಕರ ಕನಿಷ್ಠ ವೇತನದ ಹೆಚ್ಚಳದ ಪ್ರಸ್ತಾಪವಿಲ್ಲ. (೩) ರೈತರು ಗೇಣಿದಾರರಿಂದ ಕಬಳಿಸಿದ ಭೂಮಿಯನ್ನು ಅವರಿಗೇ ವಾಪಾಸ್ಸು ಕೊಡಲು ರೈತ ಸಂಘ ಒತ್ತಾಯಿಸುತ್ತಿಲ್ಲ. (೪) ರೈತರ ಸಾಲ ಮನ್ನಾಕ್ಕೆ ಒತ್ತಾಯಿಸುವ ರೈತ ಸಂಘ, ದೊಡ್ಡ ರೈತ ಮತ್ತು ಸಣ್ಣ ರೈತರು ಕೃಷಿ ಕಾರ್ಮಿಕರಿಗೆ ಕೊಟ್ಟ ಚಕ್ರಬಡ್ಡಿ ಸಾಲವನ್ನು ಮನ್ನಾ ಮಾಡಲು, ತನ್ನ ಸದಸ್ಯರಿಗೆ ಹೇಳುತ್ತಿಲ್ಲ.

(ಮುಂದುವರೆಯುವುದು)

ಮಾರ್ಚ್ ೨೩, ಲೋಹಿಯಾ ಜನ್ಮದಿನ

ಲೋಹಿಯಾರ ತಾತ್ತ್ವಿಕ ಪರಂಪರೆ ಈಗಲೂ ಯಾಕೆ ಜೀವಂತವಾಗಿದೆಯೆಂದರೆ...

-ರಜನಿ ಬಕ್ಷಿ



ದೆಹಲಿಯಲ್ಲಿರುವ ಲೋಹಿಯಾ ಆಸ್ಪತ್ರೆಗೆ ಭೇಟಿ ನೀಡುವ ಬಹಳಷ್ಟು ಜನರಿಗೆ ಬಹುಶಃ ಆ ವೈದ್ಯಕೀಯ ವ್ಯವಸ್ಥೆಗೆ ಇಟ್ಟಿರುವ ಹೆಸರಿನ ವ್ಯಕ್ತಿಯ ಪರಿಚಯವೆ ಇರಲಿಕ್ಕಿಲ್ಲ. ರಾಮ ಮನೋಹರ ಲೋಹಿಯಾ ಎಂದು ಗೂಗಲಿಸಿ ನೋಡಿ. ಮೊದಲಿಗೆ ಕಂಡು ಬರುವ ಮಾಹಿತಿಗಳೆಂದರೆ, ಅವರ ಹೆಸರಿನಲ್ಲಿರುವ ಎರಡು ಆಸ್ಪತ್ರೆಗಳು ಹಾಗೂ ಒಂದು ವಿಶ್ವ ವಿದ್ಯಾನಿಲಯಕ್ಕೆ ಸಂಬಂದಿಸಿದ ವಿವರಗಳು.

ಇದೇನೂ ಆಶ್ಚರ್ಯ ತರುವ ಸಂಗತಿ ಅಲ್ಲ. ಸಮಾಜವಾದವೆಂದರೆ ಒಂದು ಪುರಾತನ ಕಾಲದ ಮತ್ತು ಪ್ರಗತಿಗೆ ವಿರುದ್ಧವಾದ ತತ್ವ ಎಂಬ ನಂಬಿಕೆ ವ್ಯಾಪಕವಾಗಿರುವ ಇಂದಿನ ಕಾಲಘಟ್ಟದಲ್ಲಿ ಲೋಹಿಯಾರ ಬಗೆಗಿನ ನಿರ್ಲಕ್ಷ್ಯ ಪೂರ್ಣ ಸಹಜವೇ ಆಗಿದೆ.

ಲೋಹಿಯಾರ ಹುಟ್ಟುಹಬ್ಬದಂದು (ಮಾರ್ಚ್, ೨೩) ಸಂಸತ್ ಭವನದಲ್ಲಿ ಅವರ ಭಾವಚಿತ್ರಕ್ಕೆ (ಮಾಜಿ) ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಹೂ ಅರ್ಪಿಸಿ ಶ್ರದ್ಧಾಂಜಲಿ ಸಲ್ಲಿಸಿದ್ದು ಲೋಹಿಯಾರ ಉತ್ಸಾಹಿ ಅನುಯಾಯಿಗಳಿಗಾದರೂ ಇರಿಸುಮುರಿಸು ಉಂಟುಮಾಡಿತ್ತು. ಯಾಕೆಂದರೆ ಈ ಪ್ರಧಾನಿಯವರೇ ಅಲ್ಲವೆ ಭಾರತದ ಆರ್ಥಿಕತೆಯಲ್ಲಿ ದೊಡ್ಡ ಪಲ್ಲಟವನ್ನು ಉಂಟು ಮಾಡಿ ಅದನ್ನು ನಿಗಮಶಾಹಿ(ಕಾರ್ಪೋರೇಟ್) ಬಂಡವಾಳವಾದಿ ಆರ್ಥಿಕತೆಯನ್ನಾಗಿ ಪರಿವರ್ತಿಸಿದ ಮಹಾನುಭಾವರು? ಇಂತಹವರ ಕಿವಿಗಳಿಗೆ 'ಆವೃತ(ಎಲ್ಲರನ್ನೂ ಒಳಗೊಳ್ಳುವ) ಬೆಳವಣಿಗೆ' ಮತ್ತು 'ಆವೃತ ಮಾರುಕಟ್ಟೆ' ಪರವಾಗಿ ತಾನು ಕೆಲಸ ಮಾಡುವುದಾಗಿ ಹೇಳುವ ಸರ್ಕಾರದ ಮಾತುಗಳು ಪೊಳ್ಳು ಮಾತುಗಳಾಗಿ ಕೇಳಿಸುವುದು ಸಹಜ.

ಆದರೂ ಇಂತಹ ಮಾತುಗಳು ಲೋಹಿಯಾ ಕಾಣಿಸಿಕೊಂಡ ಐತಿಹಾಸಿಕ ವಾರಸುದಾರಿಕೆಗೆ ದೊರೆತ ಪರೋಕ್ಷ ಗೆಲುವು ಕೂಡ ಹೌದು ಎಂಬುದನ್ನೂ ನಾವು ಗಮನಿಸಬೇಕು. ಹಾಗಾಗಿಯೇ ಇಂದು ಸಮತೆಗೆ ಬದ್ಧರಾಗಿರುವುದು ಒಂದು ರಾಜಕೀಯ ಅವಶ್ಯಕತೆಯಾಗಿಬಿಟ್ಟಿರುವುದು. ದುರ್ಬಲರನ್ನು ನಿರ್ಲಕ್ಷಿಸುವ ಯಾವನೇ ಆಗಲಿ, ಚುನಾವಣಾ ಗೆಲವಿನ ಮಾತಿರಲಿ, ಒಂದು ಔಪಚಾರಿಕ ರಾಜಕೀಯ ಬದುಕನ್ನು ಕಟ್ಟಿಕೊಳ್ಳುವ ಕನಸನ್ನೂ ಕಾಣುವಂತಿಲ್ಲ. ಹಾಗಾಗಿ ಲೋಹಿಯಾರನ್ನು ನೆನಪಿಸಿಕೊಳ್ಳುವ ಈ ಕಾಲ ಪ್ರವಾಹದ ಒಂದು ಅರೆಕ್ಷಣದಲ್ಲಾದರೂ ನಿಂತು, ನಮ್ಮ ವರ್ತಮಾನವು ಅವರು ಪ್ರತಿನಿಧಿಸಿದ ಮೌಲ್ಯಗಳಿಗೆ ಎಷ್ಟು ಋಣಿಯಾಗಿದೆ ಎಂಬುದನ್ನು ಮನನ ಮಾಡಿಕೊಳ್ಳಲು ಸೂಕ್ತ ಸಂದರ್ಭವಾಗಿದೆ. ಇದು ಸಾಧ್ಯವಾಗುವುದು, ನಾವು 'ಸಮಾಜವಾದ' ಮತ್ತು 'ಬಂಡವಾಳಶಾಹಿ' ಎಂಬ ಶಬ್ದಗಳನ್ನು ಹಗುರವಾಗಿ ಅಥವಾ ಚುರುಕು ಮಾತುಗಾರಿಕೆಯ ಭಾಗವಾಗಿ ಬಳಸುವುದನ್ನು ನಿಲ್ಲಿಸಿದಾಗ. ಆಗ ನಾವು ವಾಸ್ತವ ಸತ್ಯವನ್ನು ಹೆಚ್ಚು ನಿರ್ಭಾವುಕವಾಗಿ ಅರಿಯಲು ಹಾಗೂ ಗ್ರಹಿಕೆಯ ಸಾಮಾನ್ಯ ನೆಲೆಗಳನ್ನು ಗುರುತಿಸಲು-ಅವು ತೀವ್ರ ವಾದ ವಿವಾದಗಳ ಸಾಗರದಲ್ಲಿನ ನಡುಗಡ್ಡೆಗಳ ರೂಪದಲ್ಲಿ ಕಾಣಿಸಿಕೊಂಡರೂ ಸಹ-ಸಾಧ್ಯವಾಗಬಹುದು.

೧೯೧೦ರಲ್ಲಿ ಉತ್ತರ ಪ್ರದೇಶದ ಗ್ರಾಮವೊಂದರಲ್ಲಿ ಜನಿಸಿದ ಲೋಹಿಯಾ ಮಹಾತ್ಮ ಗಾಂಧಿಯವರಿಂದ ತುಂಬ ಆಳವಾಗಿ ಪ್ರಭಾವಿತರಾಗಿದ್ದರು. ಲೋಹಿಯಾ ತಮ್ಮ ಮೊದಲ ಸತ್ಯಾಗ್ರಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಅವರಿಗೆ ಕೇವಲ ಹತ್ತು ವರ್ಷ ವಯಸ್ಸು. ಕಲ್ಕತ್ತಾ ಮತ್ತು ಆನಂತರ ಬರ್ಲಿನ್ ವಿಶ್ವ ವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿದ ಲೋಹಿಯಾ ತಮ್ಮ ಪಿಹೆಚ್‌ಡಿ ಮಹಾ ಪ್ರಬಂಧವನ್ನು ಬರೆದದ್ದು ಉಪ್ಪಿನ ಸತ್ಯಾಗ್ರಹದ ಬಗ್ಗೆ.

ಮುಂದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಂಗ ಪಕ್ಷವಾಗಿ ಸಮಾಜವಾದಿ ಕಾಂಗ್ರೆಸ್ ಪಕ್ಷವನ್ನು ಸಂಸ್ಥಾಪಿಸಿದವರಲ್ಲಿ ಲೋಹಿಯಾ ಕೂಡ ಒಬ್ಬರು. ನಂತರ ಬ್ರಿಟಿಷರ ಜೈಲುಗಳಲ್ಲಿ ಬಹಳಷ್ಟು ಸಮಯ ಕಳೆಯಬೇಕಾಗಿ ಬಂದ ಅವರು ಅಲ್ಲಿ ಸಾಕಷ್ಟು ಹಿಂಸಾಚಾರಕ್ಕೂ ಒಳಗಾದರು. ಎಲ್ಲರೂ ಸುಮ್ಮನಿದ್ದಾಗ ಭಾರತದ ವಿಭಜನೆಯನ್ನು ಕಟುವಾಗಿ ವಿರೋಧಿಸಿದ ಕೆಲವೇ ಕೆಲವರಲ್ಲಿ ಅವರೂ ಒಬ್ಬರು. ನಂತರದ ದಿನಗಳಲ್ಲಿ ಅವರು ಬರೆದ 'The guilty men of India's partition' ('ಭಾರತ ವಿಭಜನೆಯ ತಪ್ಪಿತಸ್ಥರು') ಎನ್ನುವ ಪುಸ್ತಕ ಸಾಕಷ್ಟು ವಿವಾದವನ್ನೆಬ್ಬಿಸಿತು.

ಮಾರ್ಕ್ಸ್‌ವಾದವನ್ನು "ಏಷ್ಯಾ ವಿರುದ್ಧದ ಯುರೋಪಿನ ಕಟ್ಟಕಡೆಯ ಅಸ್ತ್ರ" ಎಂದು ಲೋಹಿಯಾ ಪರಿಗಣಿಸಿದ್ದರು. ತಾವು ರೂಪಿಸಿದ 'ಸಮಾನ ಅಪ್ರಸ್ತುತತೆಯ ತತ್ತ್ವದ' ಪ್ರಕಾರವಾಗಿ ಮಾರ್ಕ್ಸ್‌ವಾದ ಮತ್ತು ಬಂಡವಾಳಶಾಹಿ ಎರಡನ್ನೂ ಅವರು ತಿರಸ್ಕರಿಸಿದ್ದರು. ಯಾಕೆಂದರೆ ಅವೆರಡೂ ಚಿಂತನೆಗಳು ಬೃಹತ್ ಕೈಗಾರಿಕೆ ಹಾಗೂ ಕೇಂದ್ರೀಕೃತ ವ್ಯವಸ್ಥೆಯನ್ನು ಆಧರಿಸಿದವು.

ತಮ್ಮ ಮುಂಗಾಣ್ಕೆಯಿಂದ ಲೋಹಿಯಾ ೧೯೫೦ರ ಸುಮಾರಿನಲ್ಲಿಯೇ ಅಮೆರಿಕನ್ನರನ್ನು ಅವರ ಬದುಕು ಮತ್ತು ಅಮೆರಿಕಾ ಪ್ರಜಾಪ್ರಭುತ್ವವನ್ನು ನಿಗಮಶಾಹಿ ಆವರಿಸಿಕೊಳ್ಳುವುದೆಂದು ಎಚ್ಚರಿಸಿದ್ದರು.

ಲೋಹಿಯಾ, ಸಮಾಜವಾದವೆಂದರೆ ಉತ್ಪಾದನಾ ಸಾಧನಗಳ ಮೇಲೆ ರಾಜ್ಯ ವ್ಯವಸ್ಥೆಯ ನಿಯಂತ್ರಣ ಸಾಧಿಸುವುದು ಎಂದಲ್ಲ; ಬದಲಿಗೆ, ಸಂಪತ್ತಿನ ಉತ್ಪಾದನೆ ಮುಖ್ಯವಾದರೂ, ಅದು ಸಮತೆಯನ್ನು ಸಾಧಿಸುವಂತಹ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಭಾಗವೂ ಆಗಿರಲು ಸಾಧ್ಯವಿರುವಂತಹ ಒಂದು ಮುಕ್ತ ಸಮಾಜದ ನಿರ್ಮಾಣ ಎಂದು ನಂಬಿದ್ದ ಬುದ್ಧಿಜೀವಿಗಳ ಪರಂಪರೆಗೆ ಸೇರಿದ್ದರು.

ಇಂತಹ ಸಮಾಜವಾದ, ಸಹಕಾರಿ ರಚನೆಗಳು ಮತ್ತು ಮಾನವೀಯ ಮೌಲ್ಯಗಳಿಂದ ನಿರ್ದೇಶಿತವಾದ ಮುಕ್ತ ವಿನಿಮಯದ ವ್ಯವಸ್ಥೆಗಳನ್ನು ರೂಪಿಸುವತ್ತ ತುಡಿಯುವಂತಹುದು. ಹಾಗಾಗಿ ಸರ್ಕಾರಗಳಿಗೆ ಹೆಚ್ಚು ಹೆಚ್ಚು ಅಧಿಕಾರ ನೀಡುವ ರಾಜಕೀಯ ನಡೆಗಳನ್ನು ಲೋಹಿಯಾ ವಿರೋಧಿಸಿದರು. ಅವರು ತಮ್ಮ ಬದುಕಿನ ಉಳಿದ ಭಾಗವನ್ನು ನಾಗರಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಜನತೆಯ ಭಾಗವಹಿಸುವಿಕೆಯನ್ನು-ಶ್ರಮದಾನದ ಮೂಲಕ ಕಾಲುವೆ, ಬಾವಿ, ರಸ್ತೆ ನಿರ್ಮಾಣದಂತಹ ಸಾರ್ವಜನಿಕ ಪ್ರಯತ್ನಗಳನ್ನು-ಪ್ರೇರೇಪಿಸುವುದರಲ್ಲಿ ಕಳೆದರು. ಅಲ್ಲದೆ ದೇಶದ ಮೂಲೆ ಮೂಲೆಗಳಿಂದ ಬಂದ ಜನತೆ ತನ್ನ ದೂರು ದುಮ್ಮಾನಗಳನ್ನು ತಮ್ಮ ಸಂಸತ್ ಸದಸ್ಯರ ಮುಂದೆ ಅರುಹಲು ಅನುಕೂಲವಾಗುವಂತಹ 'ಜನವಾಣಿ ದಿನ'ವನ್ನು ಆಯೋಜಿಸುವಲ್ಲಿ ಅವರ ಪಾತ್ರ ಹಿರಿದು. ಅರವತ್ತು ವರ್ಷಗಳ ತರುವಾಯ ಸಾಮುದಾಯಿಕ ಪಾಲ್ಗೊಳ್ಳುವಿಕೆ ಎಂಬುದು ಎಲ್ಲರೂ ಒಪ್ಪಿಕೊಂಡಿರುವ ವಿಚಾರವಾಗಿದೆ- ಅದು ಈಗ ಎಷ್ಟೇ ಅಸಮರ್ಪಕವಾಗಿದ್ದರೂ.

ಎಲ್ಲಕ್ಕಿಂತ ಮಿಗಿಲಾಗಿ, ಸಮಕಾಲೀನ ಸಮಾಜದ ಜಪಮಂತ್ರವಾಗಿರುವ, ಸರ್ವರಿಗೂ ಸಮಾನ ಅವಕಾಶಗಳಿಗಾಗಿ ಲೋಹಿಯಾ ಹೋರಾಡಿದರು. ಕೆಳ ಜಾತಿಗಳು ಮತ್ತು ಆರ್ಥಿಕವಾಗಿ ದುರ್ಬಲವಾದ ವರ್ಗಗಳು ಐತಿಹಾಸಿಕವಾಗಿ ಪರಿಣಮಿಸಿದ ಅಡ್ಡಿ-ಆತಂಕಗಳನ್ನು ಮೀರಿ ಕೌಶಲ್ಯಗಳು ಮತ್ತು ಸಂಪನ್ಮೂಲಗಳನ್ನು ಗಳಿಸಿಕೊಳ್ಳಲಾಗುವಂತೆ ಅವರಿಗೆ ಸಾಂಸ್ಥಿಕವಾಗಿ ಆದ್ಯತಾ ಅವಕಾಶ ನೀಡಬೇಕೆಂಬ ಅವರ ಆಗ್ರಹ ೧೯೫೦ ಹಾಗೂ ೬೦ರ ದಶಕಗಳಲ್ಲಿ ಒಂದು ಕ್ರಾಂತಿಕಾರಕ ವಿಚಾರವೇ ಆಗಿತ್ತು.

ಇತಿಹಾಸದಲ್ಲಿ ಭಾರತ ಅನುಭವಿಸಿದ ಅನೇಕ ಆಘಾತಗಳಿಗೆ ಜಾತಿ ಪದ್ಧತಿಯನ್ನು ಲೋಹಿಯಾ ದೂಷಿಸಿದರು. ಅವರ ಪ್ರಕಾರ ಅದು ಸಂಕುಚಿತವಾದ ಗುರುತುಗಳನ್ನು ಪೋಷಿಸಿತಲ್ಲದೆ, ಜನ ತಮ್ಮನ್ನು ತಾವು ವಿಸ್ತೃತ ಜವಾಬ್ದಾರಿಗಳನ್ನುಳ್ಳ ಪ್ರಜೆಗಳನ್ನಾಗಿ ಪರಿಭಾವಿಸಿಕೊಳ್ಳಲು ಬಿಡಲಿಲ್ಲ. ಇದಕ್ಕೆ ಪರಿಹಾರ ಮೇಲ್ಜಾತಿಗಳ ವಿರುದ್ಧ ಯುದ್ಧ ಹೂಡುವುದಲ್ಲ. ಅದರ ಬದಲಿಗೆ ಉಳ್ಳವರು ಸ್ವಪ್ರೇರಣೆಯಿಂದ ಕೆಳಜಾತಿಗಳ ಜನರ ಬದುಕನ್ನು ಹಸನಾಗಿಸಲು ಮುಂದೆ ಬರುವಂತೆ ಮಾಡುವ ನೈತಿಕ ಪ್ರಚಾರಾಂದೋಲನವನ್ನು ಹಮ್ಮಿಕೊಳ್ಳಬೇಕು. ಇದನ್ನು ಮಾನವೀಯ ದೃಷ್ಟಿಯಿಂದಷ್ಟೇ ಅಲ್ಲ, ಈ ಮಾರ್ಗದಿಂದ ಮಾತ್ರ ದೇಶದಲ್ಲಿ ಪ್ರತಿಭೆ ಮತ್ತು ನವನವೀನ ವಿಚಾರಗಳ ಒಂದು ಹೊಸ ಪ್ರವಾಹವೇ ಹರಿದು ಬರುತ್ತದೆಂಬ ಕಾರಣದಿಂದಲೂ ಕೈಗೆತ್ತಿಕೊಳ್ಳಬೇಕೆಂದು ಲೋಹಿಯಾ ಭಾವಿಸಿದರು.

ಲೋಹಿಯಾ ೧೯೬೭ರಲ್ಲಿ ಸಾವನ್ನಪ್ಪಿದರಾದರೂ ಅವರ ರಾಜಕೀಯ ಹೆಜ್ಜೆಗುರುತುಗಳು ೧೯೭೦ರ ದಶಕದ ಮಧ್ಯಭಾಗದಲ್ಲಿ ಜಯಪ್ರಕಾಶ್ ನಾರಾಯಣ್

ಅವರಿಂದ ಸ್ಫೂರ್ತಿಗೊಂಡ ಯುವಜನ ಆಂದೋಲನದಲ್ಲಿ ಢಾಳಾಗಿ ಕಾಣಬಹುದು. ನೂರಾರು ಯುವಕರು 'ಗಾಂಧಿ, ಲೋಹಿಯಾ, ಜಯಪ್ರಕಾಶರಿಗೆ ಜೈಕಾರ ಹಾಕುತ್ತ ರಾಜಕೀಯವಾಗಿ ಕ್ರಿಯಾಶೀಲರಾದರು. ವಿಪರ್ಯಾಸವೆಂದರೆ, ಈ ಆಂದೋಲನದ ಮೂಸೆಯಲ್ಲಿ ಮೂಡಿಬಂದು ತಮ್ಮನ್ನು ತಾವು ಲೋಹಿಯಾವಾದಿಗಳೆಂದು ಕರೆದುಕೊಂಡ ಮುಖ್ಯವಾಹಿನಿಯ ರಾಜಕೀಯ ನಾಯಕರು–ಇವರಲ್ಲಿ ಗಮನಾರ್ಹರಾದವರೆಂದರೆ, ಮುಲಾಯಂಸಿಂಗ್ ಯಾದವ್, ಲಾಲೂ ಪ್ರಸಾದ್ ಯಾದವ್, ಶರದ್ ಯಾದವ್–ತಮ್ಮ ತಾತ್ವಿಕ ಗುರುವಿಗೆ ನೋವನ್ನುಂಟು ಮಾಡುವ ಹಾಗೆ ಜಾತಿವಾದದ ಆಧಾರದ ಮೇಲೆ ತಮ್ಮ ರಾಜಕೀಯ ಬದುಕನ್ನು ಕಟ್ಟಿಕೊಂಡರು.

ಲೋಹಿಯಾರ ತಾತ್ವಿಕ ಪರಂಪರೆ ಸಮತೆ, ಪಾಲ್ಗೊಳ್ಳುವಿಕೆ, ಪಾರದರ್ಶಕತೆ, ಹೊಣೆಗಾರಿಕೆ ಮುಂತಾದ ಪ್ರಶ್ನಾತೀತವೆನ್ನಿಸಿರುವ ಮೌಲ್ಯಗಳ ರೂಪದಲ್ಲಿ ಇಂದೂ ಜೀವಂತವಾಗಿದೆ. ನಿಜ, ಈ ಮೌಲ್ಯಗಳನ್ನು ಪಾಲಿಸುವುದಕ್ಕಿಂತ ಹೆಚ್ಚಾಗಿ ಉಲ್ಲಂಘಿಸಲಾಗುತ್ತಿದೆ. ಆದರೆ ಈ ಮೌಲ್ಯಗಳನ್ನು ನಿರ್ಣಾಯಕ ಮೌಲ್ಯಗಳೆಂದು ಪರಿಗಣಿಸಿರುವುದು ಸಮಕಾಲೀನ ಬದುಕಿನಲ್ಲಿನ ಒಂದು ಮಹಾ ಪರಿವರ್ತನೆಯ ಪ್ರತೀಕವೇ ಆಗಿದ್ದು, ಇದರ ಸಾಕ್ಷ್ಯಗಳು ಇಂದಿನ ಸಾರ್ವಜನಿಕ ಜೀವನ ಮತ್ತು ಸಾಹಿತ್ಯಕೃತಿಗಳೆರಡರಲ್ಲೂ–ಉದಾ: ನಂದನ್ ನಿಲೇಕಣಿ ಅವರ *Imagining India* ಮತ್ತು William Bissels ಅವರ *Making India work*– ವ್ಯಾಪಿಸಿಕೊಂಡಿರುವುದನ್ನು ನಾವು ಕಾಣಬಹುದು.

ಜನರ ಮಧ್ಯೆ ಈಗಲೂ ಆಸೆಯಿಂದ ಕೆಲಸ ಮಾಡುತ್ತಿರುವ ಲೋಹಿಯಾರಿಂದ ಸ್ಫೂರ್ತಿಗೊಂಡ ಸಮಾಜವಾದಿ ಕಾರ್ಯಕರ್ತರು ಈ ಮಾದರಿಗಳಲ್ಲಿನ ವಿವರಗಳ ಬಗ್ಗೆ ಕಟುವಾದ ಭಿನ್ನಾಭಿಪ್ರಾಯಗಳನ್ನು ಹೊಂದಿರಬಹುದು. ಆದರೆ ಹೆಚ್ಚು ನ್ಯಾಯಯುತವಾದ ಮತ್ತು ಸಮತೆಯ ಸಮಾಜದ ಕನಸಿಗೆ ಬದ್ಧರಾದವರೂ ಮತ್ತು ಈಗಾಗಲೇ ಸಾಕಷ್ಟು ಉಳ್ಳವರಾಗಿರುವವರಿಗೆ ಮತ್ತಷ್ಟು ಸವಲತ್ತುಗಳ ವರದಾನ ಮಾಡುವ 'ಹುಟ್ಟಿನ ಲಾಟರಿ'ಯ ಬಗ್ಗೆ ತೀವ್ರವಾದ ಸಿಟ್ಟಿರುವ ಜನರೂ ಅಲ್ಲಿದ್ದಾರೆ. ನಿಜ, ಬದಲಾವಣೆ ಬಯಸುವ ಇವರಲ್ಲಿ ಬಹಳ ಜನಕ್ಕೆ 'ಸಮಾಜವಾದ'ವೆಂದು ಅವರು ಯಾವುದನ್ನು ಗುರುತಿಸುತ್ತಾರೋ ಅದರ ಬಗ್ಗೆ ಅಲರ್ಜಿ ಇದೆ. ಉದಾಹರಣೆಗೆ ಬಹಳ ಪ್ರಭಾವಶಾಲಿ ಆರ್ಥಿಕ ತಜ್ಞರೂ ಹಾಗೂ ನೀತಿ ನಿರೂಪಕರೂ ಅದ (ಮತ್ತು ಈಗ ಭಾರತದ ರಿಸರ್ವ್ ಬ್ಯಾಂಕಿನ ಗವರ್ನರ್‌ರೂ ಆಗಿರುವ) ರಘುರಾಮ್ ರಾಜನ್ ತಮ್ಮ *Saving Capitalism from Capitalists* ಎಂಬ ಪುಸ್ತಕದಿಂದ ಪ್ರಸಿದ್ಧರಾಗಿದ್ದಾರೆ. ಅವರು ಬಂಡವಾಳಶಾಹಿಯ 'ವಾರಸುದಾರರ, ವಾರಸುದಾರರಿಂದ ಮತ್ತು ವಾರಸುದಾರರಿಗಾಗಿ' ಇರುವ ವ್ಯವಸ್ಥೆಯಾಗಿಬಿಡುವ ಪ್ರವೃತ್ತಿಯನ್ನು ವಿರೋಧಿಸುತ್ತಾರೆ. ಈ ದೃಷ್ಟಿಕೋನವು ಈ ಹಿಂದೆ ಉಲ್ಲೇಖಿಸಲಾದ ಸಾಮಾನ್ಯ ನೆಲೆಗಳ ನಡುಗಡ್ಡೆಗಳಿಗೆ ಒಂದು ಉದಾಹರಣೆಯಷ್ಟೆ ಮೇಲ್ನೋಟಕ್ಕೆ ವಿರೋಧಿಗಳಾಗಿ ಕಾಣುವ ಇವರು ಕಟು ವಾದ–ವಿವಾದಗಳ ಥಂಡಿ ನೀರಿನ ಹೆಬ್ಬಲೆಗಳನ್ನು ಹಾಯ್ದು ಅಂತಹ ಸಾಮಾನ್ಯ ನೆಲೆಗಳ ನಡುಗಡ್ಡೆಗಳನ್ನು ತಲುಪಿದಲ್ಲಿ ಎಂತಹ ಹೊಸ ಅನುಸಂಧಾನದ ಬಾಗಿಲುಗಳು ತರೆದುಕೊಳ್ಳುವವೋ ಎಂದು ಊಹಿಸುವುದೇ ಒಂದು ರೋಮಾಂಚನಕಾರಿ ಅನುಭವವಾಗಬಲ್ಲುದು!

(ರಜನಿ ಭಕ್ಷಿ ಮುಂಬೈನಲ್ಲಿ ನೆಲೆಸಿರುವ ಪ್ರಗತಿಪರ ರಾಜಕೀಯ–ಆರ್ಥಿಕ ಚಿಂತಕರು, ಲೇಖಕರು ಮತ್ತು ಹಿರಿಯ ಪತ್ರಕರ್ತರು)

(ಕನ್ನಡಕ್ಕೆ: ಡಿಎಸ್ಸೆನ್)

ಸಮಾಜವಾದಿಗಳು ಮರೆತ ಮಿಣುಕಮ್ಮ : ಒಂದು ಶ್ರದ್ಧಾಂಜಲಿ



ತೀರ್ಥಹಳ್ಳಿಯಲ್ಲಿ ಸಮಾಜವಾದಿ ಪಕ್ಷ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರ ಅಭಿಮಾನಿಗಳು, ಹಿಂಬಾಲಕರು ಆಗಿದ್ದ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಬೆಳಕಿಗೆ ಬಂದವರು ಕಡಿಮೆ. ಕೆಲವರು ಅಜ್ಞಾತರಾಗಿದ್ದುಕೊಂಡು ಗೌಡರ ಸೇವೆಯ ಮೂಲಕ ತಮ್ಮ ಕೊಡುಗೆ ನೀಡಿದರು. ತೀರ್ಥಹಳ್ಳಿಯ ಪ್ರವಾಸೀ ಮಂದಿರದಲ್ಲಿ ಆಯಾ ಆಗಿದ್ದ ಗುತ್ತ್ಯಮ್ಮ ಅಂಥವರಲ್ಲೊಬ್ಬರು. ಗೌಡರು ಅಲ್ಲಿ ತಂಗಿದ್ದಾಗ ಅವರ ಊಟೋಪಚಾರ, ಯೋಗಕ್ಷೇಮ ನೋಡಿಕೊಳ್ಳುವಲ್ಲಿ ಈ ಮಹಿಳೆ ತನ್ಮಯತೆ ತೋರುತ್ತಿದ್ದರಂತೆ. ಬಸವಾನಿ ಸಾವಿತ್ರಮ್ಮ ಬಡ ಹೆಣ್ಣು ಮಕ್ಕಳಿಗಾಗಿ ಸುಶ್ರೂಷಾ ಕೇಂದ್ರವನ್ನು ಸ್ಥಾಪಿಸಿ ಅಲ್ಲಿ ಹೆರಿಗೆ ಮುಂತಾಗಿ ಹೆಣ್ಣು ಮಕ್ಕಳ ಸೇವೆ ಮಾಡಿ ಸಮಾಜವಾದವನ್ನು ಅನುಷ್ಠಾನಗೊಳಿಸಿದರು. ಇಂಥವರಿಗಿಂತ ಭಿನ್ನವಾಗಿ ಮಿಣುಕಮ್ಮ ಎಂಬ ದಲಿತ ಮಹಿಳೆಯೊಬ್ಬಳು ಗೌಡರ ಬೆಂಬಲಿಗಳಾಗಿ ಬಹಿರಂಗವಾಗಿಯೇ ಓಡಾಡಿ ನಾಯಕಿ ಎನಿಸಿಕೊಂಡದ್ದು ವಿಶೇಷ. ವೀರಾವೇಷದ ಮಾತುಗಳನ್ನಾಡುತ್ತ ಗೌಡರ ರಕ್ಷಣೆಗೆ ನಿಲ್ಲುತ್ತಿದ್ದ ಈಕೆ ವಿರೋಧ ಪಕ್ಷದವರಿಗೆ ದುಸ್ವಪ್ನವೇ ಆಗಿದ್ದಳು.

ಮಿಣುಕಮ್ಮ ಮೂಲತಃ ಮೂಡಬಿದರೆಯವರು. ಗಂಡ ಕಾರ್ಕಳದ ಬೀರಪ್ಪ. ಕೃಷಿ ಕಾರ್ಮಿಕರಾಗಿ ಘಟ್ಟದ ಮೇಲೆ ಬಂದು ಆರಗದ ಬಳಿ ನೆಲೆಸಿದರು. ಆರು ಮಕ್ಕಳಿದ್ದ ತುಂಬು ಕುಟುಂಬ. ಶಾಂತವೇರಿಗೆ ಸಮೀಪದಲ್ಲೇ ಇದ್ದಿದ್ದರಿಂದ ಗೌಡರ ವ್ಯಕ್ತಿತ್ವದ ಪರಿಚಯ ಪ್ರಭಾವ ಸಹಜವಾಗಿಯೇ ಇತ್ತು. ಒಮ್ಮೆ ಗೌಡರು ಇವರ ಬಿಡಾರದ ಹತ್ತಿರ ಬಂದರು. ನೀವೇನಾ ಮಿಣುಕಮ್ಮ ಅಂದರು. ನಾಳೆ ಆರಗದಲ್ಲಿ ಮೀಟಿಂಗ್ ಇದೆ ಬರಬೇಕಲ್ಲ ಅಂದರು. ಗರ್ಭಿಣಿ ಮಿಣುಕಮ್ಮ ತನ್ನ ಇನ್ನೊಂದು ಪುಟ್ಟ ಮಗುವಿನೊಂದಿಗೆ ಹೋದರು.

ಅದು ಕಾಗೋಡು ಹೋರಾಟ. ಸತ್ಯಾಗ್ರಹಿಯಾಗಿ ಬಂಧಿತರಾದ ಮಿಣುಕಮ್ಮ ಮೂರು ತಿಂಗಳು ಬಳ್ಳಾರಿ ಜೈಲಿನಲ್ಲಿ ವಾಸ. ಅಲ್ಲಿ ಆಕೆ ಒಬ್ಬಳೇ ಹೆಂಗಸು. ಇದನ್ನು ತಿಳಿದ ಲೋಹಿಯಾ ಮುಂದೊಮ್ಮೆ ಭಾರತೀಯ ಮಹಿಳೆಯರ ಶಕ್ತಿ–ಸಾಮರ್ಥ್ಯಗಳ ಬಗ್ಗೆ ಬರೆಯುವಾಗ ಮಿಣುಕಮ್ಮನನ್ನು ನೆನಪಿಸಿಕೊಂಡರು. ಈ ಅವಿದ್ಯಾವಂತ ದಲಿತ ಕೂಲಿ ಕಾರ್ಮಿಕಳಿಗೆ ಸಮಾಜವಾದ ತಿಳಿದಿರಲಿಕ್ಕಿಲ್ಲ. ಗೌಡರ ಬಗೆಗಿನ ಅಭಿಮಾನ, ಪಕ್ಷದ ಪರವಾದ ಹೋರಾಟವೇ ಅವರ ಸರ್ವಸ್ವವಾಗಿತ್ತು. ದೊಡ್ಡ ಗಂಟಲಿನ ಮಿಣುಕಮ್ಮ ಬಾಯಿಬಿಟ್ಟರೆಂದರೆ ಗೌಡರ ರಾಜಕೀಯ ವಿರೋಧಿಗಳ ಜಂಘಾಬಲವೇ ಉಡುಗಿಹೋಗುತ್ತಿತ್ತಂತೆ!

ಗೋಪಾಲಗೌಡರು ಶಾಸಕರಾಗಿದ್ದ ಸಂದರ್ಭದಲ್ಲಿ ಒಮ್ಮೆ ಪ್ರವಾಹ ಪರಿಹಾರ ಕೇಳಿ ಹಕ್ಕೊತ್ತಾಯ ಮಾಡುವುದಕ್ಕಾಗಿ ತೀರ್ಥಹಳ್ಳಿಯಲ್ಲಿ ಪಕ್ಷದ ಕಛೇರಿಯಿಂದ ತಾಲ್ಲೂಕು ಕಛೇರಿವರೆಗೆ ಮೆರವಣಿಗೆ ತೆಗೆದರಂತೆ. ಆರಂಭದಲ್ಲಿ ಸಾಕಷ್ಟು ಜನ ನೆರೆದರು. ಮೆರವಣಿಗೆ ಮುಂದುವರಿದಂತೆ ಕರಗಿ ಹೋದರು. ತಾಲ್ಲೂಕು ಕಛೇರಿಗೆ ಏರುವ ಮೆಟ್ಟಿಲು ಹತ್ತಿ ತಿರುಗಿ ನೋಡಿದರೆ ಬೆರಳೆಣಿಕೆಯಷ್ಟೂ ಜನರಿರಲಿಲ್ಲ. ಮಿಣುಕಮ್ಮ ಅಲ್ಲೇ ಗಳಗಳನೆ ಅತ್ತುಬಿಟ್ಟರಂತೆ. ಆಗ ಗೋಪಾಲಗೌಡರೇ ಅವರನ್ನು ಸಮಾಧಾನ ಪಡಿಸಿದರಂತೆ.

ಸಮಾಜವಾದಿ ಹಿರಿಯ ನಾಯಕರಾದ ಸದಾಶಿವರಾಯರು, ಶಾಮೈತಾಳರು, ಕಡಿದಾಳು ಶಾಮಣ್ಣ, ಹುಗಳವಳ್ಳಿ ಸುರೇಂದ್ರ ಇವರೆಲ್ಲರ ಒಡನಾಟ ಮಿಣುಕಮ್ಮನವರಿಗಿತ್ತು. ಸದಾಶಿವರಾಯರು ಈಕೆಯನ್ನು ತಮಾಷೆ–ಪ್ರೀತಿಗಳಿಂದ ಮೇನಕಮ್ಮ ಎಂದು ಕರೆಯುತ್ತಿದ್ದರಂತೆ.

ಗೌಡರು ಕಾಲವಾದ ನಂತರದ ವರ್ಷಗಳಲ್ಲಿ ಕ್ರಮೇಣ ಸಮಾಜವಾದಿಗಳೆಲ್ಲ ತನ್ನನ್ನು ಮರೆತರೆಂಬ ಕೊರಗು ಮಿಣುಕಮ್ಮನವರನ್ನು ಕಾಡಿತು. ಇವರ ಸಹವಾಸವೇ ಬೇಡವೆಂದು ದೂರಾದರು. ಗೌಡರು ಕೊಡಿಸಿದ ನಾಲ್ಕೂವರೆ ಎಕರೆ ಜಮೀನು ಮಾಡಿಕೊಂಡು ಬದುಕುತ್ತಿದ್ದ ಇವರನ್ನು ಬಿ.ಜೆ.ಪಿ. ಧುರೀಣರು ಬುಟ್ಟಿಗೆ ಹಾಕಿಕೊಂಡರು. ಮಿಣುಕಮ್ಮನವರ ನಿಷ್ಠೆ ತಮಗೆ ವೈಯಕ್ತಿಕವಾಗಿ ಬಹುವಾಗಿ ನೆರವಾದ ಬಿಜೆಪಿ ನಾಯಕ ಆರಗ ಜ್ಞಾನೇಂದ್ರರ ಕಡೆಗೆ ತಿರುಗಿತು. ಪಕ್ಷ ಸೇರಿ ಬಿ.ಜೆ.ಪಿ.ಯಿಂದ ಎರಡು ಬಾರಿ ಪಂಚಾಯ್ತಿ ಸದಸ್ಯೆಯಾಗಿ ಆಯ್ಕೆಯಾದರು. ಈ 'ಕೂಗುಮಾರಿ' ಮಹಿಳೆಯ ಕೂಗು ಒಡನಾಡಿ ಸಮಾಜವಾದಿಗಳ ವಿರುದ್ಧವೇ ಮೊಳಗತೊಡಗಿದ್ದು ಆಶ್ಚರ್ಯವೇನಲ್ಲ.

೨೫ ಜನರ ಸಂಸಾರ ನಿರ್ವಹಿಸುತ್ತ, ಸಮಾಜವನ್ನು ಎಚ್ಚರಿಸುತ್ತ ೯೦ರ ವೃದ್ಧಾಪ್ಯದಲ್ಲೂ ಕುಗ್ಗದ ಉತ್ಸಾಹದಿಂದ ಓಡಾಡುತ್ತಿದ್ದ ಮಿಣುಕಮ್ಮ ೨೦೧೪ರ ಅಕ್ಟೋಬರ್ ೨೧ರಂದು ನಿಧನರಾದರು. ಶವ ಸಂಸ್ಕಾರದ ಸಂದರ್ಭದಲ್ಲಿ ಹಾಜರಿದ್ದು ನೆರವಾದವರು ಬಿ.ಜೆ.ಪಿ. ನಾಯಕರೇ ಎಂಬುದು ಹೊಟ್ಟೆ ತುಂಬಿದ ಸಮಾಜವಾದಿಗಳಿಗೆ ಮುಜುಗರವನ್ನೇನೂ ಉಂಟುಮಾಡಿಲ್ಲದಿರಬಹುದು.

–ಡಾ. ಜೆ.ಕೆ. ರಮೇಶ

ಯುವ ಸಮಾಜವಾದಿ ಚಿಂತನಾ ವೇದಿಕೆ

ಹೆಣ್ತನದ ಹೆಗಲೇರಿದ ಸ್ತ್ರೀವಾದ...

–ಕಾವ್ಯಶ್ರೀ ಎಚ್.



ಸ್ತ್ರೀವಾದ, ಮಹಿಳಾ ಚಳವಳಿ, ಮಹಿಳಾ ಹಕ್ಕುಗಳು, ಲಿಂಗ ತಾರತಮ್ಯ ಈ ಪದಗಳನ್ನೆಲ್ಲಾ ಕ್ಲೀಷೆಯೆನಿಸುವಷ್ಟು ಬಳಸಿ, ಸವೆದ ನಾಣ್ಯಗಳಂತಾಗಿವೆಯಾ?

ಸ್ತ್ರೀವಾದಿಗಳು ಎಂದರೆ ಬಾಬ್‌ಕಟ್, ಖಾದಿ ವಸ್ತ್ರ ಅಥವಾ ಕುರ್ತಾ ಧರಿಸಿ ಸದಾ ಗಂಡಸರ ಶೋಷಣೆ, ದಬ್ಬಾಳಿಕೆಯ ವ್ಯಾಖ್ಯಾನ– ವೈಭವೀಕರಣ ಮಾಡುವ; ವಿವಾಹ, ಕುಟುಂಬ ಎಂಬ ಸಂಸ್ಥೆಗಳ ಚೌಕಟ್ಟಿನಿಂದಾಚೆಗೆಡೆಗಿನ ತುಡಿತವಿರುವ, ಸನಾತನ ಧರ್ಮ, ಆಚರಣೆಗಳನ್ನು ವಿರೋಧಿಸುವ ಹೆಂಗಸರ ಗುಂಪು ಎಂಬ ಏಕರೂಪಿ ಮಾದರಿ ಎಲ್ಲರನ್ನೂ ಆವರಿಸಿದೆಯಾ?

ಯಾಕೆ ಮತ್ತೆ ಮತ್ತೆ ಸ್ತ್ರೀವಾದವನ್ನೋ, ಸ್ತ್ರೀತ್ವವನ್ನೋ, ಸ್ತ್ರೀ ಸ್ವಾತಂತ್ರ್ಯ– ಸಮಾನತೆಯನ್ನೋ, ಅಷ್ಟೇ ಅಲ್ಲ; ಸ್ತ್ರೀಸಂವೇದನೆಯನ್ನೂ ಅದು ಅಪರಾಧವಲ್ಲ ಎಂದು ಪರರಿಗೆ ವಿವರಿಸುವ, ಅದರ ಪರವಾಗಿರುವವರಿಗೆ ಗಿಲ್ಟ್ ಕಾಡಬೇಕಾಗಿಲ್ಲ ಎಂದು ಸಮರ್ಥಿಸುವ, ಹಾಗೆಂದರೇನು ಎಂದು ವ್ಯಾಖ್ಯಾನಿಸುವ ಕರ್ಮ ಎಮಗೆ?

ಹೌದು, ವಿವರಿಸಿ ಹೇಳದಿದ್ದರೆ ಅಪಾರ್ಥಕ್ಕೆ ಎಡೆಯಾಗುವ, ಜೋರಾಗಿ ಕೂಗಿ ಕೂಗಿ ಹೇಳದಿದ್ದರೆ ಆ ಧ್ವನಿಯೇ ಹೂತು ಹೋಗುವ, ಅರೆತೆರೆದಂತಿರುವ ಬಾಗಿಲುಗಳೆಲ್ಲಾ ಮುಚ್ಚಿಹೋಗುವ ಅಪಾಯ ಕಾಡುತ್ತಲೇ ಇರುತ್ತದೆ.

ಸ್ತ್ರೀವಾದವೆಂದರೆ –ಸ್ವೇಚ್ಛೆಯಲ್ಲ ಸ್ವಾತಂತ್ರ್ಯ
ಹೋರಾಟವಲ್ಲ – ಅನುಸಂಧಾನ
ಹಕ್ಕಿನ ಘೋಷಣೆಯಲ್ಲ – ಅಸ್ಮಿತೆಯ ಪ್ರತಿಷ್ಠಾಪನ
ಮಹಿಳಾಪರವಲ್ಲ – ಲಿಂಗಸಮಾನತೆಯ ಪರ
ಪುರುಷದ್ವೇಷಿಯಲ್ಲ – ಸಮಾನ ಗೌರವದ ಆಶಯ

ಇವೆಲ್ಲಾ ತಿಳಿಯದೇ ಇರುವಂತದ್ದೇನಲ್ಲ ಅಲ್ಲವೇ? ಆದರೂ ಒಂದೆಡೆ ಜಾಗೃತಿ ಹೆಚ್ಚಾದಷ್ಟೂ ಮತ್ತೊಂದೆಡೆ ಶೋಷಣೆ, ಹಿಂಸೆಯೂ ಹೆಚ್ಚಾಗುತ್ತಿದೆ, ಮಾನವ ನಾಗರೀಕನಾದಷ್ಟೂ ವಿನಾಶಕಾರಿಯಾದಂತೆ. ನೂತನ ಆವಿಷ್ಕಾರಗಳು ಸೃಷ್ಟಿಯ ವೈಚಿತ್ರವನ್ನು ಎಳೆಎಳೆಯಾಗಿ ಬಿಡಿಸಿಟ್ಟಂತೆ, ಸ್ತ್ರೀವಾದಿಗಳೂ ಪುರುಷ ದಬ್ಬಾಳಿಕೆಯ ಪದರ ಪದರಗಳನ್ನೂ ಬಿಚ್ಚಿಡುತ್ತಿದ್ದಾರೆ. ಸ್ವೋಪಜ್ಞ ಬದುಕಿನ ಸ್ವೋಪಜ್ಞ ಶೋಷಣೆಯ ಮಾದರಿಗಳು ಬೆಚ್ಚಿ ಬೀಳಿಸುತ್ತಿರುವುದಂತೂ ನಿಜ. ಇನ್ನು ಸ್ತ್ರೀವಾದದ ಸೈದ್ಧಾಂತಿಕ ಪ್ರತಿಪಾದನೆಗಳಿಗೆ ಸಿನಿಕತೆಯ ಪ್ರತಿಕ್ರಿಯೆಗಳಿಗಂತೂ ಕೊನೆಯಿಲ್ಲ, ಕಣ್ಣೋಟದಲ್ಲಿ ಚೇಳಿನ ಕುಟುಕು.

ಸ್ತ್ರೀವಾದಿಗಳ ಹೋರಾಟವು ಕೇವಲ ಲಿಂಗ ಸಮಾನತೆಯ ಚೌಕಟ್ಟಿಗಷ್ಟೇ ಒಳಪಟ್ಟಿಲ್ಲ. ಲೈಂಗಿಕ ಸ್ವಾತಂತ್ರ್ಯ, ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕು, ಜನನ ನಿಯಂತ್ರಣದ ಆಯ್ಕೆಯ ಹಕ್ಕುಗಳ ಸುತ್ತಲೂ ವಿಸ್ತರಿಸಿಕೊಂಡಿದೆ. ಮಹಿಳೆಗ್ಯಾಕೆ ಇಷ್ಟೆಲ್ಲಾ ಸವಲತ್ತುಗಳು ಎನ್ನುವವರು ಆಕೆಯು ನಿರ್ವಹಿಸುತ್ತಿರುವ ಪಾತ್ರಗಳತ್ತಲೂ ಗಮನ ಹರಿಸಬೇಕು. ಒಂದೆಡೆ 'ಒನ್ ವುಮನ್ ಆರ್ಮಿ'ಯಂತೆ ಮನೆ–ಕಛೇರಿ ಎರಡನ್ನೂ ನಿಭಾಯಿಸಬೇಕಾದ ಜವಾಬ್ದಾರಿ, ಇನ್ನೊಂದೆಡೆ ಇವೆಲ್ಲವನ್ನೂ ನಿರ್ವಹಿಸುತ್ತಲೂ ಎಲ್ಲ ಸಂದರ್ಭದಲ್ಲಿಯೂ ಗಂಡನಿಗೆ, ಪುರುಷ ಸಹೋದ್ಯೋಗಿ, ಮೇಲಧಿಕಾರಿಗಳಿಗೆ ವಿನೀತ, ವಿನಮ್ರಳಾಗಿ ಅವರುಗಳ ಸೂಪರ್ ಇಗೋವನ್ನು ಕಾಪಿಟ್ಟುಕೊಳ್ಳಬೇಕಾದ ಮೈಯೆಲ್ಲಾ ಹರಿದಾಡುವ ಎಚ್ಚರಿಕೆಯ ಹಾವುಗಳು. ಇನ್ನು ಎಮೋಶನಲ್ ಅತ್ಯಾಚಾರಗಳಿಗೆ ಕೊನೆಯೆಲ್ಲಿ. ಅವುಗಳಂತೂ ವ್ಯಾಖ್ಯೆ, ಊಹೆ, ವಿವರಣೆಗಳಿಗೆ ನಿಲುಕದ್ದು.

ಸಮಾನ ವೇತನ, ಮತದಾನದ ಹಕ್ಕಿನಿಂದ ಆರಂಭವಾಗಿ ಹೆಣ್ಣು ಗಂಡಿಗಿಂತ ಯಾವ ನೆಲೆಯಲ್ಲೂ ಕಡಿಮೆಯಿಲ್ಲ ಎಂಬುದೆಲ್ಲಾ ಮುಗಿದು ಆಕೆ ಗಂಡಿಗಿಂತ ವಿಶಿಷ್ಟಳು, ಅನನ್ಯಳು ಎಂಬ ವಿಚಾರಗಳು ಇಂದು ಮುನ್ನಲೆಗೆ ಬಂದಿವೆ. ಒಂದು ರಚನಾತ್ಮಕ ಧ್ವನಿಯೊಂದಿಗೇ ಈ ಚಳವಳಿಯನ್ನು ಮುಂದುವರೆಸಲು ಲಿಂಗ ತಾರತಮ್ಯದ ಬದಲಾಗಿ ಲಿಂಗ ಸಮಾನತೆಯ ಬಗ್ಗೆ ಹೆಚ್ಚು ಮಾತನಾಡಬೇಕಿದೆ. ಸಾಕ್ರೆಟೀಸ್ ಹೇಳುವಂತೆ – " The secret of change is to focus all of your energy, not on fighting the old, but on building new."

ಗೃಹಿಣಿ (Housewife)ಯಂತೆ ಗೃಹಪತಿಗಳೂ(House Husband) ಇರೋದು ಸಾಮಾನ್ಯ ವಿದ್ಯಮಾನ ಆಗಬೇಕು. ಆಗ ಬಹುಶಃ ಇಂತಹ ಸಂಗತಿಗಳು ಬದಲಾವಣೆಗೆ ದಾರಿಮಾಡಿಕೊಡಬಹುದೇನೋ!


ಸ್ತ್ರೀವಾದಿ ಚಿಂತನೆಗಳಿಂದಲೇ ಪ್ರಸಿದ್ಧರಾಗಿದ್ದ ಬರಹಗಾರ್ತಿಯ ಬಗ್ಗೆ ಪುರುಷ ಸಾಹಿತಿಯೊಬ್ಬರು ಹೇಳುತ್ತಿದ್ರು – "ಆಕೆ ವರ್ಷಗಳಿಂದಲೂ ಹೇಳಿದ್ದನ್ನೇ ಹೇಳ್ತಿದ್ದಾರೆ ಅನ್ಸಲ್ವಾ, ಅವರು ಏನು ಹೇಳ್ತಾರೆ ಅನ್ನೋದನ್ನ ನಾವು ಮೊದಲೇ ಊಹೆ ಮಾಡಿಬಿಡಬಹುದು" ಎಂದು. ಹೌದು ಇನ್ನೊಂದು ಶತಮಾನ ಉರುಳಿದರೂ, ಹೆಣ್ಣನ್ನು ಅವಳ ಹೆಣ್ತನದಾಚೆಗೆ ಮನುಷ್ಯಳನ್ನಾಗಿ ನೋಡುವವರೆಗೆ, ಹೇಳಿದ್ದನ್ನೇ ಹೇಳುತ್ತಲೇ ಇರಬೇಕು. ಎಂದೋ ನಾ ಬರೆದ ಸಾಲುಗಳು ಮನದ ಗೋಡೆಗಳೊಳಗೆ ಮತ್ತೆ ಪ್ರತಿಧ್ವನಿಸಿತು:

ಮರಕೆ ಸಿಲುಕಿದ ಗಾಳಿಪಟ ನಾನು
ಹಾರುತ್ತಿದ್ದೇನೆ
ಸಂಚಲನ ಪ್ರತಿಚಣ
ಆದರೂ
ಇದ್ದೇನೆ ಇದ್ದಲ್ಲಿಯೆ
ಏರಿಲ್ಲ ಇಳಿದಿಲ್ಲ
ಇನ್ನೂ ಚುಂಬಿಸಿಲ್ಲ ಮುಗಿಲಂಚ..!

ಇಂದಿನ ಯುವಪೀಳಿಗೆ ಸ್ತ್ರೀವಾದ ಒಡ್ಯಾಣ ತೊಡಲಿ, ತೊಡದಿರಲಿ; ಸಹಬಾಳ್ವೆಯ ಪಣವನ್ನಂತೂ ತೊಟ್ಟಿದ್ದಾರೆ ಎಂಬುದೇ ಆಶಾದಾಯಕವಾಗಿದೆ. ಅವರಿಗೆ ಲಿಂಗ ಅಸಮಾನತೆಯನ್ನು ಹೊಡೆದೋಡಿಸಬೇಕು ಎಂಬ ಎಚ್ಚರಕ್ಕಿಂತ ಪರಸ್ಪರ ಸಮಾನ ಗೌರವ ಮುಖ್ಯ ಗುರಿಯಾಗಿದೆ. ಆದರೆ ಇದು ಸಾಧ್ಯವಾಗಬೇಕಾದರೆ ಹಾದು ಬರಬೇಕಾದ ದಾರಿಯ ಅರಿವು ಅವರಿಗಿಲ್ಲ. ಹೀಗಾಗಿಯೇ ನಮ್ಮ ಸಮಾಜದಲ್ಲಿ ಜೀವಂತವಾಗಿರುವ ಸಂಸ್ಕೃತಿಯ ಪ್ರತಿ ಉಸಿರಿನಲ್ಲೂ ಅಡಗಿರುವ ಶೋಷಣೆಯ ಅಮೂರ್ತ ನೆಲೆಗಳನ್ನು ಅವರಿಗೆ ಅರ್ಥಮಾಡಿಸಬೇಕಾಗಿದೆ, ಅವುಗಳಿಗೆ ಸ್ಪಂದಿಸುವಂತೆ ಮಾಡಬೇಕಾಗಿದೆ. 'ಹಿಂದಣ ಹೆಜ್ಜೆಯನರಿತಲ್ಲದೆ, ನಿಂದ ಹೆಜ್ಜೆಯನರಿಯಬಾರದು' ಅಲ್ಲವೇ? ಇಷ್ಟೆಲ್ಲದರ ನಡುವೆಯೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ, ಅತ್ಯಾಚಾರ, ವರದಕ್ಷಿಣೆಯಂತಹ ಪಿಡುಗುಗಳು, ಉದ್ಯೋಗದ ಸ್ಥಳಗಳಲ್ಲಿ ನಡೆಯುವ ಶೋಷಣೆಗಳು ಬೃಹದಾಕಾರವಾಗಿ ಬೆಳೆಯುತ್ತಲೇ ಇದೆ. ಬದಲಾಗಬೇಕಿರುವುದು ಕೇವಲ ನಂಬಿಕೆ, ಚಿಂತನೆಗಳಷ್ಟೇ ಅಲ್ಲ, ನಡವಳಿಕೆಯೂ ಕೂಡ.

ಹೆಣ್ತನವೆನ್ನುವುದು ಒಂದು ಮನಸ್ಥಿತಿ. ಅದು ಪುರುಷರ ವ್ಯಕ್ತಿತ್ವದ ಒಂದು ಭಾಗವಾಗಿಯೂ ರೂಪುಗೊಳ್ಳಬಹುದು ಎಂಬುದನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ಇದರೊಂದಿಗೇ ಸಾವಿರಾರು ವರ್ಷಗಳಿಂದ ಹೆಣ್ಣಿನ ಮೇಲೆ ಹೇರಿಕೊಂಡು ಬರಲಾಗಿರುವ ಧಾರ್ಮಿಕ–ಸಾಮಾಜಿಕ–ಜೈವಿಕ ಅಧೀನತೆಯ ಒತ್ತಡಗಳನ್ನು ಅರಿಯುವ ಎಚ್ಚರವನ್ನು ಹಾಗೂ ಆರೋಪಿತ ಮಿತಿಯನ್ನು ದಾಟುವ ಪ್ರಜ್ಞೆಯನ್ನು ಹೆಣ್ಣಿನಲ್ಲಿ ಮೂಡಿಸುವ ನಿಟ್ಟಿನಲ್ಲಿ ನಾವೆಲ್ಲರೂ ಶ್ರಮಿಸಬೇಕಿದೆ. ಈ ಹಾದಿಯಲ್ಲಿ ಲೌಕಿಕ ಅನುಕೂಲಗಳು, ಕಾನೂನಿನ ನೆರವು, ತಾತ್ವಿಕ ಸೈದ್ಧಾಂತಿಕ ಹೋರಾಟಗಳಷ್ಟೇ ಮಹತ್ವವಾದದ್ದು ಗಂಡು ಹೆಣ್ಣು ಪರಸ್ಪರ ಸಹಯಾತ್ರಿಕರಂತೆ ಸಮಾನತೆಯ ಬದುಕ ಬಂಡಿಯನ್ನು ಸಾಗಿಸುವುದು.


"ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ ಕಡುಪಾತಕಂಗ್ಯೆದು ಪೆಣ್ಣಾಗಿ ಜನಿಸಿ ತನ್ನೊಡಲಂ ಪೊರೆವೊದೆನ್ನೊಳಪರಾಧಮುಂಟು..." ಈ ಪದ್ಯದ ಪ್ರತಿ ಪದದ ಅರ್ಥವನ್ನೂ ಬಿಡಿಸಿ ಬಿಡಿಸಿ ಹೇಳುವುದರಲ್ಲಿ ಸಫಲಳಾಗಿದ್ದ ನಾನು, ಅಷ್ಟೇ ತಲ್ಲೀನತೆಯಿಂದ ಟಿಪ್ಪಣಿ ಮಾಡಿಕೊಳ್ಳುತ್ತಿದ್ದ ವಿದ್ಯಾರ್ಥಿಗಳ ಕಂಗಳಲ್ಲಿ ಹುಡುಕಿದ್ದು ವಾಚ್ಯಾರ್ಥದ ಆಚೆಗಿದ್ದ ಆ ಧ್ವನ್ಯಾರ್ಥವನ್ನೂ ತಲುಪಿಸುವುದರಲ್ಲಿ ನಾ ಗೆದ್ದಿದ್ದೆನಾ ಎನ್ನುವುದನ್ನು!



ಬೆಂಗಳೂರಿನ ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕಿಯಾಗಿರುವ ಎಚ್. ಕಾವ್ಯಶ್ರೀಗೆ ಮಹಿಳಾ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯದಲ್ಲಿ ವಿಶೇಷ ಆಸಕ್ತಿ ಇದ್ದು ಕವನ ಬರೆಯುವ ಹವ್ಯಾಸವೂ ಉಂಟು. ಪ್ರಸ್ತುತ, ಕನ್ನಡದ ನಾಟಕಕಾರ್ತಿಯರ ಬಗ್ಗೆ ಸಂಶೋಧನೆಯಲ್ಲಿ ತೊಡಗಿದ್ದಾರೆ.

ಸಮಕಾಲೀನ

ಜಾಗತೀಕರಣ ಮತ್ತು ಹೆಣ್ಣು: ಹಾರುತ ದೂರ ದೂರ...



ಮಾರ್ಚ್ ೮ ಮಹಿಳಾ ದಿನ. ಜಗತ್ತಿನ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳಾ ಸಮುದಾಯದ ಹಿತಚಿಂತನೆಗಾಗಿಯೇ ವರ್ಷದ ಈ ಒಂದು ದಿನವನ್ನು ಮೀಸಲಿಡಬೇಕಾಗಿ ಬಂದಿದೆಯೆಂದರೆ, ನಮ್ಮ ಇತಿಹಾಸದಲ್ಲೇ ಯಾವುದೋ ಒಂದು ದೊಡ್ಡ ತಪ್ಪು ಹೆಜ್ಜೆ ಇಡಲಾಗಿದೆ, ನಾವು ರೂಪಿಸಿಕೊಂಡಿರುವ ನಾಗರೀಕತೆಯಲ್ಲೇ ಏನೋ ಒಂದು ಮೂಲದೋಷವಿದೆ ಎಂದೇ ಅರ್ಥ. ನಿಜ, ಆಧುನಿಕ ಚಿಂತನೆಗಳ ಬೆಳಕಿನಲ್ಲಿ, ಇತ್ತೀಚಿನ ವರ್ಷಗಳಲ್ಲಿ ಮಹಿಳಾ ಸಮಾನತೆಯ ದಿಕ್ಕಿನಲ್ಲಿ ಕೆಲ ಕ್ರಾಂತಿಕಾರಿ ಹೆಜ್ಜೆಗಳನ್ನಿಡಲಾಗಿದೆ. ಕೆಲ ವರ್ಷಗಳ ಹಿಂದಷ್ಟೇ ಕಲ್ಪಿಸಿಕೊಳ್ಳಲೂ ಸಾಧ್ಯವಿರದಿದ್ದ ಕ್ಷೇತ್ರಗಳಲ್ಲಿ ಹೆಣ್ಣು ಗಂಡಿಗೆ ಸಮನಾಗಿ ಹೆಜ್ಜೆ ಇಡುತ್ತಿದ್ದಾಳೆ. ಇದರೊಂದಿಗೆ ಪರಿಸ್ಥಿತಿ ಸ್ವಲ್ಪ ತಹಬಂದಿಗೆ ಬರುತ್ತಿದೆ ಎಂದೆನ್ನಿಸುತ್ತಿರುವ ಹೊತ್ತಿನಲ್ಲೇ, ಜಾಗತೀಕರಣವೆಂಬ ವಿಫುಲ ಮತ್ತು ಮುಕ್ತ ಅವಕಾಶ ಮತ್ತು ಸ್ವಾತಂತ್ರ್ಯದ ದಿನಗಳೂ ನಮ್ಮನ್ನು ಆಕ್ರಮಿಸಿಕೊಳ್ಳತೊಡಗಿದೆ. ಇದರ ಪರಿಣಾಮವೆಂದರೆ ಸಮಾಜದೊಳಗೆ ಸಾಧಿತವಾಗುತ್ತಿದ್ದ ಗಂಡು-ಹೆಣ್ಣಿನ ಸಮತೋಲನ ಗುಣಾತ್ಮಕ ಪಲ್ಲಟಕ್ಕೆ ಒಳಗಾಗಿ, ಹೊಸ ಸಮಸ್ಯೆಗಳು ಸೃಷ್ಟಿಯಾಗಿವೆ ಎಂಬ ವಾದವೂ ಇದೆ. ಇದು ಹೆಣ್ಣು ಗಂಡಾಗುತ್ತಾ ಗಂಡಿನ ಜೊತೆ ಸೇರಿಕೊಂಡು ಹೆಣ್ಣೇ ಕಾಣೆಯಾಗತೊಡಗಿದ್ದಾಳೆ ಎಂಬ ಆತಂಕ ಹಲವು ವಲಯಗಳಿಂದ ಕೇಳಿಬರತೊಡಗಿದೆ.

ಸ್ತ್ರೀ ಸ್ವಾತಂತ್ರ್ಯ-ಸಮಾನತೆಗಾಗಿ ಹಂಬಲಿಸಿದ, ತಮ್ಮದೇ ಮಿತಿಗಳಲ್ಲಿ ಪ್ರಯತ್ನಗಳನ್ನೂ ಮಾಡಿದ ಈ ಹಿಂದಿನ ತಲೆಮಾರುಗಳ ಮಹಿಳೆಯರಿಗೆ ಈ ಹೊಸ ಪರಿಸ್ಥಿತಿಯಲ್ಲಿ, ತಮ್ಮ ಕಣ್ಮುಂದಿನ ಹೊಸ ತಲೆಮಾರಿನ ಹೆಣ್ಮಕ್ಕಳನ್ನು ನೋಡಿದಾಗ ಏನನ್ನಿಸುತ್ತದೆ? ಇಲ್ಲಿವೆ ಕೆಲ ಅನ್ನಿಸಿಕೆಗಳು -ಸಂ

ಹೆಣ್ಣುಮಗಳು ಈಗ ತುಂಬಾ ಗಟ್ಟಿಗಿತ್ತಿಯಾಗಿರಬೇಕು!



ಹಾಂ, ಒಂದು ನಿಮಿಷ ತಡೆಯಿರಿ, ನನ್ನ ಸರ್ಜನ್ ಮೊಮ್ಮಗಳು ಮಾತು ಬರೆಯುತ್ತಿದ್ದಾಳೆ. ಇದೇನು ಮಾತು ಬರೆಯುವುದೇ, ಹೌದು, ಮೊಬೈಲ್‌ದಲ್ಲಿ ಎಂಬತ್ತು ವರ್ಷದ ನನ್ನ ಯೋಗಕ್ಷೇಮ ವಿಚಾರಿಸುತ್ತಿದ್ದಾಳೆ, ಅವಳಿಗೆ ನನ್ನ ಮೇಲೆ ಬಹಳ ಪ್ರೀತಿ, ಆದರೆ ಸರ್ಜನ್ ಕೆಲಸ, ಎರಡು ಪುಟ್ಟ ಮಕ್ಕಳು, ಮನೆಯ ಜವಾಬ್ದಾರಿ. ಗಂಡ ಫುಲ್ ಟೈಮ್ ಡಾಕ್ಟರ, ಇಬ್ಬರಿಗೂ ಕೂತು ಮಾತನಾಡಲು ಪುರಸೊತ್ತೇ ಇಲ್ಲ. ಈಗ ಅವಳ ಮೊಬೈಲ್ ಸಹಾಯಕ್ಕೆ ಬಂದಿದೆ, ಇದು ನಮ್ಮ ಮನೆಯಲ್ಲಿನ ಜಾಗತೀಕರಣ!

ಬ್ರಿಟಿಶ್‌ರ ಆಡಳಿತ ವ್ಯವಸ್ಥೆಯಲ್ಲಿ ಗಾಂಧೀಜಿ ಅಪೇಕ್ಷೆಯಂತೆ ಮಹಿಳೆಯರು ಜಾತಿ, ಕುಲ, ಅಂತಸ್ತು, ಸ್ಥಾನಮಾನ, ಹಳ್ಳಿ-ಪಟ್ಟಣ ಎಂದು ಎಣಿಸದೆ ದೇಶದ ಸ್ವಾತಂತ್ರ್ಯಕ್ಕಾಗಿ ಚಳುವಳಿಯಲ್ಲಿ ಧುಮುಕಿದರು. ಆದರೆ ದೇಶ ಸ್ವತಂತ್ರವಾದ ಮೇಲೆ ಮತ್ತೆ ಮಹಿಳೆ ಎರಡನೆಯ ದರ್ಜೆಯ ಪ್ರಜೆಯಾದದ್ದು, ಅವಳು ಪಡೆದ ಶಿಕ್ಷಣ, ಬುದ್ಧಿಮತ್ತೆ, ದೇಶಪ್ರೇಮ ಎಲ್ಲವೂ ನಾಲ್ಕು ಗೋಡೆಗಳ ಮಧ್ಯೆ ಮುಚ್ಚಿ ಹೋದದ್ದು ವಿಚಿತ್ರವಾದರೂ ಸತ್ಯ.

ಇನ್ನು ಸಮಾನತೆ ಎನ್ನುವದು ಕನಸಿನ ಮಾತು. ಪುರುಷ ಅಥವಾ ಪತಿಗೆ ಹೆಣ್ಣಿಗೂ ಬುದ್ಧಿ ಇದೆ, ಅಭಿಪ್ರಾಯಗಳಿವೆ, ಕುಟುಂಬದ ಹಿತ ಕಾಪಾಡಬಲ್ಲಳು ಅವಳೊಡನೆ ಮಂತ್ರಾಲೋಚನೆ ಮಾಡಬಹುದು ಎನ್ನುವ ಆಲೋಚನೆಯೆ ಹತ್ತಿರ ಸುಳಿಯುವುದಿಲ್ಲ. ಅವಳನ್ನೇನು ಕೇಳುವದು ಎಂಬ ಉಡಾಫೆಯ ಸ್ವಭಾವದ ಅಹಂಕಾರಿಗಳ ಸಂಖ್ಯೆಯೇ ಜಾಸ್ತಿ.

ಮೊದಲು ಹೆಣ್ಣುಮಕ್ಕಳ ಮದುವೆಯನ್ನು ಪಾಲಕರು ಚಿಕ್ಕವಯಸ್ಸಿನಲ್ಲಿ ಮಾಡುತ್ತಿದ್ದರು. ಈಗಿನ ಬಹುಸಂಖ್ಯೆಯ ಹೆಣ್ಣುಮಕ್ಕಳು ವಿದ್ಯಾಭ್ಯಾಸದಿಂದ ಒಳ್ಳೆಯ ನೌಕರಿ ಹಿಡಿದು ಸಾಧ್ಯವಿದ್ದಷ್ಟು ಆರ್ಥಿಕವಾಗಿ ಸ್ವತಂತ್ರರಾಗಬಯಸುತ್ತಿದ್ದಾರೆ. ಜಾಗತೀಕರಣದ ನಂತರ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿದ್ದು ಮಹಿಳೆಗಾದ ದೊಡ್ಡ ಪ್ರಯೋಜನ. ಈ ಆರ್ಥಿಕ ಸ್ವಾತಂತ್ರ್ಯ ಉಳಿಸಿಕೊಳ್ಳಲು ಹೆಣ್ಣುಮಗಳು ತುಂಬಾ ಗಟ್ಟಿಗಿತ್ತಿಯಾಗಿರಬೇಕು. ಈ ಮಾತನ್ನು ಪಟ್ಟಣದ, ಮಧ್ಯಮ ವರ್ಗದ ಮಹಿಳೆಯ ಬಗ್ಗೆ ಮಾತ್ರ ಹೇಳಬಹುದು. ಭಾರತದ ಹಳ್ಳಿಗಳಲ್ಲಿ ಜೀವಿಸುವ ಲಕ್ಷಾಂತರ ಬಡ ರೈತಾಪಿಗಳು ಕೂಲಿ-ಕಾರ್ಮಿಕ ಮನೆಗಳ ಹೆಣ್ಣುಮಕ್ಕಳ ಜೀವನವಿಧಾನದಲ್ಲಿ ಒಳ್ಳೆಯ ದಿನಗಳು ಬಂದಿಲ್ಲ. ಹಾಗಾಗಿ ಅಲ್ಲಿ ಆ ಸಮಸ್ಯೆಯೇ ಇಲ್ಲ.

-ಶಾಂತಾದೇವಿ ಕಣವಿ, ಧಾರವಾಡ

ಒಂದು ಲಕ್ಷ್ಮಣಗೆರೆಯನ್ನು ತಾನೇ ಹಾಕಿಕೊಳ್ಳಬೇಕಿದೆ



ಇತ್ತೀಚಿನ ತಲೆಮಾರಿನ ಹೆಣ್ಣು ಮಕ್ಕಳನ್ನು ಕಂಡಾಗ ಸಂಕೀರ್ಣ ಭಾವಗಳು ಏಕಕಾಲದಲ್ಲಿ ಹೃದಯ ಕಲಕಿ ಮೊರೆಯುತ್ತವೆ. ಸಂಕಟಗಳು ಮೈದುಂಬಿ ಬರುತ್ತವೆ. ಒಮ್ಮೆ ಹರ್ಷ, ಮತ್ತೊಮ್ಮೆ ವಿಷಾದ, ಒಮ್ಮೆ ತಲ್ಲಣ, ಮಗದೊಮ್ಮೆ ಆತಂಕ, ಒಮ್ಮೆ ರೋಮಾಂಚನ, ಮತ್ತೊಮ್ಮೆ ಭಯ - ಈ ಮಿಶ್ರ ತೂಗುಯ್ಯಾಲೆಯಲ್ಲಿ ಇಂದಿನ ಹೆಣ್ಣನ್ನು ಒಂದು ಕಡೆ ಸ್ಥಾಯಿಗೊಳಿಸಲು ಸಾಧ್ಯವಾಗುವುದಿಲ್ಲ. ಅವಳ ಚಿಂತನೆಯೇ ಒಂದು ಸಂಚಾರಿ ಭಾವ.

ಹಿಂದಿನದಕ್ಕಿಂತಾ ಇಂದು ಮಹಿಳೆಯ ಜಗತ್ತು ವಿಸ್ತರಿಸಿದೆ. ಬೆಳೆಯಲು ವಿಪುಲ ಅವಕಾಶಗಳು ದೊರೆತಿವೆ. ಎಲ್ಲರಿಗೂ ಅಕ್ಷರ ಲೋಕದ ಬಾಗಿಲು ತೆರೆದಿದೆ. ಜಾಗತೀಕರಣ ಆಕೆಗೆ ಹೆಚ್ಚಿನ ಸ್ವಾತಂತ್ರ್ಯ ಒದಗಿಸಿದೆ. ಉದ್ಯೋಗದ ಅವಕಾಶಗಳು ಕಾಲುಬುಡಕ್ಕೆ ಬಂದು ಬೀಳುತ್ತಿವೆ. ಆರ್ಥಿಕ ದೃಢತೆ ಸಿಕ್ಕಿದೆ. ದೇಶ-ವಿದೇಶಗಳಲ್ಲಿ ಹಾರಾಡುತ್ತಾ ಸ್ವಚ್ಛಂದ ವಿಹಾರ ಮಾಡುತ್ತಿದ್ದಾಳೆ.

ಈ ಎಲ್ಲ ಸವಲತ್ತುಗಳ ನಡುವೆ ಆಕೆ ಸುಖವಾಗಿದ್ದಾಳೆಯೆ? ಸಂತೃಪ್ತ ಜೀವನ ಅವಳದಾಗಿದೆಯೆ? ತಿಳಿಯದು. ದೊರೆತಿರುವ ಸವಲತ್ತುಗಳ ಜೊತೆಜೊತೆಯಲ್ಲಿಯೇ ವಿಪತ್ತುಗಳ ಸರಮಾಲೆಯೂ ಆಕೆಯ ಬದುಕಿಗೆ ಸುತ್ತಿಕೊಂಡಿದೆ. ಅವಳ ಬದುಕು ಇಂದು ಸಂಕೀರ್ಣವಾಗಿದೆ, ಸಮಸ್ಯೆಗಳ ಬೀಡಾಗಿದೆ. ಆಕೆಯ ವೇಗ ಹೆಚ್ಚಿದಷ್ಟೂ ಅವಘಡಗಳೂ ಸಹ ಹೆಚ್ಚಿವೆ.

ಹೆಣ್ಣು ಇಂದು ತನ್ನ ವೇಗದ ನಡಿಗೆಯ ಬಗೆಗೆ ಸದಾ ಜಾಗೃತಳಾಗಿರಬೇಕಿದೆ. ತನ್ನ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳದೆ ಎಚ್ಚರಿಕೆಯ ಹೆಜ್ಜೆ ಇಡಬೇಕಿದೆ. ಎಚ್ಚರ ತಪ್ಪಿದಲ್ಲಿ ಆ ಅವಘಡಗಳನ್ನು ಅವಳೇ ಆಹ್ವಾನಿಸಿದಂತಾಗುತ್ತದೆ. ಅನಂತರವಷ್ಟೆ ಮಹಿಳೆಯ ಬಳಿಗೆ ಕಾನೂನು, ರಕ್ಷಣೆ, ಸುವ್ಯವಸ್ಥೆ ಬರುವುದು!

ತನಗೆ ದೊರೆತಿರುವ, ದೊರಕಿಸಿಕೊಂಡಿರುವ ಸವಲತ್ತುಗಳಿಂದ ಹೆಣ್ಣು ಇಂದು ವ್ಯಕ್ತಿ ಕೇಂದ್ರಿತಳಾಗಿ ವ್ಯಾವಹಾರಿಕ ಬದುಕಿನಲ್ಲಿ ತನ್ನನ್ನು ತಾನೇ ಬಂಧಿಸಿಕೊಂಡಿದ್ದಾಳೆ. ಸೀಮಿತ ಪರಿಧಿಯ ಒತ್ತಡದಲ್ಲಿ ಸಿಲುಕಿಕೊಂಡಿದ್ದಾಳೆ. ದೊರಕಿರುವ ಸ್ವಾತಂತ್ರ್ಯದ ಗೌರವವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಸ್ವೇಚ್ಛಾಚಾರದ ಸುಳಿಯಲ್ಲಿ ಸಿಲುಕಿ ಮಾನಸಿಕ ನೆಮ್ಮದಿ ಕಳೆದುಕೊಳ್ಳುತ್ತಿದ್ದಾಳೆ. ಮದುವೆ ತನ್ನ ಅರ್ಥವಂತಿಕೆಯ ಸೊಗಸು-ಸೊಗಡನ್ನು ಕಳೆದುಕೊಳ್ಳುತ್ತಿದೆ. ಕ್ಷುಲ್ಲಕ ಕಾರಣಗಳಿಗಾಗಿ ವಿಚ್ಛೇದನಗಳು ಹೆಚ್ಚಿವೆ. ವಿಘಟಿತ ಕುಟುಂಬಗಳಿಂದ, ಭವಿಷ್ಯದ ಕನಸುಗಳನ್ನು ಕಳೆದುಕೊಂಡ ಅನಾಥ ಮಕ್ಕಳ ಸಂತತಿ ಹೆಚ್ಚುತ್ತಿದೆ,

ಇಂಥ ಮಕ್ಕಳ ಬೇಟೆಯಲ್ಲಿ ತೊಡಗಿರುವ ಭಯೋತ್ಪಾದಕರಿಗೆ ಇದು ವರವಾಗಿದೆ. ಇದರಿಂದ ಸಮಾಜ ಎತ್ತ ಸಾಗುತ್ತಿದೆ ಎನ್ನುವುದನ್ನು ನೆನೆದರೆ ಭಯದಿಂದ ತತ್ತರಿಸುವಂತಾಗಿದೆ. ಎಂಥ ಒತ್ತಡದಲ್ಲಿಯೂ ಹೆಣ್ಣು (ಗಂಡು–ಹೆಣ್ಣು) ಒಂದು ಸಂಯಮದ ಲಕ್ಷ್ಮಣಗೆರೆಯನ್ನು ತಾನೇ ಹಾಕಿಕೊಳ್ಳಬೇಕಿದೆ – ಇದರಿಂದ ತಾನೂ ನೆಮ್ಮದಿಯಿಂದ ಬದುಕುತ್ತಾ ಇತರರೂ ನೆಮ್ಮದಿಯಾಗಿ ಬದುಕಲು ಬಿಡಬಹುದು.

–ಕಮಲಾ ಹಂಪನಾ, ಬೆಂಗಳೂರು

ಯಾವುದೂ ಸತತ ಬಿನದದ ದಾರಿ ಅಲ್ಲವಲ್ಲ?



ಏನಂದರೂ, ಇದು ಒಂದು ರೀತಿಯಲ್ಲಿ ಮಹಿಳೆಯರನ್ನು ತುಸುಮಟ್ಟಿಗೆ ವಿಮೋಚನೆ ಗೊಳಿಸಿದ ಕಾಲ. ಮುಂದಿನ ಪೀಳಿಗೆ ಕೆಡುತ್ತಿದೆ, ಹದ ಮೀರಿ ಹೋಗುತ್ತಿದೆ ಎಂಬ ಆತಂಕದಲ್ಲಿಯೇ ಕಾಲಗಳು ದಾಟುತ್ತಿರುತ್ತವೆ, ಅದರಲ್ಲಿಯೂ ಮಹಿಳಾ ಪ್ರಪಂಚವೋ ಸದಾ ಒಂದು ಕ್ಷಣ ತಪ್ಪದೆ ಎಲ್ಲರ ಕಣ್ಣಡಿಯಲ್ಲೇ ಟೀಕೆ ಟಿಪ್ಪಣಿ ತೆಗಳಿಕೆ ಕಂಟ್ರೋಲುಗಳ ನಡುವೆಯೇ ಉಸಿರಾಡಿದೆ. ಅದು ಹೇಗಿದೆಯೋ ಹಾಗೆಯೇ ಇರಬೇಕು ಎಂಬ ಬಯಕೆ; ಅದು ಬದಲಾದರೆ ಪ್ರಪಂಚವೇ ಕೆಟ್ಟು ಹೋಗುತ್ತದೆ ಎಂಬ ಭಯಂಕರ ಭೀತಿ. ಅಲ್ಲಿ ಒಂದೇ ಒಂದಿಷ್ಟು ಬದಲಾದರೂ ಆಗಬಾರದ ಯಾವುದೋ ದೊಡ್ಡ ಬದಲಾವಣೆ ಆದಂತೆ ಕಂಡು ಅಸಹನೆ–ಇದರ ನಡುವೆಯೇ ಮಹಿಳೆಯ ಸ್ಥಾನ–ಮಾನಗಳು ರೂಪ–ರೂಪಾಂತರಗೊಳ್ಳುತ್ತಲೇ ಬಂದಿವೆ. ವಿಧವೆಯರ ನಿರ್ವಿಣ್ಣ ವಿಷಣ್ಣ ಅಸಹಾಯಕ ದಿನಗಳನ್ನು ವಿಷಮ ಮದುವೆಗಳ ದುರಂತ ಅಧ್ಯಾಯಗಳಲ್ಲಿ ಹೆಣ್ಣು ವಿಲವಿಲ ಒದ್ದಾಡುವುದನ್ನು ಕಣ್ಣಾರೆ ಕಂಡ ಪೀಳಿಗೆ ನನ್ನದು. ಇವತ್ತು ಆರ್ಥಿಕವಾಗಿ ಸ್ವಂತ ಬಲದಲ್ಲಿ ಆಕೆ ನಿಲ್ಲಬಹುದು, ಬೇಡದ ದಾಂಪತ್ಯದಿಂದ ಹೊರಬರಬಹುದು ಎನ್ನುವುದು ಎಷ್ಟು ದೊಡ್ಡ ಸಮಾಧಾನವೆನ್ನಲಿ! (ಜೊತೆಗೇ– ತೆರೆದಿದೆಯೆಂದು ಕಾಣುವ ಬಾಗಿಲುಗಳು ಒಂದೆಡೆ ಮುಚ್ಚುತ್ತಿರುವುದು; ಎಲ್ಲಿದ್ದರೂ ಹೇಗಿದ್ದರೂ ಎಂಥವರಿದ್ದರೂ ಎಂತಹ ಸ್ಥಿತಿಗತಿ ಶಿಕ್ಷಣ ಹುದ್ದೆ ಇದ್ದರೂ ಇಲ್ಲದಿದ್ದರೂ ಅಂತಿಮವಾಗಿ ಅವಳು ಹೆಣ್ಣು ದೇಹ ಮಾತ್ರವಾಗಿ 'ಕಾಣುವುದು'; ಆಕೆಯ ಸುರಕ್ಷಿತತೆಗೆ ಘನತೆಗೆ ಎಂದಿಗಿಂತಲೂ ಹೆಚ್ಚಿನ ಊಹಿಸಲಸಾಧ್ಯ ಪೈಶಾಚಿಕತೆ ಎರಗಿರುವುದು ಎಂತಹ ದೊಡ್ಡ ದುಃಖವೆನ್ನಲಿ!)

ಸಾರ್ವತ್ರಿಕವಾಗಿ ಬದುಕಿನ ಕ್ರಮದಲ್ಲೇ ಬದಲಾವಣೆಯಾಗಿದೆ ಎಂದರೆ, ಮಹಿಳೆಯರು ಮಾತ್ರ ಹೇಗೆ ಬದಲಾಗದೆ ಇರಲು ಸಾಧ್ಯ? ಈಗ ಏನು ಬದಲಾವಣೆ ಕಾಣುತ್ತಿದೆ, ಅದು ಅನಿವಾರ್ಯ. ಅದರಲ್ಲಿ ಅಚ್ಚರಿಯೇನಿಲ್ಲ. ಪ್ರಪಂಚ ಒಂದೆಡೆ ಒಂದು ಗುಳಿಗೆಯಷ್ಟು ಸಾಂದ್ರವಾಗುತ್ತಿದೆ; ಅಷ್ಟೇ ಅಪರಿಚಿತವೂ. ಪಾರದರ್ಶಕವಾಗುತ್ತಿದೆ, ಜೊತೆಗೇ ಉಕ್ಕಿನ ಪರದೆ ಹಾಕಿದಂತೆ ಅಪಾರದರ್ಶಕವೂ. ಇಂದು ದೊರೆವ ಅವಕಾಶಗಳ ಹಾಗೂ ಕಣ್ಣುಮುಖವಿಲ್ಲದ ಅಭಿವೃದ್ಧಿ ಆಸೆ ಆಕಾಂಕ್ಷೆಗಳ ಸ್ಫೋಟ ಹಿಂದಿನ ಕಾಲದಲ್ಲೇ ಆಗಿದ್ದಲ್ಲಿ, ಯಾವಾಗಲೋ ಮಹಿಳಾ ಜಗತ್ತೂ ಕೂಡಿಯೇ ಇಡೀ ಜಗತ್ತು ಈ ರೀತಿಯಾಗಿಯೇ ಬದಲಾಗುತ್ತಿತ್ತು. ಈಗ ಆಗಿದೆ; ತಕ್ಕನಾಗಿ ಮಹಿಳಾ ತಲೆಮಾರೂ ಇವತ್ತು 'ನಿರ್ಣಾಯಕ ಬದಲಾವಣೆ'ಗೆ ಒಳಗಾಗಿದೆ. ಉಪ–ಪರಿಣಾಮಗಳೇನೇ ಇರಲಿ, ಅದು ಸಹಜ ಅಷ್ಟೇ ಅಲ್ಲ, ವೈಯಕ್ತಿಕವೂ. 'ಇವತ್ತು ಹಳ್ಳಿ ಹುಡುಗಿಯರೂ ಮುಂಚಿನ ಕಾಲದ ಹಳ್ಳಿ ಹುಡುಗಿಯರಂತಿಲ್ಲ. ಅವರ ಆಕಾಂಕ್ಷೆಯ ದಿಗಂತ ಮುಂದರಿಯುತ್ತಲೇ ಇದೆ' ಅಂತಲೂ ಹೇಳುತ್ತಾರೆ. ಹಳ್ಳಿಗಳೇ ಬದಲಾಗುತ್ತಿರುವಾಗ ಹುಡುಗಿಯರು ಮಾತ್ರ ಬದಲಾಗಬಾರದು ಅಂದರೆ ಏನರ್ಥ?

ಅವಧಾರಣೆಯ ಕಷ್ಟ ಎಲ್ಲಿ ಅಂದರೆ ಬದಲಾವಣೆಯ ಇವತ್ತಿನ ವೇಗದಲ್ಲಿ. ಅದು ಎಂದಿಗಿಂತ 'ಫಾಸ್ಟ್' ಅಷ್ಟೇ ಅಲ್ಲ, 'ಸೂಪರ್ ಫಾಸ್ಟ್'. ಸಮನಾಗಿ ಮಹಿಳೆಯೂ ಸೂಪರ್ ಫಾಸ್ಟ್ ಆಗಿ ಬದಲಾಗುತಿದ್ದಾಳೆ–ಹಾಗೆ 'ಕಾಣುತ್ತಿದ್ದಾಳೆ'. ವಾಸ್ತವವಾಗಿ, ಕೆಲ ಅಪವಾದಗಳನ್ನು ಬಿಟ್ಟರೆ, ಇವತ್ತು ಮಹಿಳೆಯ ಸಾಮಾನ್ಯ ಸ್ಥಿತಿಯಲ್ಲಿ ಅಂಥದ್ದೇನೂ ದೊಡ್ಡ 'ಕಿವಿಮಾತು' ಹೇಳಬೇಕಾದ ನಕಾರಾತ್ಮಕ ಬದಲಾವಣೆಗಳು ಇಲ್ಲ. ನನ್ನ ಸುತ್ತಮುತ್ತಣದಲ್ಲಂತೂ ಇಲ್ಲ. ದೃಶ್ಯಮಾಧ್ಯಮಗಳು ಬಿಂಬಿಸುವಷ್ಟಂತೂ ಖಂಡಿತ ಇಲ್ಲ. ನಗರಗಳಲ್ಲಿ, ಮುಂದರಿದ ಸಮಾಜದ ಚಟುವಟಿಕೆಗಳಲ್ಲಿ ಮಹಿಳೆ ಹಾಗೆ ಇರಬಹುದೇನೊ. ಸದ್ಯ ವಾಣಿಜ್ಯ ದೃಷ್ಟಿಯೇ ಎಲ್ಲವನ್ನೂ ಎಲ್ಲರನ್ನೂ ಆಳುತ್ತಿರುವಾಗ ಒಮ್ಮೆ ಅಲ್ಲೋಲಕಲ್ಲೋಲ ಆಗಿಯೇ ಭ್ರಮನಿರಸನವಾಗಿ ಸಮಸ್ಥಿತಿಗೆ ನಾವು –ಪುರುಷರೂ ಮಹಿಳೆಯರೂ – ತಲುಪಬೇಕಷ್ಟೆ? ಅವಕಾಶಗಳನ್ನು ಗರಿಷ್ಠ ಬಳಸಿಕೊಂಡು ತಮ್ಮ ದಾರಿಯನ್ನು ನಿಚ್ಚಳ ಮಾಡಿಕೊಳ್ಳಲು ಹೊರಟ ಮಹಿಳಾ ಜಗತ್ತು ಇವತ್ತಿನದು. ಹೊರಟ ರಭಸದಲ್ಲಿ ಕೆಲ ಅವಿವೇಕತನ, ಅತಿರೇಕ, ಅನುಕರಣೆ, ಗಲಿಬಿಲಿ ಕಾಣಬಹುದು. ಪುರುಷ ಪ್ರಪಂಚದಲ್ಲಿ ಲಾಗಾಯ್ತಿನಿಂಲೂ ಇದ್ದ ಇದು, ಹೊರಪ್ರಪಂಚಕ್ಕೆ ಹೊರಟ ಮಹಿಳೆಗೂ ಅನಿವಾರ್ಯವಾಗಿ ದಾಟಿರಬಹುದು. ಕಡೆಗೂ ಎಲ್ಲವನ್ನೂ ತಹಬಂದಿಗೆ ತರುವುದು ಅವರವರ ಬದುಕಿನ ಅನೂಹ್ಯ ಸಂಕೀರ್ಣತೆ, ಅವರವರು ನಿಭಾಯಿಸಬೇಕಾದ ವಾಸ್ತವತೆ. ಕಷ್ಟ ನಿಷ್ಠುರತೆ.

ಯಾವುದೂ ಸತತ ಬಿನದದ ದಾರಿ ಅಲ್ಲವಲ್ಲ?

ಆದರೂ,

ವಿವೇಕ ಕಳೆಯಿತೆಂದು ಗ್ಯಾರಂಟಿ ಕಂಡಿತೆಂದರೆ 'ವಿವೇಕವೊಂದನ್ನು ಕಳೆಯಬೇಡಿರೋ' ಎಂಬ ಕಿವಿಮಾತನ್ನಾದರೂ ಹೇಳದೆ ಬಿಡಲಾಗದು; ಅದು ಅವರ ಕಿವಿಗೆ ದಾಖಲಾಗಲಿ, ಬಿಡಲಿ. ಅಷ್ಟೂ ಹೇಳದೆ ಹೋದರೆ ಹಿರಿಯರಾಗಿದ್ದೂ ಕರ್ತವ್ಯ ವಿಮುಖರಾದಂತೆ.

–ವೈದೇಹಿ, ಮಣಿಪಾಲ

ಸಾಹಿತ್ಯ, ಸಂಘಟನೆ, ಹೋರಾಟಗಳು ನನ್ನ ಆಶಾಕಿರಣಗಳು



ಈಗ ಹಲವು ಕಾರಣಗಳ ಹಿನ್ನೆಲೆಯಲ್ಲಿ ಮೌಲ್ಯಗಳು ಬದಲಾಗಿವೆ. ಆದರೆ ಈ 'ಮೌಲ್ಯ'ಗಳು ನಮಗೆ ಆಪ್ತವಾದವೆ? ಅವು ಹೇಗಿರಬೇಕೆಂದು ನಾವು ಚರ್ಚಿಸಿಯೇ ಇರಲಿಲ್ಲವೇನೋ!

ತಾವು ಹೇಳುವ ಇತ್ತೀಚಿನ ತಲೆಮಾರು ಯಾವುದು? ಇವರ ಹೋರಾಟದಿಂದ ಸಿಕ್ಕ ಅವಕಾಶದ ಲಾಭ ಪಡೆದು ಸ್ಥಾನ–ಮಾನ ಅಧಿಕಾರಾದಿಗಳನ್ನು ಪಡೆದು ನಿರ್ವಹಿಸಲಾಗದೆ ಎಡವಟ್ಟು ಮಾಡಿಕೊಳ್ಳುತ್ತಿರುವ 'ಎತ್ತರದ' ಮಂದಿಯನ್ನು ನಾನು 'ಮಾದರಿ' ಎಂದು ಪರಿಗಣಿಸಿಲ್ಲ. ಹಾಗಾಗಿ ಅವು ನನಗೆ ತಲ್ಲಣಗಳಲ್ಲ, ಸಂಕೋಚಗಳು... ಮುಜುಗರಗಳು.

ಆದರೆ ಹತ್ತಿಕ್ಕಿದ್ದ ಉಸಿರನ್ನು ಬಿಡಿಸಿಕೊಂಡು ಸರಾಗವಾಗಿ ಹೊರಗಿಣಿಕಿ ನೋಡುತ್ತಿರುವ ಒಂದು ಸಮುದಾಯ ನನ್ನ ಮುಂದಿದೆ. ಇದೀಗ ಅಕ್ಷರ ಕಲಿತು, ತನ್ನತನವನ್ನೂ ಗ್ರಹಿಸಿ, ಸ್ವಾವಲಂಬಿಯಾಗಿ, ಇದು ನನ್ನದೂ ಹೌದು ಎನ್ನುತ್ತ ಅದಾಗಲೇ ಅಂಡೂರಿದವರನ್ನತ್ತ ನೂಕಿ ತನ್ನ ಸ್ಥಾನ ಕಾಯ್ದುಕೊಳ್ಳಲು ನುಗ್ಗಿ ಬರುತ್ತಿರುವ ತಳ ಸಮುದಾಯದ ದೊಡ್ಡ ಪಡೆ ಸಿದ್ಧವಾಗುತ್ತಿದೆ. ಲೈಂಗಿಕ ಅಲ್ಪಸಂಖ್ಯಾತರು, ಲಿಂಗತ್ವ ಅಸಮಾನತೆಯ ಜನಾಂಗ ಎದ್ದು ನಿಂತಿವೆ. ನನ್ನ ಭರವಸೆ, ಆಸೆಯ ನೋಟ ಅತ್ತ ನೆಟ್ಟಿದೆ. ಆ ದಾರಿ, ಉದ್ದೇಶ ಸ್ಪಷ್ಟ, ನಿಖರ ಆಗಬೇಕೆಂದು ಮನಸ್ಸು ಬಯಸುತ್ತಿದೆ.

ಹೆಂಗಸರಿಂದ ಕಾನೂನಿನ ದುರುಪಯೋಗ, ಸ್ವೇಚ್ಛೆ, ಪುರುಷರ ಶೋಷಣೆ, ಹಣಕ್ಕಾಗಿ ವಂಚನೆ ಹೀಗೆ ನೂರಾರು ಆಕ್ಷೇಪಗಳೂ ಕೇಳಿಬರುತ್ತಿವೆ. ಅದಕ್ಕಾಗಿ ಪುರುಷ ರಕ್ಷಕರ ಸಂಘವೂ, ಅದಕ್ಕೊಬ್ಬ ಮಹಿಳೆಯೇ ಅಧ್ಯಕ್ಷಳಾಗುವುದೂ ನಡೆದಿದೆ! ಇವರಿಗ್ಯಾರಿಗೂ ಈ ನಾಡಿನ ಅಸಂಖ್ಯಾತ ಹೆಣ್ಣುಗಳು, ಮಕ್ಕಳ ಮೇಲಿನ ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ಟ್ರಾಫಿಕಿಂಗ್, ಹೆಣ್ಣುಭ್ರೂಣಹತ್ಯೆ ಕಾಣುತ್ತಿಲ್ಲ. ಈಗ ಆ ಪದಗಳೇ ಕ್ಲೀಷೆಯಂತೆ! ಅನುಭವಿಸುವವರಿಗೆ?

ಆದರೆ ಇದೆಲ್ಲದರ ಹಿಂದೆ ಸೂತ್ರ ಹಿಡಿದ 'ಅವನು' ಇದ್ದಾನೆ. ಇನ್ನೂ ಹುನ್ನಾರಗಳ ಹೂರಣ ಅರ್ಥವಾಗದ 'ಅವಳ'ನ್ನು ಅವಳ ದಾರಿಯಲ್ಲೇ ಅಡ್ಡಾಡಿಸುತ್ತ ಲಾಭ ಪಡೆವ ಜಾಣ ಅವನು. ಅವನು ಜಾಗತೀಕರಣದ ನಿಜವಾದ ಫಲಾನುಭವಿ. ಈ ಚಕ್ರವ್ಯೂಹದಿಂದ ಬಿಡಿಸಿಕೊಳ್ಳಿ, ಅಸ್ಮಿತೆ ಉಳಿಸಿಕೊಳ್ಳಿ, ಹೋರಾಟಗಳು ಶೋಕಿಗಾಗಿ ಅಲ್ಲ. ಮೊದಲು ನಿಮ್ಮ ಮನೆಯಂಗಳದ ಮೌಢ್ಯ, ಹೊಲಸು ತೊಡೆದು ಹಾಕಿ, ಜಗುಲಿ ಬೀದಿ ಬಜಾರಿಗೂ ಬನ್ನಿ. ಇಲ್ಲದಿದ್ದರೆ

ಹಿಂದಿರುವ ಮಳ್ಳರು ಹಿರಿದೋ ಹೀರಿಯೋ ಬಿಸಾಕುತ್ತಾರೆ ಎಂದು ಅರೆಬರೆ ತಿಳಿವಳಿಕೆಯಲ್ಲಿ ಮೈಮರೆತ ಮಧ್ಯಮವರ್ಗದ ಜಾಣೆಯರಿಗೆ ಹೇಳಬೇಕೆನ್ನಿಸುತ್ತದೆ.

ನಡೆಯುತ್ತಿರುವುದರ ಬಗ್ಗೆ ನಿರಾಸಕ್ತಿ ತಳೆದು ತಣ್ಣಗಿರುವ ಸಾಹಿತ್ಯಕ್ಷೇತ್ರದ ಒಂದು ಮಹಿಳಾ ಪಡೆ ಮರೆತದ್ದನ್ನು, ಕೈಬಿಟ್ಟಿರುವುದನ್ನು ಪುನಃ ಕೈಗೆತ್ತಿಕೊಳ್ಳಲಿ, ಗಂಭೀರವಾಗಿ ತೊಡಗಿರುವ ಕಿರಿಯರ ಪಡೆಗೆ ಶಕ್ತಿ ತುಂಬಲಿ ಎಂದು ಬಯಸುತ್ತೇನೆ. ಇವೆರಡರ ಸಾಂಗತ್ಯ – ಸಂಚಲನವೇ ಹೊಸ ಹಾಗೂ ಸ್ಪಷ್ಟ ದಿಕ್ಕು ತೋರಬಲ್ಲದು.

ಸಾಹಿತ್ಯ, ಸಂಘಟನೆ, ಹೋರಾಟಗಳು ಇನ್ನೂ ನನ್ನ ಆಶಾಕಿರಣಗಳು.

–ಡಾ. ವಿಜಯಾ, ಬೆಂಗಳೂರು

ಇಂದಿನ ತಲೆಮಾರಿಗೂ ಕಿವಿಮಾತಿಗೂ ಬಹುದೂರ!



ಸುಮಾರು ಐವತ್ತು ವರ್ಷಗಳ ಹಿಂದೆ ಹದಿಹರೆಯದವರಾಗಿದ್ದ ನಮಗೆ ಸಿಕ್ಕಿದ್ದು ಪರಿಮಿತ ಸ್ವಾತಂತ್ರ್ಯ ಯಾವಾಗ ಬೇಕಾದರೂ ಮೊಟಕಾಗಬಹುದಾದ ವಿದ್ಯಾಭ್ಯಾಸ., ಮದುವೆಯೇ ಜೀವನದ ಪರಮಗಂತವ್ಯ ಎಂದು ತಿಳಿದ ತಂದೆತಾಯಿಗಳಿಗೆ ಹೆಣ್ಣುಮಕ್ಕಳ ಭಾರ ಕಳೆದುಕೊಳ್ಳುವ ಯೋಚನೆ. ಇಂಥ ಕಾಲಮಾನದಲ್ಲಿ ಬೆಳೆದ ನನಗೆ ಇಂದು ಒಂದಷ್ಟು ಹೆಣ್ಮಕ್ಕಳಿಗೆ ಸಿಕ್ಕಿರುವ ವಿಚಾರ ಸ್ವಾತಂತ್ರ್ಯ, ಉದ್ಯೋಗ ಸ್ವಾತಂತ್ರ್ಯ ನಿಜಕ್ಕೂ ಸಂತೋಷದ ಸಂಗತಿ. ಆದರೆ ಒಂದಷ್ಟು ಎಂದು ಏಕೆ ಹೇಳಿದೆನೆಂದರೆ ಈ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿರುವುದು ದೊಡ್ಡ, ಸಣ್ಣ ಪುಟ್ಟ ನಗರಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ. ಸಣ್ಣ ಊರುಗಳಲ್ಲಿ ಯಾವ ಅವಕಾಶವೂ ಇಲ್ಲದೆ ಮನೆಯಲ್ಲೇ ಕುಳಿತಿರುವ ಹೆಣ್ಮಕ್ಕಳಿದ್ದಾರೆ.

ಇವತ್ತು ನಗರಗಳಲ್ಲಿ ಉದ್ಯೋಗಾವಕಾಶ ಕೊಡುವಂತಹ ಅನೇಕ ಸಂಸ್ಥೆಗಳಿದ್ದರೂ, ಅಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳಿಗೆ ಒಂದು ಮಟ್ಟದ ಆರ್ಥಿಕ ಸ್ವಾತಂತ್ರ್ಯ ದೊರೆತರೂ ಹಣವೇ ಎಲ್ಲವನ್ನು ಬಗೆಹರಿಸುವ ಸಾಧನವಾಗಿಲ್ಲ. ಅವರಿಗೆ ಅವರದೇ ಆದ ಸಮಸ್ಯೆಗಳಿರುತ್ತವೆ. ಉದಾಹರಣೆಗೆ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ದುಡಿವ ಮಹಿಳೆಯರ ಶೋಷಣೆ, ಲೈಂಗಿಕ ಕಿರುಕುಳ, ಉದ್ಯೋಗ ಮಾಡುವ ಸ್ಥಳದಲ್ಲಿ ರಕ್ಷಣೆ ಇಲ್ಲ. ಉನ್ನತ ಮಟ್ಟದ ಉದ್ಯೋಗದಲ್ಲಿರುವ ಹೆಣ್ಣುಮಕ್ಕಳು ಸಮಯದ ಪರಿವೆ ಇಲ್ಲದೆ ದುಡಿಯಬೇಕಾಗಿರುವುದು, ಇದರಿಂದ ಸಾಂಸಾರಿಕ ಜೀವನದಲ್ಲಿ ಏರುಪೇರು, ಮುಖ್ಯವಾಗಿ ಆರೋಗ್ಯದ ಏರುಪೇರು, ಒತ್ತಡ ರಹಿತ ಬದುಕು ಇವರಿಗಿಲ್ಲ.

ಜಾಗತೀಕರಣದ ದೆಸೆಯಿಂದ ಹುಟ್ಟಿಕೊಂಡ ಹೊಸ ದುಡಿಮೆಯ ಮಾರ್ಗಗಳು ಇಂದಿನ ತಲೆಮಾರಿನ ಹುಡುಗ ಹುಡುಗಿಯರಿಗೆ (ಅದರಲ್ಲೂ ಮುಖ್ಯವಾಗಿ ನಗರಗಳಲ್ಲಿ) ಸಿಕ್ಕ ಆರ್ಥಿಕ ಸ್ವಾತಂತ್ರ್ಯದಿಂದ ಇವರು ತಮ್ಮ ಜೀವನದ ಪ್ರಮುಖ ನಿರ್ಣಾಯಕ ವಿಷಯಗಳಾದ ಬಾಳ ಸಂಗಾತಿಯ ಆಯ್ಕೆಯ ಸ್ವಾತಂತ್ರ್ಯ, ದಾಂಪತ್ಯದಲ್ಲಿ ಸಮಾನತೆಯನ್ನು ನಿರೀಕ್ಷಿಸುವ ಒಂದು ಹೊಸ ಅರಿವನ್ನು ಉಂಟುಮಾಡಿತು. ಸಮಾನತೆಯನ್ನು ಆಚರಿಸುವ ಭರದಲ್ಲಿ ಹಾಗೂ ವೇಗದ ಬದುಕಿನ ಒತ್ತಡದಿಂದ ಇಂದು ನಮ್ಮ ಎಳೆಯವರಲ್ಲಿ ಸಹನೆ, ಪರಸ್ಪರ ಸಹಿಸುವ ಮನೋವೃತ್ತಿ ಕಮ್ಮಿಯಾಗುತ್ತಿದೆ. ಆರ್ಥಿಕ ಸ್ವಾತಂತ್ರ್ಯ ಎನ್ನುವುದು ಹೊಂದಾಣಿಕೆಯ ಸಹನೆಯನ್ನು ಪರೀಕ್ಷಿಸುತ್ತಿದೆ. ಇದೇನು ಅಂತಿಮ ಅಭಿಪ್ರಾಯವಲ್ಲ, ಎಲ್ಲದಕ್ಕೂ ಅಪವಾದ ಇದ್ದೇ ಇರುತ್ತದೆ. ಹೆಣ್ಣು ಗಂಡುಗಳಲ್ಲಿ ಸಮಾನತೆ ಎನ್ನುವುದು ಏಕಾಏಕಿ ಬರುವ ಮನಸ್ಥಿತಿ ಅಲ್ಲ. ಇದು ತಂದೆತಾಯಿಗಳು ತಮ್ಮ ಹೆಣ್ಣು–ಗಂಡು ಮಕ್ಕಳಲ್ಲಿ ತಾರತಮ್ಯ ಮಾಡದೆ ಕೊಡಬೇಕಾದ ತರಬೇತಿ.

ಇಂದು ಜಾಗತೀಕರಣದ ನಂತರ ಅತ್ಯಂತ ಬಳಕೆಯಾಗುತ್ತಿರುವ ಕೆಲವು ಸಾಧನಗಳು ಉಪಯೋಗದ ಜತೆಗೆ ಪಿಡುಗಾಗಿ ಪರಿವರ್ತನೆಯಾಗಿವೆ. ಒಂದೆರಡು ಉದಾಹರಣೆ ಕೊಡುವುದಾದರೆ ಮೊಬೈಲ್ ಮತ್ತು ಜಾಲತಾಣಗಳು. ಶೀಘ್ರಗತಿಯ ಸಂವಹನ ಸಾಧನಗಳಾಗಿ ಉಪಯೋಗವಾಗಬೇಕಾದ ಇವು ಪಿಡುಗಾಗಿರುವುದು ದುರದೃಷ್ಟಕರ. ಇದು ಆಧುನಿಕ ತಂತ್ರಜ್ಞಾನದ ಆವಿಷ್ಕಾರದ ಫಲ. ಇಂದು ಮುಖ್ಯವಾಗಿ ಎಳೆಯರಿಗೆ ಸಿಕ್ಕಿರುವ ಅಭಿಪ್ರಾಯ ಸ್ವಾತಂತ್ರ, ಆರ್ಥಿಕ ಸ್ವಾತಂತ್ರ್ಯಗಳನ್ನು ಗಮನಿಸಿದಾಗ ಸಂತೋಷವಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲದ ದುಡುಕಿನ ನಿರ್ಣಯಗಳು, ಇಷ್ಟೆಲ್ಲಾ ಸ್ವಾತಂತ್ರ್ಯ, ಅವಕಾಶಗಳನ್ನು ಪಡೆದರೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ರಕ್ಷಣೆಯ ಕೊರತೆ ನಿಜಕ್ಕೂ ನಾವು ಯಾವ ಯುಗದಲ್ಲಿದ್ದೇವೆ ಎಂಬ ತಲ್ಲಣವನ್ನು ಉಂಟು ಮಾಡುತ್ತಿದೆ. ಇಂದಿನ ತಲೆಮಾರಿಗೂ ಕಿವಿಮಾತಿಗು ಬಹುದೂರ.

–ಪದ್ಮಾ ಶ್ರೀರಾಮ್, ಮೈಸೂರು

ಮದುವೆ ಮುರಿಯದಿರಿ!



ಮದುವೆ ಎನ್ನುವದು ಜನ್ಮ ಜನ್ಮಾಂತರದ ಬಂಧನ, ಋಣದಿಂದಾಗಿಯೇ ಪತ್ನಿ–ಪತಿ ಸಂಬಂಧ ಉಂಟಾಗುತ್ತದೆ ಎಂಬ ವಿಚಾರಗಳು ಏನೇ ಇರಲಿ, 'ಹೊಂದಾಣಿಕೆ' ಇಲ್ಲದೆ ದಾಂಪತ್ಯ ಯಶಸ್ವಿಯಾಗಲಾರದು. ಪರಸ್ಪರ ಗೌರವ–ವಿಶ್ವಾಸ –ತ್ಯಾಗ – ಪ್ರೀತಿಗಳ ಬುನಾದಿಯ ಮೇಲೇ ಒಂದು ಸಂಸಾರ ಸುಖಿಯಾಗಬಲ್ಲದು. ಗಂಡ ಯಜಮಾನ – ಹೆಂಡತಿ 'ಪತಿಯೇ ಪರದೈವ' ಎಂದು ಭಾವಿಸುವ ಅಡಿಯಾಳು ಎಂಬ ಭಾವನೆ ಸಹಜವಾಗಿಯೇ ಮಾಯವಾಗಿದೆ. ಹಳ್ಳಿಯ ಹೆಣ್ಣುಮಕ್ಕಳೂ, ಗಂಡುಮಕ್ಕಳಿಗಿಂತ ಚೆನ್ನಾಗಿ ಓದುತ್ತಿದ್ದಾರೆ, ವಿದ್ಯಾವಂತರಾಗುತ್ತಿದ್ದಾರೆ. ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ. ಕಾನೂನು ಪ್ರಕಾರ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಪಡೆದಿದ್ದಾರೆ.


ಈ ಬದಲಾದ ಪರಿಸ್ಥಿತಿಯಲ್ಲಿ ಹಿರಿಯರು ನಿಶ್ಚಯಿಸಿದ ಮದುವೆಗಳೇ ಇರಲಿ, ಪ್ರೇಮವಿವಾಹಗಳೇ ಆಗಿರಲಿ, ಇಬ್ಬರ ಮನೋಭಾವದಲ್ಲಿ ಹಲವಾರು ಬದಲಾವಣೆಗಳು ಆಗಲೇ ಬೇಕಾಗಿವೆ. "ನಾನು ಗಂಡನ ಸರಿಸಮಾನಳಾಗಿ ದುಡಿಯುತ್ತೇನೆ, ನಾನೇಕೆ ಅಡಿಗೆ, ಮನೆಕೆಲಸ, ಮಕ್ಕಳ ಜವಾಬ್ದಾರಿ ವಹಿಸಿಕೊಳ್ಳಲಿ" ಎಂದು ಹೆಂಡತಿ, "ನಾನು ಗಂಡು, ನಾನು ಹೇಳಿದ ಹಾಗೆ ಕೇಳಬೇಕು, ಮನೆ, ಅಡಿಗೆ, ಮಕ್ಕಳು ಹೆಂಡತಿಯ ಜವಾಬ್ದಾರಿ" ಎಂದು ಗಂಡ ಭಾವಿಸಿದರೆ ಅಲ್ಲಿಂದಲೇ ಮನಸ್ತಾಪ ಪ್ರಾರಂಭ. ಬಂಧು ಬಳಗ ಏನು ಹೇಳಬಹುದು, ಸಮಾಜ ಏನು ಭಾವಿಸಬಹುದು ಎಂಬ ಕಡಿವಾಣವೇ ಇಲ್ಲದ ವಾತಾವರಣ, ಈ ಮದುವೆ ಮುರಿದರೂ ಇನ್ನೊಂದು ಮದುವೆಯಾಗುವ ಅವಕಾಶವಿದೆ ಎಂಬ ಭರವಸೆ, ಹೊಂದಿಕೊಳ್ಳುವ ಸ್ವಭಾವವನ್ನು ದೂರ ಮಾಡುತ್ತಿದೆ.

ಮುರಿದು ಬೀಳುವ ಮದುವೆಗಳಿಂದ ಮಾನಸಿಕ ಒತ್ತಡ, ಮಾನಸಿಕ ಕ್ಲೇಶ, ಗಂಡ–ಹೆಂಡತಿಯರಿಬ್ಬರಿಗೂ ಖಂಡಿತ. ಜೊತೆಗೆ ಸಣ್ಣ ಮಕ್ಕಳಿದ್ದರಂತೂ ಅವರ ಸ್ಥಿತಿ ಶೋಚನೀಯ. ವಿಭಕ್ತ ಕುಟುಂಬಗಳಾಗಿದ್ದರೂ ಎರಡೂ ಕುಟುಂಬದವರಿಗೆ ಹಲವಾರು ರೀತಿಯ ತೊಂದರೆ ತಪ್ಪಿದ್ದಲ್ಲ. ಯೌವ್ವನದಲ್ಲಿ ಅಂದರೆ ಶಕ್ತಿ ಇದ್ದಾಗ, ಆರೋಗ್ಯವಂತರಾಗಿದ್ದಾಗ ಒಂಟಿಯಾಗಿಯೇ ಬಾಳಬಲ್ಲೆವು ಎಂದು ಅನಿಸಬಹುದು. ಆದರೆ ಆರೋಗ್ಯ ಕೆಟ್ಟಾಗ, ವೃದ್ಧಾಪ್ಯದಲ್ಲಿ ಸಂಗಾತಿಗಳು ಬೇಕೇ ಬೇಕು. ವೃದ್ಧಾಪ್ಯದಲ್ಲಿ ಪತಿ–ಪತ್ನಿ ಯಾರೊಬ್ಬರು ಅಗಲಿದಾಗ, ಮಕ್ಕಳು ಆಸರೆಯಾಗಬಲ್ಲರು. ಒಡೆದ ಮನೆ–ಮನಕ್ಕೆ ಶಾಂತಿ ಎಂಬುದಿಲ್ಲ.

ಗಂಡ–ಹೆಂಡತಿ ಅಹಮ್ಮಿನ ಕೋಟೆಯೊಳಗೆ ಬಂಧಿಯಾಗದೇ, ಹೊಂದಿಕೊಂಡರೆ ದಾಂಪತ್ಯ, ಸ್ವರ್ಗಸುಖವನ್ನು ನೀಡಬಲ್ಲದು. ಮನೆಕೆಲಸ, ಮಕ್ಕಳ ಲಾಲನೆ–ಪಾಲನೆ, ಆರ್ಥಿಕ ಜವಾಬ್ದಾರಿಗಳನ್ನು ಗಂಡ–ಹೆಂಡತಿ ಸ್ನೇಹಿತರಂತೆ ಹಂಚಿಕೊಂಡು ಬಾಳಲು ಸಾಧ್ಯವಿದೆ. ಅದಕ್ಕೆ ಪ್ರಯತ್ನ ಬೇಕು, ದಾಂಪತ್ಯದಲ್ಲಿ ಶ್ರದ್ಧೆ ಬೇಕು. ಭಾವನಾತ್ಮಕವಾದ ಸಂಬಂಧ, ವೈಚಾರಿಕ ಸಾಹಚರ್ಯ ಇದ್ದರೆ ಸರ್ವಜ್ಞ ಹೇಳಿದಂತೆ ಸ್ವರ್ಗಕ್ಕೆ ಕಿಚ್ಚು ಹಚ್ಚಬಹುದು. ಇಂದಿನ ಯುವಜನರಿಗೆ ನನ್ನದೊಂದೇ ಕಿವಿಮಾತು. ಯೋಚಿಸಿ, ಯೋಜಿಸಿ ಮದುವೆಯಾಗಿ. ದಾಂಪತ್ಯವನ್ನು ಯಶಸ್ವಿ ಮಾಡುವದು ಒಂದು ಸವಾಲು ಎಂದು ಭಾವಿಸಿ, ಸಾಧಿಸಿ. ಯಾವುದೇ ಆಮಿಷ, ಉದ್ವೇಗಕ್ಕೆ ಒಳಗಾಗಿ ಅವಸರದಲ್ಲಿ ಮದುವೆಯಾಗಿ, ಬಹುಬೇಗ ಮದುವೆ ಮುರಿದು ವಿರಾಮದಲ್ಲಿ ನರಳುವಂತೆ ಮಾಡಿಕೊಳ್ಳಬೇಡಿ.


–ವಿಜಯಾ ಶ್ರೀಧರ್, ಶಿವಮೊಗ್ಗ

ಸ್ತ್ರೀಶಕ್ತಿ ಸಂಚಲನ : ನಮ್ಮ ಕಾಲದ ಐದು ಮಾದರಿಗಳು



ಇದು ಚಳುವಳಿಗಳ, ಹೋರಾಟಗಳ ಕಾಲ ಅಲ್ಲ ಎನ್ನುವವರಿದ್ದಾರೆ. ಜಾಗತೀಕರಣದ ಈ ದಿನಗಳಲ್ಲಿ ಬದುಕನ್ನು ಲೌಕಿಕವಾಗಿ ಉನ್ನತೀಕರಿಸಿಕೊಳ್ಳ ವಿಫುಲ ಅವಕಾಶಗಳು ಸೃಷ್ಟಿ ಆಗಿದ್ದು, ಹೋರಾಟಗಳಿಗೆ ಜಾಗವೇ ಇಲ್ಲ ಎಂಬ ವಾದವಿದೆ. ಆದರೆ ಈ ಜಾಗತೀಕರಣವು ಈ ವಿಫುಲ ಅವಕಾಶಗಳನ್ನು ಯಾರಿಗಾಗಿ ಮತ್ತು ಯಾಕಾಗಿ ಸೃಷ್ಟಿಸುತ್ತಿದೆ ಎಂಬ ಪ್ರಶ್ನೆಗಳನ್ನು ಆಳವಾಗಿ ಕೆದಕಿ ನೋಡಿದಾಗ ಅದು ಸಾಧಿಸುತ್ತಿದೆ ಎಂದು ಹೇಳಲಾದ ಬದುಕಿನ ಲೌಕಿಕ ಉನ್ನತೀಕೆಣದ ಬಲಿಪಶುಗಳ ದೊಡ್ಡ ವರ್ಗವೇ ನಮಗೆ ಕಾಣತೊಡಗುತ್ತದೆ. ಕೆಲವರ ಅಭಿವೃದ್ಧಿ ರಥ ನಾಗಾಲೋಟಕ್ಕಿ ಹಾಳಾಗುತ್ತಿರುವವರ ಬದುಕು ಅಮತ್ತು ಅವರ ಮಾವ ಹಕ್ಕುಗಳನ್ನು ಸಂರಕ್ಷಿಸುವ ಹೋರಾಟಗಳು ಈಗ ನಡೆದಿದ್ದು, ಅವುಗಳ ಮುಂಚೂಣೀಯಲ್ಲಿ ಇರುವವರು ಮಹಿಳೆಯರು ಎಂಬುದು ವಿಚಿತ್ರವೆನಿಸಿದರೂ ಸತ್ಯ. ಇವರಲ್ಲಿ ಜಾಗತೀಕರಣ ದಾಪುಗಾಲು ಹಾಕುವ ಮುನ್ನವೇ, ಅದನ್ನು ಮುನ್ನೋಡಿದಂತೆ ಹೋರಾಟಗಳನ್ನು–ಅವುಗಳಲ್ಲಿ ಕೆಲವರದ್ದು ರಚನಾತ್ಮಕ ರೂಪದಲ್ಲೂ ಇವೆ–ಆರಂಭೀಸಿದಬರೂ ಇದ್ದಾರೆ. ಇಂದಿನ ಸಾಮಾಜಿಕ ಕಳಕಳಿಯುಳ್ಳ ಇಂದಿನ ಮಹಿಳೆಯರಿಗೆ ಮಾದರಿಯಾಗಬಹುದಾದ ಆಯ್ದ ಐವ್ವರು ಮಹಿಳಾ ಹೋರಾಟಗಾರ್ತಿಯರನ್ನು ಇವರನ್ನು ಮೆಚ್ಚಿದ ನಮ್ಮ ನಡುವಿನ ಐವ್ವರು ಮಹಿಳೆಯರು ತಮ್ಮದೇ ರೀತಿಗಳಲ್ಲಿ ಇಲ್ಲಿ ಪರಿಚಯಿಸಿದ್ದಾರೆ –ಸಂ.

ಆದಿವಾಸಿಗಳಿಗೆ ದನಿಯಾದ ಮಹಾಶ್ವೇತಾದೇವಿ



ಸಂಸಾರದಲ್ಲಿ ಸೌಖ್ಯ ಸುರಕ್ಷೆಗಳು ನೆಲೆನಿಲ್ಲಬೇಕೆಂಬ ಕೌಟುಂಬಿಕ ಮೌಲ್ಯಗಳನ್ನು ಎಂದೂ ಪ್ರಶ್ನಿಸದೆ, ಹೀಗೆ ಪ್ರಶ್ನಿಸಲಾಗದ್ದರಿಂದಲೇ ಅದು ಹಳಸಲಾಗಿರುವುದನ್ನು 'ಹಾಜಾರ್ ಚುರಾಶಿರ್ ಮಾ'ದ ಸುಜಾತ ಅರಿಯುತ್ತಾಳೆ. ಅರಿವು ಕಣ್ದೆರೆಯಲು, ಬೆಳಕು ನಿಚ್ಚಳವಾಗಲು ಅವಳ ಮಗ ಬ್ರೊತಿ ಬಡವರ ಪರವಾಗಿ ಹೋರಾಡಲು ಹೋಗಿ ಹೆಣವಾಗಿ, ಹೆಸರಿಲ್ಲದ ಅಂಕಿಯಾಗಿ ಮಲಗಬೇಕಾಯ್ತು.

ಇಂತಹ ಕೃತಿಗಳನ್ನು ಓದುವಾಗ ಉಂಡುಟ್ಟು ಸುಖವಾಗಿರುವ ನಾವು ಆಗೀಗ ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ಪ್ರಜ್ಞೆಯಂತಹ ಪದಗಳನ್ನು ಬಳಸ್ಯಾಡುವುದು ಅವಕಾಶವಾದಿ ಬೊಗಳೆಯಂತೆ ಕೇಳಿಸಿ ಜೀವ ನಾಚುತ್ತದೆ. ಮಹಾಶ್ವೇತಾದೇವಿ ಎಂಬ ವ್ಯಕ್ತಿತ್ವವನ್ನು ಪರಿಚಯಿಸಿಕೊಳ್ಳಲು ಪ್ರಯತ್ನಿಸಿದಂತೆಲ್ಲ, ಆ ಬಗ್ಗೆ ಮಾತನಾಡುವ ಯಕಃಶ್ಚಿತ್ ಅಧಿಕಾರವೂ ನನಗಿಲ್ಲ ಅನ್ನಿಸಿದೆ. ಮಹೋನ್ನತಿಯೆದುರು ನಿಂತ ಅಬೋಧತೆಯಂತೆ ಬೆರಗುಗೊಂಡಿದ್ದೇನೆ.

ಅಸಲಿಗೆ, ಮಹಾಶ್ವೇತಾದೇವಿಯನ್ನು ಏನೆಂದು ಗುರುತಿಸುವುದು? ಬಂಗಾಲಿಯ ಮತ್ತು ಭಾರತದ ಮಹತ್ವದ ಲೇಖಕಿಯೆಂದೇ? ಬರಹ ಮತ್ತು ಬದ್ಧತೆಯ ಅನನ್ಯ ರೂಪಕವೆಂದೇ? ಬುಡಕಟ್ಟು ಜನರ ಸಮಸ್ಯೆಗಳನ್ನು ಅರ್ಥೈಸಿಕೊಂಡು ಬರೆದವರು, ಅವರ ಪರವಾಗಿ ಹೋರಾಡಿದವರು, ಸಾಮಾಜಿಕ ತಿಳುವಳಿಕೆಯನ್ನು ನೀಡಿ ಹಕ್ಕೊತ್ತಾಯದ ಹೋರಾಟವನ್ನು ಕಟ್ಟಿದವರೆಂದೇ? ಈ ಒಂದೊಂದು ಮಗ್ಗಲೂ ಅಗಣಿತ ಪದರರೂಪಿ ಸಂರಚನೆಗಳ ಅದಮ್ಯ ಛಲ-ಶ್ರದ್ಧೆಗಳ ರೂಪಕ.

ಬರೆಯುವುದೆಂದರೆ ಪ್ರಭುತ್ವದ ರಾಜಕಾರಣವನ್ನು ವಿವರಿಸಿಕೊಳ್ಳುವ ಮತ್ತು ಪ್ರತಿರೋಧಿಸುವ ಮಾರ್ಗವೆಂದು ಬಲವಾಗಿ ನಂಬಿದವರು ಮಹಾಶ್ವೇತಾದೇವಿ. ಕಥೆ, ಕಾದಂಬರಿಗಳನ್ನು ಬರೆದು ದಾಖಲಿಸುವುದು, ಹೋರಾಟದ ಭಾಗವಾಗಿ ಪ್ರಭುತ್ವಕ್ಕೆ ಅಧಿಕಾರಶಾಹಿಗೆ ಪತ್ರ ಬರೆಯುವುದು, ಬುಡಕಟ್ಟು ಮಕ್ಕಳಿಗಾಗಿ ಅಂಕಲಿಪಿ ಮಾದರಿಯ ಪುಸ್ತಕ ಬರೆಯುವುದು ಈ ಎಲ್ಲವೂ ಒಂದೇ ಉದ್ದೇಶದ ಬೇರೆ ಬೇರೆ ಮಾರ್ಗಗಳು– ಎಂಬ ನಿಲುವು ಅವರದು. ನಿಜವಾದ ಲೇಖಕರ ಅಹಂ ನಿರಸನದ ಈ ದಾರಿ ತುಂಬ ಕಠಿಣವಾದದ್ದು. ಬದ್ಧತೆಯ ತಾತ್ವಿಕ ಪ್ರಶ್ನೆಯಿಲ್ಲದೆ ಇವರ ಬರಹವನ್ನಾಗಲಿ ಬದುಕನ್ನಾಗಲಿ ನೋಡಲು ಸಾಧ್ಯವಿಲ್ಲ. ಬದ್ಧತೆಯ ಕಾರಣಕ್ಕಾಗಿ ಕಲಾತ್ಮಕತೆಯಲ್ಲಿ ಹುಳುಕು ಹುಡುಕುವ ವಿಮರ್ಶೆಯ ಗೊಣಗಾಟವೂ ಕೇಳಿಬಂದಿತ್ತು. ಆದರೆ ಚಳುವಳಿಯ ಅಗತ್ಯವಿಲ್ಲವೆಂದು ಪಟ್ಟಾಗಿ ಒಳಕೋಣೆಯಲ್ಲಿ ಕುಳಿತು ಬರೆದವರನ್ನು ಕಾಲ ತನ್ನ ದಸ್ತಾವೇಜಿನಲ್ಲಿ ಉಳಿಸಿಕೊಳ್ಳಲಿಲ್ಲ. ಎಲ್ಲವನ್ನೂ ಧಿಕ್ಕರಿಸಿ ಅಚಲ ನಿಷ್ಠೆಯಿಂದ ತೊಡಗಿಸಿಕೊಂಡಿದ್ದರಿಂದಲೇ ಮಹಾಶ್ವೇತಾದೇವಿಯವರ ಬರಹವನ್ನಾಗಲೀ, ಹೋರಾಟವನ್ನಾಗಲಿ ನಿರ್ಲಕ್ಷಿಸುವುದು ವ್ಯವಸ್ಥೆಗೆ ಸಾಧ್ಯವಾಗಲಿಲ್ಲ. ಕೇಂದ್ರ ಸಾಹಿತ್ಯ ಅಕೆಡೆಮಿ, ಜ್ಞಾನಪೀಠ, ಪದ್ಮಶ್ರೀ, ಮ್ಯಾಗ್ಸೆಸೆಯಂಥ ಪುರಸ್ಕಾರಗಳು ಅರಸಿ ಬಂದವು–"ಯುದ್ಧವೆಂದರೆ ಹತ್ಯೆಯಲ್ಲ, ಆತ್ಮಹತ್ಯೆಯೂ ಅಲ್ಲ. ಎದುರಾಳಿ ತಾನೇ ಬಗ್ಗುವಂತೆ ಬೆಳೆದುನಿಲ್ಲುವುದು" ಎಂಬ ನಂಬಿಕೆಯನ್ನವರು ಬರೆದರು, ಬದುಕಿದರು.


೧೯೨೬ ಜನವರಿ ೧೪ರಂದು ಬಂಗಾಲಿಯ ಮಧ್ಯಮವರ್ಗದ ಮನೆಯ ಹಿರಿಮಗಳಾಗಿ ಜನಿಸಿ, ಶಿಕ್ಷಣ, ವಿವಾಹ, ಉದ್ಯೋಗ, ತಾಯ್ತನ ಎಂಬ ಹಿತವಾದ ಬೇಲಿಯೊಳಗಿದ್ದವರನ್ನು 'ಪಲಮಾವು' ಎಂಬ ಮಳೆಯಿಲ್ಲದ ನೆಲ ಕೈಬೀಸಿ ಕರೆದು 'ದೀದಿ'ಯಾಗಿಸಿತು. ಅದು ೧೯೬೫. ಅಲ್ಲಿಂದ ಮುಂದಿನದು ಕ್ಷಣವೂ ವಿರಾಮವಿಲ್ಲದ ಚರಿತ್ರೆ. ಆದಿವಾಸಿಗಳ ಸಮಸ್ಯೆಯೊಂದಿಗೆ ತನ್ನನ್ನು ಗುರುತಿಸಿಕೊಂಡಿದ್ದು ಭಾವನಾತ್ಮಕ ನಿರ್ಣಯವಾಗಿರಲಿಲ್ಲ. ಅದು ಮಹಾಶ್ವೇತಾದೇವಿ ತನ್ನ ಅಸ್ಮಿತೆಯ ಹುಡುಕಾಟಕ್ಕೆ ಕೊಟ್ಟುಕೊಂಡ ಚಹರೆಯಾಗಿತ್ತು. ಅಂದಿನಿಂದ ಆದಿವಾಸಿಗಳ ಬದುಕಿನ ಕಣಕಣವನ್ನೂ ಅರಿಯುತ್ತ ಅರೆಕೊರೆಗಳಿಗೆ ಮಣ್ಣು ಮೆತ್ತುತ್ತ ಸಾಮಾಜಿಕ ಅಭಿವೃದ್ಧಿಯ ಸಂಕಥನವನ್ನು ನಿರ್ಣಯಿಸುವವರು ಮತ್ತು ರೂಪಿಸುವವರು ಅವರೇ ಆಗಿರಬೇಕೆಂಬ ಆಂದೋಲನದಲ್ಲಿ ಮಹಾಶ್ವೇತಾದೇವಿ ಬೆರೆತುಹೋಗಿದ್ದಾರೆ.

ತಾನು ಸ್ತ್ರೀವಾದಿಯಲ್ಲ ಎನ್ನುತ್ತಲೇ ಅವರು ಕಾಣಿಸಿದ ದರ್ಶನಗಳು ಸಿದ್ಧಾಂತಗಳ ಜಡತೆಗೆ ಚಲನೆಯನ್ನು ಕೊಟ್ಟವು. ಮಹಾಶ್ವೇತಾದೇವಿಯವರ ಬದುಕು-ಬರಹದ ವಲಯವು ತಣ್ಣಗೆ 'ಇಲ್ಲವೆ ನಿಮಗೊಂದು ಪಲಮಾವು?' ಎಂದು ಪ್ರಶ್ನಿಸುತ್ತಿದೆ. ಈ ಪ್ರಶ್ನೆಯನ್ನು ಮರಮರಳಿ ಕೇಳಿಕೊಳ್ಳುವೆ. ಉತ್ತರ ಸಿಗುವವರೆಗೂ.



–ಡಾ. ವಿನಯಾ

ಗಾಂಧಿ ಜೀವಂತಿಕೆಯ ಪ್ರತೀಕ: ಇಳಾ ಬೆನ್



ಗುಜರಾತ್ ಎಂದಕೂಡಲೇ ಥಟ್ಟನೆ ನಮ್ಮ ಕಣ್‌ಮುಂದೆ, ಮನದ ಮುಂದೆ ಮೂಡುವ ಕ್ಷೀರಕ್ರಾಂತಿಯ ನೇತಾರ ವರ್ಗೀಸ್ ಕುರಿಯನ್ ಈ ಹೆಸರಿನ ಜೊತೆಗೇ ನೆನಪಿಗೆ ಬರಬೇಕಾದ ಇನ್ನೊಂದು ಹೆಸರು ಅಸಂಘಟಿತ ದುಡಿಯುವ ವರ್ಗದ ಮಹಿಳೆಯರನ್ನು ಸಂಘಟಿಸಿದ *SEWA(ಸೇವಾ)* ದ ಶ್ರೀಮತಿ ಇಳಾಭಟ್. ಸೇವಾ ಎಂದರೆ ವಿಸ್ತರಣೆಯಲ್ಲಿ, Self employed women association.

ಬಾಲ್ಯದಲ್ಲಿ ತಾವು ಖುದ್ದು ನೋಡಿದ, ಭಾಗವಹಿಸಿದ ಸ್ವಾತಂತ್ರ್ಯ ಹೋರಾಟ, ಆಗಿನ ವಾತಾವರಣ, ರಾಷ್ಟ್ರೀಯ ಧುರೀಣರು, ಅದರಲ್ಲೂ ಗಾಂಧೀಜಿಯವರ ಅಪರಿಮಿತ ಪ್ರಭಾವ, ಜೊತೆಗೆ ತಾವು ಕಲಿಯುವಾಗಲೆ ತಮಗಿಂತಲೂ ಅಪಾರ ಜನಪರ ಕಾಳಜಿಬಿದ್ದ ರಮೇಶ್ ಅವರ ಪರಿಚಯ, ರಮೇಶರೊಟ್ಟಿಗೆ ದೇಶದ ಮೊಟ್ಟ ಮೊದಲ ಜನಗಣತಿ ಕಾರ್ಯದಲ್ಲಿ ಭಾಗಿಯಾಗಿದ್ದು– ಆಗ ಅವರು ಕಂಡ ಹಳ್ಳಿಗಳ ಸ್ಥಿತಿಗತಿಗಳು, ಜನರ ನೋವು ಇಳಾ ಅವರನ್ನು ಸಕ್ರಿಯವಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಲು ಪ್ರೇರೇಪಿಸಿತು. ತಮ್ಮ ವೈಯಕ್ತಿಕ

ಬದುಕಿಗೆ ಯಾವ ರೀತಿಯಿಂದಲೂ ಚ್ಯುತಿ ಬಾರದಂತೆ ಸಾರ್ವಜನಿಕ ಕ್ಷೇತ್ರದಲ್ಲಿ ಅವರು ಕೆಲಸ ಮಾಡಲಾರಂಭಿಸಿದರು.

ಈ ಸಾರ್ವಜನಿಕ ಸೇವೆಯ ಭಾಗವಾಗಿ ಮೂರು ತಿಂಗಳ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಇಸ್ರೇಲಿಗೆ ಹೋಗಿ ಬಂದ ನಂತರ ಅವರಲ್ಲೊಂದು ಕ್ರಾಂತಿಕಾರಕ ವಿಚಾರ ಉದಿಸಿತು. ಗ್ರಾಮೀಣ ಪ್ರದೇಶದ ಮತ್ತು ದುಡಿಯುವ ವರ್ಗದ ಮಹಿಳೆಯರನ್ನೆಲ್ಲ ಒಂದು ಸಂಘಟನೆಯೊಳಕ್ಕೆ ತರಬೇಕು. ಅವರಿಗೆ ಎಲ್ಲಾ ರೀತಿಯ ಆರ್ಥಿಕ ಭದ್ರತೆ ದೊರಕಬೇಕು ಎಂಬ ಮಹತ್ತರ ಆಕಾಂಕ್ಷೆಯಿಂದ ಅವರು ೧೯೭೨ರಲ್ಲಿ 'ಸೇವಾ'ವನ್ನು ಆರಂಭಿಸಿದರು. ಇದು ಕಾರ್ಮಿಕ ಚಳುವಳಿ, ಸಹಕಾರಿ ಚಳುವಳಿ ಮತ್ತು ಮಹಿಳಾ ಚಳುವಳಿಯ ತ್ರಿವೇಣಿ ಸಂಗಮವಾಗಿರುವಂತೆ ರೂಪಿಸಲಾಯಿತು. ಸೇವಾ, ಅಸಂಘಟಿತ ವಲಯದ ದುಡಿಯುವ ವರ್ಗಗಳ ಮಹಿಳೆಯರ ಕಾರ್ಮಿಕ ಕಲ್ಯಾಣ ಸಂಬಂಧಿ ಹಕ್ಕುಗಳು ಅವರಿಗೆ ದೊರಕುವಂತೆ ನೋಡಿಕೊಳ್ಳುವುದಲ್ಲದೆ, ಅವರಿಗೆ ವಿವಿಧ ರೀತಿಯ ದುಡಿಮೆಗಳ ಕೌಶಲ್ಯಗಳನ್ನು ಕಲಿಸುವ ಶಾಲೆಗಳನ್ನೂ ತೆರೆದಿದೆ. ತನ್ನ ಸದಸ್ಯರ ಮತ್ತು ಅವರ ಮಕ್ಕಳ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಗಾಗಿಯೂ ಸೇವಾ ದುಡಿಯುತ್ತಿದೆ. ತನ್ನ ಸದಸ್ಯರ ಉದ್ಯೋಗ, ಆಹಾರ ಮತ್ತು ಪೌಷ್ಟಿಕತೆಯ ಭದ್ರತೆಯ ಕಡೆಯೂ ನಿಗಾ ಇಟ್ಟಿರುವ ಈ ಸಂಘ ತನ್ನದೇ ಮಹಿಳಾ ಸಹಕಾರಿ ಬ್ಯಾಂಕೊಂದನ್ನು ಸ್ಥಾಪಿಸಿಕೊಂಡು, ಅವರಿಗೆ ವಿಮೆ ಮತ್ತು, ಸಾಲಸೌಲಭ್ಯಗಳನ್ನೂ ವಿಸ್ತರಿಸಿದೆ. ಒಟ್ಟಿನಲ್ಲಿ ತನ್ನ ಸದಸ್ಯರಲ್ಲಿ ನಾಯಕತ್ವ ಗುಣಗಳನ್ನು ಮೂಡಿಸಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದೇ ಸೇವಾದ ಗುರಿಯಾಗಿದೆ.

ಗುಜರಾತಿನ ೧೧ ಜಿಲ್ಲೆಗಳಿಗೂ ಹಾಗೂ ನೆರೆಯ ಐದು ರಾಜ್ಯಗಳಿಗೂ ತನ್ನ ಜಾಲವನ್ನು ಹರಡಿಕೊಂಡಿರುವ ಸೇವಾ ಈಗ ಆಫ್ಘಾನಿಸ್ತಾನ, ಬಾಂಗ್ಲಾದೇಶ, ಪಾಕಿಸ್ತಾನದಲ್ಲೂ ಸಕ್ರಿಯವಾಗಿದ್ದು ಸುಮಾರು ೨೦ ಲಕ್ಷ ಸದಸ್ಯರನ್ನು ಹೊಂದಿದೆ. ಗಾಂಧಿ ಬದುಕಿನ ಮತ್ತು ಹೋರಾಟದ ಮಾದರಿ ಇಂದು ಅಪ್ರಸ್ತುತ ಎಂದು ವಾದಿಸುವವರಿಗೆ ಇದೊಂದು ಕಣ್ತೆರೆಸುವ ಉತ್ತರವಾಗಿದೆ.

ಸುಮಾರು ೨೫ ವರ್ಷ 'ಸೇವಾ'ದ ಕಾರ್ಯದರ್ಶಿಯಾಗಿದ್ದ ಇಳಾ ಇದೀಗ ಬೇರೆಯವರಿಗೆ ವಹಿಸಿ ಹೊರಗಿನಿಂದಲೆ ಎಲ್ಲ ಸಹಕಾರ, ಸಲಹೆ ನೀಡುತ್ತಿದ್ದಾರೆ. ಅಹಮದಾಬಾದಿನ ಗಾಂಧಿ, ನಮ್ಮ ದೇಶದ ಹೆಮ್ಮೆ, ಗಾಂಧಿ ಚಿಂತನೆಯ ಕೊನೆಯ ಕೊಂಡಿ ಜೀವಂತ ದಂತ ಕತೆ ಇತ್ಯಾದಿ ಮೆಚ್ಚುಗೆಗಳಿಸಿರುವ ಇಳಾ ಬೆನ್ ಎಂದೇ ತನ್ನ ಅಭಿಮಾನಿಗಳ ಮಧ್ಯೆ ಪ್ರಸಿದ್ಧರಾಗಿರುವ ಈ ಧೀರ ಮಹಿಳೆಗೆ ಮ್ಯಾಗ್ಸೆಸ್ಸೆ ಪ್ರಶಸ್ತಿ ಸೇರಿದಂತೆ ಅನೇಕ ರಾಷ್ಟ್ರೀಯ, ಅಂತರಾಷ್ಟ್ರೀಯ ಪ್ರಶಸ್ತಿಗಳು ಸಂದಿರುವುದು ಸಹಜವೇ ಆಗಿದೆ.



–ಬಿ.ಎನ್. ಶಾಂತಾ, ಮೈಸೂರು

ಮೇಧಾ ಎಂಬ ಜೀವ ನದಿ



ಎಪ್ಪತ್ತು–ಎಂಬತ್ತರ ದಶಕದಲ್ಲಿ, ಅಂದರೆ ನನ್ನ ತಾರುಣ್ಯದ ದಿನಗಳಲ್ಲಿ ನಮ್ಮಲ್ಲಿ ರೋಮಾಂಚನ ಹುಟ್ಟಿಸಿದ ವ್ಯಕ್ತಿಗಳೆಂದರೆ, ಪಿ.ಟಿ.ಉಷಾ, ಜೀಜಾ ಹರಿಸಿಂಗ್, ಕಿರಣ್ ಬೇಡಿ ಮತ್ತು ಮೇಧಾ ಪಾಟ್ಕರ್. ಆಗಿನ್ನೂ ದೂರದರ್ಶನ ಶಿವಮೊಗ್ಗೆಗೆ ಬಂದಿರಲಿಲ್ಲ. ಪತ್ರಿಕೆಗಳಲ್ಲಿ ಬರುತ್ತಿದ್ದ ವರದಿ–ಲೇಖನ–ಚಿತ್ರ ಇವಿಷ್ಟರಿಂದಲೇ ಸ್ಫೂರ್ತಿಗೊಂಡು ನಾವು ಕೆಲ ಸಮಾನ ಮನಸ್ಕ ಗೆಳತಿಯರು ಈ ಮಹಿಳೆಯರ ಕೆಚ್ಚು, ಧೈರ್ಯ, ಸಾಹಸಗಳನ್ನು ನಮ್ಮ ನಮ್ಮೊಳಗೇ ಚರ್ಚಿಸುತ್ತಿದ್ದೆವು.

ಮೇಧಾ ಅವರು ಆದಿವಾಸಿ ಮಹಿಳೆಯರೊಂದಿಗೆ ತುಂಬಿ ಬರುತ್ತಿದ್ದ ನರ್ಮದಾ ನದಿಯ ನೀರಿನಲ್ಲಿ–ಅದೂ ಕೊರೆಯುವ ಚಳಿಯಲ್ಲಿ ಹಗಲೂ ರಾತ್ರಿ ನಿಂತು ಸತ್ಯಾಗ್ರಹ ನಡೆಸಿದ ಚಿತ್ರವೊಂದು ಆಗಿನ 'ಸಂಡೇ' ಪತ್ರಿಕೆಯಲ್ಲಿ ನೋಡಿ ನಾವು ಮಮ್ಮಲ ಮರುಗಿದ್ದೆವು. ಆ ಹೊತ್ತು ಮೇಧಾ ಬಗ್ಗೆ ನಮಗೇನೂ ಹೆಚ್ಚು ಗೊತ್ತಿರಲಿಲ್ಲ. ನರ್ಮದಾ ನದಿಯ ಹೆಸರು ಮತ್ತು ಸರ್ದಾರ್ ಸರೋವರ ಅಣೆಕಟ್ಟು ಎರಡೂ ಆಕೆಯ ಹೆಸರಿನ ಜತೆ ತಾನೇ ಬೆರೆತು ಹೋಗಿದ್ದವು. ಒಂದು ಬೃಹತ್ ಅಣೆಕಟ್ಟೆ, ಅದರ ಎದುರು ಹುಲು ಮಾನವಳಾಗಿರುವ ಈ ಮಹಿಳೆಯ ಪ್ರತಿಭಟನೆ! ಈ ಮಹಿಳೆಯ ಸಂಕಲ್ಪ ಶಕ್ತಿ ನಮ್ಮಲ್ಲಿ ಅಚ್ಚರಿ ಉಂಟು ಮಾಡುತ್ತಿತ್ತು.

ನಂತರದ ದಿನಗಳಲ್ಲಿ ಸಮಾಜವಾದಿಗಳೊಂದಿಗೆ ಒಡನಾಡಿದಾಗ ನಾನು ಕಂಡುಕೊಂಡದ್ದೇನೆಂದರೆ, ಈಕೆ ಮಹಿಳೆಯರಿಗಷ್ಟೇ ಅಲ್ಲ, ತನ್ನ ಹೋರಾಟದ ನೀತಿ–ನಡೆಗಳಿಂದ ಜನಪರ ಹೊರಾಟಗಳಲ್ಲಿ ತೊಡಗಿಕೊಂಡಿದ್ದ ಪುರಷರಿಗೂ ಸ್ಫೂರ್ತಿದಾಯಿನಿಯಾಗಿದ್ದಳು. ಸಮಾಜವಾದಿಗಳ ಸಭೆ–ಸಮಾರಂಬಗಳಲ್ಲಿ ಈಕೆಯ ಹೆಸರು ಪ್ರತಿಧ್ವನಿಸುತ್ತಿದ್ದುದನ್ನು ನಾನು ಕೇಳಿದ್ದೇನೆ.


ನಾವು ಮಹಿಳೆಯರು ಕೋಟಿ ಕೋಟಿ ಸಂಖ್ಯೆಯಲ್ಲಿ ಇದ್ದೇವೆ. ಆದರೆ ಬೆರಳೆಣಿಕೆಯ ಸಂಖ್ಯೆಯ ಮಹಿಳೆಯರಷ್ಟೇ ಜಗತ್ತಿನ ಒಳಿತಿಗಾಗಿ ತಮ್ಮನ್ನೇ ತೆತ್ತುಕೊಳ್ಳುತ್ತಾರೆ. ತಮ್ಮ ಜೀವವನ್ನೇ ಅದಕ್ಕಾಗಿ ಸಮರ್ಪಿಸಿಕೊಳ್ಳುತ್ತಾರೆ. ಜಗತ್ತಿಗೇ ಮಾದರಿ ಮಹಿಳೆ ಎನಿಸಿಕೊಳ್ಳುತ್ತಾರೆ. ಮೇಧಾ ಅಂತಹ ಮಹಿಳೆಯರಲ್ಲೊಬ್ಬಳು.

ಮೇಧಾ ಹುಟ್ಟಿದ್ದು ಡಿಸೆಂಬರ್ ೧, ೧೯೫೪ರಲ್ಲಿ, ಮುಂಬೈನ ಸಮಾಜವಾದಿ ಕುಟುಂಬವೊಂದರಲ್ಲಿ. ಹಾಗಾಗಿಯೇ ಹೋರಾಟದ ಗುಣಗಳನ್ನು ರಕ್ತಗತವಾಗಿ ಪಡೆದುಕೊಂಡಿದ್ದ ಮೇಧಾ ಇಪ್ಪತ್ತರ ಹರೆಯದಲ್ಲಿಯೇ ತಮ್ಮ ಪಿಎಚ್‌ಡಿ ಅಧ್ಯಯನವನ್ನು ನಿಲ್ಲಿಸಿ ಮುಂಬೈನ ಜೋಪಡಪಟ್ಟಿಯ ಜನತೆಯ ಸೇವೆಯಲ್ಲಿ ತೊಡಗಿಸಿಕೊಂಡರು. ಸಮಾಜವಿಜ್ಞಾನದ ಸ್ನಾತಕೋತ್ತರ ಪದವೀಧರೆಯಾದ ಮೇಧಾ ಪ್ರಮುಖವಾಗಿ ನರ್ಮದಾ ನದಿ ಕಣಿವೆಯ ಅಭಿವೃದ್ಧಿ ಯೋಜನೆಯಿಂದ ಮುಳುಗಡೆಯಾದ ಸಾವಿರಾರು ಹಳ್ಳಿಗಳ ಸಂತ್ರಸ್ತರ ಪರವಾಗಿ ೧೯೮೫ರಲ್ಲಿ ಹೋರಾಟಕ್ಕಿಳಿದರು. ಮನೆಮಠ ಜೀವನಾಧಾರವನ್ನೇ ಕಳೆದುಕೊಂಡ ಸಾವಿರಾರು ಹಳ್ಳಿಗರಿಗೆ ಯೋಜನೆಯ ಒಳಿತು–ಕೆಡಕುಗಳ ಬಗ್ಗೆ ಸೂಕ್ತ ಮಾಹಿತಿ ಮತ್ತು ಕಾನೂನು ಸಲಹೆ ನೀಡುತ್ತಾ, ಅವರ ಪುರ್ನವಸತಿಗಾಗಿ ಶ್ರಮಿಸಿದರು. ಮೇಧಾ ಮತ್ತು ಅವರ ಸಹಚರರ ಒಂದೂವರೆ ದಶಕದ ಹೋರಾಟದ ಫಲವಾಗಿ, ಕೊನೆಗೂ ವಿಶ್ವಬ್ಯಾಂಕ್ ೧೯೯೩ರಲ್ಲಿ ಈ ಯೋಜನೆ ಜನವಿರೋಧಿ ಎಂದು ತೀರ್ಮಾನಿಸಿ ಅದರಲ್ಲಿ ಪಾಲ್ಗೊಳ್ಳುವ ನಿರ್ಧಾರವನ್ನು ಹಿಂತೆಗೆದುಕೊಂಡಿತು. ನರ್ಮದಾ ನದಿ ಕಣಿವೆಯ ಗ್ರಾಮ ಗ್ರಾಮಕ್ಕೂ ಭೇಟಿ ನೀಡಿರುವ ಮೇಧಾ ನದಿಗಳಿಗೆ ಅಡ್ಡಲಾಗಿ ಬೃಹತ್ ಅಣೆಕಟ್ಟುಗಳನ್ನು ಕಟ್ಟುವುದರಿಂದ ಆಗುವ ದುಷ್ಪಾರಿಣಾಮಗಳನ್ನು ಆಳವಾಗಿ ಅಧ್ಯಯನ ಮಾಡಿರುವ ಕಾರಣದಿಂದಲೇ, ವಿಶ್ವ ಅಣೆಕಟ್ಟುಗಳ ಆಯೋಗದ ಜಾಗತಿಕ ಸಲಹಾಕಾರರೂ ಆಗಿದ್ದಾರೆ.

೧೯೯೨ರಲ್ಲಿ ರಾಷ್ಟ್ರೀಯ ಜನಾಂದೋಲನ ಸಮನ್ವಯ ಸಮಿತಿಯನ್ನು ಹುಟ್ಟು ಹಾಕಿದ ಮೇಧಾ ಜಾಗತೀಕರಣ, ವ್ಯಾಪರೀಕರಣ, ಖಾಸಗೀಕರಣಗಳ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಸುವ ಸಂಘಟನೆಗಳನ್ನು ಒಟ್ಟಿಗೆ ತಂದು ನೆಲ–ಜಲ–ಕಾಡು ಉಳಿಸುವ ಪರಿಸರ ಹೋರಾಟಗಳನ್ನು ಸಂಘಟಿಸಿದರು. ಗಾಂಧೀ–ಲೋಹಿಯಾ–ಜೆಪಿಯವರ ಹೋರಾಟ ಮಾರ್ಗಗಳಲ್ಲಿ ನಂಬಿಕೆ ಇರುವ ಮೇಧಾ, ದಲಿತರು, ಆದಿವಾಸಿಗಳು, ರೈತರು, ಅಸಂಘಟಿತ ಕಾರ್ಮಿಕರನ್ನು ಒಗ್ಗೂಡಿಸಿ ತಮ್ಮ ಹೋರಾಟಗಳಲ್ಲಿ ತೊಡಗಿಸಿಕೊಂಡರು. ಎಲ್ಲೆಲ್ಲಿ ಕಾಡು–ನೆಲಗಳಿಗೆ ಸಂಚಕಾರ ಉಂಟಾಗುವುದೋ ಅಲ್ಲಿ ಮೇಧಾ ಹಾಜರಿರುತ್ತಾರೆ. ಅಧು ಬಂಗಾಳದ ಸಿಂಗ್ರೂರು ಆಗಿರಬಹುದು ಅಥವಾ ಕೊಂಕಣದ ಜೈತಪುರ, ಮಹಾರಾಷ್ಟ್ರದ ಲಾವ್‌ಸಾ ಹಳ್ಳಿಯಾಗಿರಬಹುದು ಅಥವಾ ಆಂಧ್ರದ ಕೊವ್ವಾಡಾ ಆಗಿರಬಹುದು. ಕರ್ನಾಟಕದ ಗದಗ ಆಗಿರಬಹುದು.


೨೦೦೦ರಲ್ಲಿ ಎಂದು ಕಾಣುತ್ತದೆ, ಮುರುಘಾಮಠ ಕೊಡಮಾಡುವ ಬಸವಶ್ರೀ ಪುರಸ್ಕಾರವನ್ನು ಪಡೆಯಲು ಮೇಧಾ ಚಿತ್ರದುರ್ಗಕ್ಕೆ ಬಂದಿದ್ದಾಗ ನಾಗಭೂಷಣರ ಸಮಾಜವಾದಿ ಸ್ನೇಹದ ಆಹ್ವಾನವನ್ನು ಮನ್ನಿಸಿ ನಮ್ಮ ಮನೆಗೂ ಬಂದಿದ್ದರು. ಸರಳ ಸಜ್ಜನಿಕೆಯ ಪ್ರತಿಮೂರ್ತಿಯಂತಿದ್ದ ಆಕೆಯನ್ನು ನೋಡಿ ನಾವು ದಂಗಾಗಿ ಹೋದೆವು. ಸಿಹಿಯಾದ ಹಣ್ಣಿನಂತಹ ಪಕ್ವವಾದ ಮನಸ್ಸು, ಧೀರೆ, ಗಂಭೀರೆ. ಅವರು ಹೊರಡುವಾಗ ಮಧ್ಯಪ್ರದೇಶಕ್ಕೆ ನಮ್ಮನ್ನು ಆಹ್ವಾನಿಸಿ ಆದಿವಾಸಿಗಳ ಪರವಾದ ನಮ್ಮ ಹೋರಾಟಕ್ಕೆ ತಮ್ಮ ಬೆಂಬಲವನ್ನು ಕೋರಿದ್ದರು.

ಹೊರಾಟಕ್ಕಿಳಿಯುವುದಿರಲಿ, ಆ ದೂರ ಪ್ರದೇಶಕ್ಕೆ ಹೋಗುವುದನ್ನು ನಾನು ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಗಂಗಾ–ತುಂಗಾ–ಯಮುನಾ–ಕಾವೇರಿಯಂತೆಯೇ ಮೇಧಾ ಕೂಡ ದೇಶದ ಉದ್ದಗಲ ಹರಿಯುತ್ತಿರುವ ಜೀವಂತ ನದಿ. ಈ ಭೂಪಟದಿಂದಲೇ ಕಣ್ಮರೆಯಾಗಿ ಹೋದ 'ಸರಸ್ವತಿ' ಇವಳ ರೂಪದಲ್ಲಿ ಮತ್ತೆ ಅವತರಿಸಿ ನರ್ಮದೆಯ ರಕ್ಷಣೆಯಲ್ಲಿ ತೊಡಗಿಸಿಕೊಂಡಿರಬಹುದೇ? ಯೋಚಿಸಿ ನಾನು ಚಕಿತಗೊಳ್ಳುತ್ತೇನೆ.



–ಸವಿತಾ ನಾಗಭೂಷಣ, ಶಿವಮೊಗ್ಗ

ಜನಸಾಮಾನ್ಯರ ಶಕ್ತಿ ಅರುಣಾ ರಾಯ್



ಸೌಮ್ಯ ಮುಖ ಚಹರೆ, ಕೋಲು ಮುಖ, ಆತ್ಮ ವಿಶ್ವಾಸ ಸೂಸುವ ನೋಟ, ದೊಡ್ಡ ಕನ್ನಡಕ, ಅಲ್ಲಲ್ಲಿ ಬೆಳ್ಳಿ ತಲೆಗೂದಲು, ಹಣೆಯಲ್ಲಿ ಕಾಸಿನಗಲದ ಕುಂಕುಮ, ಸರಳ ಸಹಜ ಖಾದೀ ಉಡುಗೆ, ಸತ್ಯ ಶೋಧನೆಯ ಮಿಂಚು ಹೊಮ್ಮಿಸುವ ನೇರ ಮಾತು, ಪ್ರಗತಿಪರ ಚಿಂತನೆಗಳಿಗೆ ಹೆಸರಾಗಿರುವ ಸಮಾಜ ಸೇವಕಿಯೂ ಸುಧಾರಣಾವಾದಿಯೂ ಆದ, ಇದೀಗ ಅರವತ್ತೆಂಟರ ವಯದಲ್ಲೂ ತುಂಬು ಉತ್ಸಾಹದ ಗಣಿ ಅರುಣಾ ರಾಯ್ ಅವರು ತಮ್ಮೆಲ್ಲ ಸಮುದಾಯಪರ ಕಾಳಜಿಗಳಿಗೆ ೨೦೦೦ ರಲ್ಲಿ ರಾಮನ್ ಮೆಗ್ಸೆಸೆ ಪ್ರಶಸ್ತಿ ಪಡೆದವರು.

ಅರುಣಾ ರಾಯ್ ಹುಟ್ಟಿದ್ದು ೧೯೪೬ ಜೂನ್ ಇಪ್ಪತ್ತಾರರಂದು, ಚೆನ್ನೈನ ತಮಿಳು ಬ್ರಾಹ್ಮಣ ಕುಟುಂಬವೊಂದರಲ್ಲಿ. ದಿಲ್ಲಿಯಲ್ಲಿ ಆಂಗ್ಲ ಸಾಹಿತ್ಯದ ಸ್ನಾತಕೋತ್ತರ ಪದವಿಯನ್ನೂ ಮುಗಿಸಿದ್ದರು. ತಂದೆ ಸರಕಾರೀ ನೌಕರರಾದ್ದರಿಂದ ಅವರಿಗೆ ದೇಶದ ಬೇರೆ ಬೇರೆ ಪ್ರಾದೇಶಿಕ ಹಿನ್ನಲೆಯುಳ್ಳ ವಾತಾವರಣದ ಪರಿಚಯ ಹಾಗೂ ಸಮಸ್ಯೆಗಳ ಮಾಹಿತಿ ಸಹಜವಾಗಿಯೇ ದೊರಕಿತ್ತು. ಅದೇ ಅರುಣಾ ಅವರಿಗೆ ಮುಂದೆ ಸಮುದಾಯಿಕ ಅಗತ್ಯಗಳನ್ನು ಕುರಿತು ಸ್ಪಂದಿಸುವ ಮತ್ತು ಸಂವೇದಿಸುವ ಶಕ್ತಿಯನ್ನು ನೀಡಿತು.

೧೯೬೮ ರಿಂದ ೭೪ ರ ವರೆಗೆ ಐಎಎಸ್ ಆಫೀಸರ್ ಆಗಿ ಸೇವೆ ಸಲ್ಲಿಸುತ್ತಿರುವ ದಿನಗಳಲ್ಲೇ ಅವರು ಸಮಾಜವಾದಿ ಧುರೀಣ ಬಂಕರ್ ರಾಯ್ ಅವರೊಂದಿಗೆ ೧೯೭೦ರಲ್ಲಿ ವಿವಾಹವಾದರು. ಸರಕಾರದಿಂದ ಆದೇಶಿಸಲ್ಪಟ್ಟ ಕಾರ್ಯಕ್ರಮಗಳಿಗೆ ನಿಮಿತ್ತ ಮಾತ್ರವಾಗುವ ಆ ಐಎಎಸ್ ಹುದ್ದೆ ಅವರಿಗೆ ಸಂತೋಷ ನೀಡಲಿಲ್ಲ. ಇದರ ಪರಿಣಾಮವಾಗಿ ತಮ್ಮ ಸೇವೆಗೆ ರಾಜೀನಾಮೆ ನೀಡಿ, ತಮ್ಮ ಪತಿ ರಾಜಾಸ್ಥಾನದ ತಿಲುನಿಯಾದಲ್ಲಿ ಆರಂಭಿಸಿದ್ದ *ಸೋಷಿಯಲ್ ವರ್ಕ್ ಮತ್ತು ರಿಸರ್ಚ್ ಸೆಂಟರ್* ಸೇರಿದರು. ಆ ಹುದ್ದೆ ಅವರ ಹಲವು ಸಾಮಾಜಿಕ ಸಾಹಸಗಳಿಗೆ ಅಡ್ಡಿ ಬರುತ್ತಿತ್ತು. ಎಷ್ಟೋ ಕಾನೂನುಗಳು ತಪ್ಪು ಅಂತ ಗೊತ್ತಿದ್ದರೂ ಕ್ರಮ ಕೈಗೊಳ್ಳಲು ಕೈ ಕಟ್ಟಿ ಹಾಕಿದ ಅನುಭವವಾಗುತ್ತಿತ್ತು.

'ಸಾಮಾಜಿಕ ಪಲ್ಲಟಗಳ ಮೂಲ ಬೇರಿನ ಸತ್ವಗಳನ್ನು ನಾನು ತಿಲುನಿಯಾ ಚಳುವಳಿಯಿಂದ ಕಲಿತೆ' ಎನ್ನುವ ಅರುಣಾ, 'ಈ ಮೊದಲು ಹಳ್ಳಿಗಳ ಕುರಿತು ನನಗೆ ಸ್ಪಷ್ಟ ಕಲ್ಪನೆಯೇ ಇರಲಿಲ್ಲ' ಅನ್ನುತ್ತಾರೆ. ಅದೇ ಅನುಭವದ ಹಿನ್ನಲೆಯಿಂದ ಮುಂದೆ ಹೋರಾಟಗಾರರಾದ ಶಂಕರ್ ಸಿಂಗ್ ಮತ್ತು ನಿಖಿಲ್ ಡೇ ಜೊತೆ ಸೇರಿ 'ಮಝದೂರ್ ಕಿಸಾನ್ ಶಕ್ತಿ ಸಂಘಟನಾ' ಹುಟ್ಟು ಹಾಕಿದರು. ಈ ಸಂಘಟನೆ ನಿರಂತರ ಜನಹಿತ ಕಾರ್ಯಗಳಲ್ಲಿ ತೊಡಗಿಕೊಂಡಿದೆ.

ಆ ಮೂಲಕ ಮಾಹಿತಿ ಹಕ್ಕು ಚಳುವಳಿಯ ಮುಖಂಡತ್ವ ವಹಿಸಿ, ರಾಜಸ್ಥಾನದಲ್ಲಿ ಇವರು ಕೈಗೊಂಡ ಅಖಂಡ ಹೋರಾಟದ ಫಲವಾಗಿ ೨೦೦೫ ರಲ್ಲಿ 'ರಾಷ್ಟ್ರೀಯ ಮಾಹಿತಿ ಹಕ್ಕು ಕಾಯ್ದೆ' ದೇಶಾದ್ಯಂತ ಜಾರಿಗೆ ಬಂತು. ಅಣ್ಣಾ ಹಜಾರೆಯವರ ಲೋಕಪಾಲ ಬಿಲ್ ಆಂದೋಲನದಲ್ಲೂ ಭಾಗವಹಿಸಿದ ರಾಯ್ ಕಳೆದ ಯು.ಪಿ.ಎ. ಸರ್ಕಾರ ಜನಪರ ಯೋಜನೆಗಳ ವಿಷಯದಲ್ಲಿ ತನಗೆ ತಜ್ಞ ಸಲಹೆ ನೀಡಲು ರಚಿಸಿದ ರಾಷ್ಟ್ರೀಯ ಸಲಹಾ ಸಮಿತಿಯ ಅಧ್ಯಕ್ಷೆಯೂ ಆದರು. ಯುಪಿಎ ಸರ್ಕಾರ ಜಾರಿಗೆ ತಂದ ಶಿಕ್ಷಣ ಹಕ್ಕಿನ ಕಾಯ್ದೆ, ಆಹಾರ ಭದ್ರತಾ ಕಾಯ್ದೆ, ಭೂಸ್ವಾಧೀನ ಕಾಯ್ದೆ, ಉದ್ಯೋಗ ಖಾತರಿ ಯೋಜನೆಯ ಸುಧಾರಣೆ ಇತ್ಯಾದಿ ಜನಪರ ಕಾರ್ಯಕ್ರಮಗಳ ಹಿಂದೆ ಇವರು ಮತ್ತು ಇವರ ಜೊತೆಗಾರರ ಕೊಡುಗೆ ಇದೆ ಎಂದು ಹೇಳಬಹುದು.



೨೦೧೦ರಲ್ಲಿ ಇವರ ಸಾರ್ವಜನಿಕ ಆಡಳಿತ ಸೇವೆಗಾಗಿ ಪ್ರತಿಷ್ಠಿತ ಲಾಲ್ ಬಹಾದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಸ್ತಿ ಕೂಡ ಇವರಿಗೆ ಒಲಿದು ಬಂದಿತ್ತು. ಗ್ರಾಮೀಣ ಭಾಗದ ಜನರ ಬಡತನ ನಿರ್ಮೂಲನೆಗಾಗಿ ದುಡಿದ ಅರುಣಾ, ಮಹಿಳಾಪರ ಸಂಘಟನೆಗಳಲ್ಲೂ ತೊಡಗಿಕೊಂಡು ಮಹಿಳಾ ಸಮಸ್ಯೆಗಳ ನಿರ್ಮೂಲನೆಗಾಗಿ ಹೋರಾಟ ನಡೆಸಿದ್ದಾರೆ.

–ಸುನಂದಾ ಪ್ರಕಾಶ್ ಕಡಮೆ, ಹುಬ್ಬಳ್ಳಿ

ಜೀವಂತ ಹುತಾತ್ಮತನದ ಇರೋಮ್ ಶರ್ಮಿಳಾ



ಶರ್ಮಿಳಾ ಹೆಸರು ಕೇಳಿದೊಡನೇ ದಿಟ್ಟತನ, ಸೌಂದರ್ಯ, ಮತ್ತು ಅಪೂರ್ವ ಪ್ರತಿಭೆ ಎಲ್ಲವೂ ಬೆರೆತಿರುವ ೬೦-೭೦ ರ ದಶಕದ ನಟಿ ಶರ್ಮಿಳಾ ಟ್ಯಾಗೋರ್ ನೆನಪಾಗುತ್ತಾರೆ. ಆದರೆ ನಾನು ಹೇಳ ಹೊರಟಿರುವುದು ಕಳೆದ ಹದಿನೈದು ವರ್ಷಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವ, ಶಿಥಿಲಗೊಂಡ ದೇಹದ, ಕೆದರಿದ ಕೂದಲಿನ, ಮೂಗಿನಲ್ಲಿ ಒತ್ತಾಯಪೂರ್ವಕವಾಗಿ ಸಿಕ್ಕಿಸಿರುವ ಆಹಾರ ಕೊಳವೆ ಹೊತ್ತಿರುವ, ಮಾಸದ ನಗುವಿನ ಶರ್ಮಿಳಾ ಇರೋಮ್ ಬಗೆಗೆ. ಈ ಶರ್ಮಿಳಾ ಮಾನವ ಹಕ್ಕುಗಳ ಹೋರಾಟಗಾರ್ತಿಯಾಗಿ, ಮಣಿಪುರದಲ್ಲಿ ಭಾರತೀಯ ಸಶಸ್ತ್ರಪಡೆಗಳು ಅಲ್ಲಿ ದೇಶವಿರೋಧಿ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆ ನಡೆಸಲು ತನಗೆ ನೀಡಿರುವ ವಿಶೇಷಾಧಿಕಾರಗಳನ್ನು ವಿವೇಚನಾಶೂನ್ಯವಾಗಿ ಸಾಮಾನ್ಯ ಜನತೆಯ ಮೇಲೆ ದೌರ್ಜನ್ಯ, ಕೊಲೆ, ಅತ್ಯಾಚಾರಗಳನ್ನು ನಡೆಸಲು ಬಳಸಿಕೊಳ್ಳುತ್ತಿರುವುದರ ವಿರುದ್ಧ ನಡೆಸಿರುವ ದಿಟ್ಟ ಹೋರಾಟ ತನ್ನ ವಿನೂತನತೆಯಿಂದಾಗಿ ರಾಷ್ಟ್ರ ಮಾತ್ರವಲ್ಲ ಜಗತ್ತಿನ ಗಮನವನ್ನೂ ಸೆಳೆದಿದೆ. ತನ್ನ ಗುಬ್ಬಚ್ಚಿ ದೇಹವನ್ನು ಮುಂದೊಡ್ಡಿ ಕಳೆದ ಹದಿನೈದು ವರುಷಗಳಿಂದ ಉಪವಾಸ ಸತ್ಯಾಗ್ರಹವನ್ನು ನಡೆಸುವುದರ ಮೂಲಕ ಅಹಿಂಸಾತ್ಮಕವಾಗಿ ಪ್ರತಿಭಟಿಸುತ್ತಾ, ಪ್ರಜಾಪ್ರಭುತ್ವದ ಆಶಯದ ಈಡೇರಿಕೆಗೆ ಜೀವಂತ ಹುತಾತ್ಮಳಾಗುತ್ತಿರುವ ದುರಂತವಿದು. ಈ ದುರಂತ ಬರೀ ಶರ್ಮಿಳಾ ಇರೋಮ್‌ಳದ್ದಲ್ಲ, ಇಡೀ ಪ್ರಜಾಪ್ರಭುತ್ವದ ಆಶಯಗಳು ಸೋತು ಸಾವನ್ನಪ್ಪುತ್ತಿರುವ ದುರಂತ.

ಮಣಿಪುರದ ಕೆಳ ಮಧ್ಯಮವರ್ಗದ ಕುಟುಂಬವೊಂದರಲ್ಲಿ ೧೪, ಮಾರ್ಚ್, ೧೯೭೨ ರಲ್ಲಿ ಜನಿಸಿದ ಇರೋಮ್ ಶರ್ಮಿಳಾ ತನ್ನ ಶಾಲಾ ಕಾಲೇಜು ದಿನಗಳಲ್ಲೇ ಕಾವ್ಯ ರಚನೆ ಮತ್ತು ಸಾಮಾಜಿಕ ಸೇವೆಯಲ್ಲೂ ತೊಡಗಿಸಿಕೊಂಡಿದ್ದಳು. ಮಣಿಪುರದ ನಾಗರಿಕರು, ಹೆಣ್ಣುಮಕ್ಕಳ ಮೇಲಾಗುತ್ತಿರುವ ದೌರ್ಜನ್ಯ ಶರ್ಮಿಳೆಯ ಅನುಭವಕ್ಕೆ ಬಂದಿದ್ದು ೨೦೦೦ರಲ್ಲಿ ಮಾನವ ಹಕ್ಕುಗಳ ಒಕ್ಕೂಟ ಏರ್ಪಡಿಸಿದ್ದ ಅಪ್ರೆಂಟಿಸ್‌ಶಿಪ್ ತರಬೇತಿಗೆ ಸೇರಿಕೊಂಡಾಗ. ಅವರು ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರೊಂದಿಗೆ ಒಡನಾಡುತ್ತಾ ಸ್ವತಃ ಅವರ ನೋವು, ಅವಮಾನವನ್ನು ಕಂಡು ತಲ್ಲಣಿಸಿದರು. ಇದೇ ಸಂದರ್ಭದಲ್ಲಿ ೨, ನವೆಂಬರ್ ೨೦೦೦ ರಲ್ಲಿ ಅಸ್ಸಾಂ ರೈಫಲ್ಸ್‌ನ ಸೇನಾ ತುಕಡಿಯೊಂದು ಇಂಫಾಲದ ಬಳಿಯ ಹಳ್ಳಿಯೊಂದರಲ್ಲಿ ಹತ್ತು ಜನ ಮುಗ್ಧರನ್ನು ಯಾವುದೇ ಪ್ರಚೋದನೆ ಇಲ್ಲದೇ ಗುಂಡು ಹೊಡೆದು ಸಾಯಿಸಿದ್ದರು. ಈ ಹತ್ಯಾಕಾಂಡಕ್ಕೆ ಸಾಕ್ಷಿಯಾಗಿದ್ದ ಇರೋಮ್ ಶರ್ಮಿಳಾ ಅಂದೇ ಈ ಕರಾಳ ಶಾಸನದ ವಿರುದ್ಧ ಉಪವಾಸ ಮುಷ್ಕರ ಹೂಡಿದರು.

ಜಮ್ಮು ಮತ್ತು ಕಾಶ್ಮೀರದಲ್ಲೂ ಜಾರಿಯಲ್ಲಿದ್ದು ಅಲ್ಲಿನ ಜನತೆಯ ಶಾಪಕ್ಕೂ ಗುರಿಯಾಗಿರುವ ಈ ಸೇನಾ ವಿಶೇಷಾಧಿಕಾರ ಕಾಯ್ದೆ ವಾಸ್ತವವಾಗಿ ಜನವಿರೋಧಿಯಾಗಿದೆ ಎಂದು ನ್ಯಾ. ಜೀವನರೆಡ್ಡಿ ಆಯೋಗ ಸ್ಪಷ್ಟವಾಗಿ ಹೇಳಿದ್ದರೂ ಪ್ರಭುತ್ವ ರಾಷ್ಟ್ರ ರಕ್ಷಣೆಯ ಹೆಸರಿನಲ್ಲಿ ಇದನ್ನು ಹಿಂತೆಗೆದುಕೊಳ್ಳಲು ನಿರಾಕರಿಸುತ್ತಿದೆ.

೨೦೧೮ರಲ್ಲಿ ತಾಯಂದಿರ ಒಕ್ಕೂಟ ಹೆಸರಿನ ಮಹಿಳಾ ಸಂಘಟನೆಯು 'ಮಣಿಪುರ ಉಳಿಸಿ' ಹೆಸರಿನಲ್ಲಿ ಚಳವಳಿ ಸಂಘಟಿಸಿದ್ದು, ಕಾರ್ಯಕ್ರಮದ ಹಿಂದಿನ ದಿನವಷ್ಟೇ ಬಂಧನದಿಂದ ಬಿಡುಗಡೆಯಾದ ಶರ್ಮಿಳಾ ಆ ಚಳವಳಿಯಲ್ಲಿ ಭಾಗವಹಿಸಿ ಮಾತನಾಡುವವರಿದ್ದರು. ಆದರೆ ಅದಕ್ಕೆ ಅವಕಾಶ ಕೊಡದ ಮಣಿಪುರ ಪೊಲೀಸರು ಮರಳಿ ಶರ್ಮಿಳಾರನ್ನು ಬಂಧಿಸಿದರು.



ಹೀಗೆ ಬಂಧನ-ಬಿಡುಗಡೆಗಳ ಪ್ರಭುತ್ವ ಮತ್ತು ಪ್ರಜೆಯ ನಡುವಣ ನಿರಂತರ ಜಟಾಪಟಿಯಲ್ಲಿ ಈ ಒಂಟಿ ಮಹಿಳೆಯ ಹೋರಾಟ ಸಾವು -ಬದುಕಿನ ನಡುವೆ ನಿರಂತರವಾಗಿ ಮುಂದುವರೆದಿದೆ. ಅನ್ಯಾಯದ ವಿರುದ್ಧದ ಮಾನವ ಪ್ರತಿಭಟನೆಯ ಅದಮ್ಯತೆಗೆ ಈ ಜೀವಂತ ಹುತಾತ್ಮಳ (undead martyr) ಹೋರಾಟ ಸಾಕ್ಷಿಯಾಗಿ.

–ಅಕ್ಷತಾ ಕೆ, ಶಿವಮೊಗ್ಗ

ಲಿಂಗಾನುಪಾತದ ಏರುಪೇರು: ಗಂಡು ಗಂಡಾಗುತ್ತಿರುವ ಸಮಾಜ

–ಡಾ. ಎಚ್.ಎಸ್. ಅನುಪಮಾ



ಇತಿಹಾಸದಿಂದ ಹೆಣ್ಣು ನಾಪತ್ತೆಯಾಗಿದ್ದಾಳೆ. ವರ್ತಮಾನದಿಂದಲೂ ನಾಪತ್ತೆಯಾಗಿಸುವ ವಿದ್ಯಮಾನ ಸಂಭವಿಸುತ್ತಿದೆ. ಇಳಿಯುತ್ತಿರುವ ಲಿಂಗಾನುಪಾತ ಇದಕ್ಕೆ ಸಾಕ್ಷಿಯಾಗಿದೆ. ೧೮೮೧ರ ಜನಗಣತಿಯಲ್ಲಿ ಭಾರತದಲ್ಲಿ ೧೦೦೦ ಪುರುಷರಿಗೆ ೯೪೦ ಮಹಿಳೆಯರಿದ್ದರು. ಇವತ್ತು ಲಿಂಗಾನುಪಾತ ೧೦೦೦/೯೧೪ ಇದೆ. ನೈಸರ್ಗಿಕವಾಗಿ ಪ್ರತಿ ಸಾವಿರ ಗಂಡಿಗೆ ೧೦೨೦ – ೧೧೦೦ರ ತನಕ ಹೆಣ್ಣುಗಳಿರಬೇಕು. ಆದರೆ ಯುದ್ಧ-ಹಿಂಸೆಗಳಲ್ಲಿ ಗಂಡಸರನ್ನು ಕಳೆದುಕೊಂಡರೂ ಹೆಣ್ಣುಗಳ ಸಂಖ್ಯೆ ಕಡಿಮೆ ಇರುವುದು ಲಿಂಗಾನುಪಾತ ಇಳಿಕೆಯ ಒಳಮರ್ಮವನ್ನು ತಿಳಿಸುತ್ತದೆ.

ಬೇರಾವ ಜೀವಿಯಲ್ಲೂ ಕಾಣದ ಲಿಂಗಾನುಪಾತ ಇಳಿಕೆ ಮಾನವ ಜೀವಿಯಲ್ಲಿ ಕಂಡುಬರಲು ಕಾರಣ ಎಲ್ಲ ಸಮಾಜಗಳು ರೂಢಿಸಿಕೊಂಡು ಬಂದಿರುವ ಲಿಂಗತಾರತಮ್ಯ. ಪ್ರಾಚೀನ ಕಾಲದಿಂದ ಸ್ತ್ರೀಭ್ರೂಣ ಹತ್ಯೆ ಚಾಲ್ತಿಯಲ್ಲಿದೆ. ಕ್ರಿ.ಪೂ ೨೦೦೦ದಲ್ಲಿ ಗ್ರೀಸ್‌ನಲ್ಲಿ ಸತತ ಎರಡು ಹೆಣ್ಣುಮಕ್ಕಳು ಹುಟ್ಟಿದರೆ ಅದರಲ್ಲಿ ಒಂದನ್ನು ಕೊಲ್ಲುವ ಅಧಿಕಾರವನ್ನು ತಾಯ್ತಂದೆಯರಿಗೆ ಕೊಡಲಾಗಿತ್ತು. ಮಗು ಹೆಣ್ಣೋ ಗಂಡೋ ತಿಳಿದುಕೊಳ್ಳಲು ಹೊಟ್ಟೆ ತುಂಬ ನೀರು ಕುಡಿಸಿ ಗರ್ಭಿಣಿ ಮಹಿಳೆಯ ನಾಡಿ ಹಾಗೂ ದೇಹ ಪರೀಕ್ಷೆ ಮಾಡಿ ಹೇಳುತ್ತಿದ್ದರು. ಇದು ತೀವ್ರ ಲಿಂಗ ಅಸಮಾನತೆ ಹುಟ್ಟುಹಾಕಿ ಒಂದು ಹಂತದಲ್ಲಿ ಪ್ರತಿ ೧೦೦ ಗಂಡುಮಕ್ಕಳಿಗೆ ಕೇವಲ ೨೮ ಹೆಣ್ಣುಮಕ್ಕಳಿದ್ದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಕ್ರಿಸ್ತಶಕದ ಆರಂಭದ ದಿನಗಳಲ್ಲಿ ಹೆಣ್ಣುಭ್ರೂಣ ಹತ್ಯೆ ಪಾಶ್ಚಿಮಾತ್ಯ ದೇಶಗಳಲ್ಲಿ ಬರ್ಬರವಾಗಿ ಜಾರಿಯಲ್ಲಿದ್ದರೆ ನಂತರ ಏಷ್ಯಾದ ದೇಶಗಳು ಕ್ರೂರ ಪದ್ಧತಿಗಳನ್ನು ಜಾರಿಯಲ್ಲಿಟ್ಟವು. ಚೀನಾ, ಕೊರಿಯಾ, ಇಂಗ್ಲೆಂಡ್, ಅಮೆರಿಕಾ, ಕೆನಡಾ ಮತ್ತು ಭಾರತ ಇದುವರೆಗು ಹೆಣ್ಣುಭ್ರೂಣ ಹತ್ಯೆಯನ್ನು ಅವ್ಯಾಹತವಾಗಿ ನಡೆಸಿಕೊಂಡುಬಂದಿವೆ. ಆಧುನಿಕ ವಿಜ್ಞಾನದಿಂದ ಭ್ರೂಣಲಿಂಗ ಪತ್ತೆ ಮಾಡಿ ಕೊಲ್ಲುವತನಕ, ಕೆನಡಾದಲ್ಲಿ ಮಗು ಹುಟ್ಟಿದ ಕೂಡಲೇ ಅದರ ಬಾಯಿಗೆ ಜೊಂಡುಹುಲ್ಲು ತುರುಕಿ ಕೊಲ್ಲುವ ಆಚರಣೆ ಚಾಲ್ತಿಯಲ್ಲಿತ್ತು. ಅಮೆರಿಕಾ, ಕೆನಡಾ, ಇಂಗ್ಲೆಂಡ್‌ಗಳಲ್ಲಿ ಹೆಣ್ಣುಮಕ್ಕಳನ್ನು ಕೊಲ್ಲುವ ಆಚರಣೆ ಎಷ್ಟು ಅಪಾಯಕಾರಿಯಾಯಿತೆಂದರೆ ೧೯೭೦ರ ವೇಳೆಗೆ ಸರ್ಕಾರಗಳು ಹೆಣ್ಣುಭ್ರೂಣ ಹತ್ಯೆ ನಿಷೇಧ ಕಾಯ್ದೆ ಜಾರಿಗೆ ತಂದವು. ಚೀನಾದಲ್ಲಿ ಇದು ಶುರುವಾಗಿದ್ದು ೧೯೭೯ರಲ್ಲಿ ಒಂದು ದಂಪತಿಗೆ ಒಂದೇ ಮಗು ಎಂಬ ಜನಸಂಖ್ಯಾ ನೀತಿ ಜಾರಿಯಾದ ನಂತರ ಸ್ತ್ರೀಭ್ರೂಣ ಹತ್ಯೆ ಮೊದಲಿಗಿಂತ ೧೮ ಪಟ್ಟು ಹೆಚ್ಚಾಗಿದೆ.

ಭಾರತದಲ್ಲೂ ಮಕ್ಕಳನ್ನು ಕೊಲ್ಲಲು ಅನೇಕ ವಿಧಾನಗಳಿದ್ದವು. ತಮಿಳುನಾಡಿನಲ್ಲಿ ನವಜಾತ ಹೆಣ್ಣುಮಗುವಿಗೆ ಭತ್ತದ ಕಾಳನ್ನು ಬಾಯಿಗೆ ಹಾಕುತ್ತಿದ್ದರು. ಕೆಲವೆಡೆ ಗಿಡಬಳ್ಳಿಗಳ ವಿಷವನ್ನು ಹರಳೆಣ್ಣೆಯಲ್ಲಿ ಕದಡಿ ಕುಡಿಸುತ್ತಿದ್ದರು. ಮಗುವಿನ ಬಾಯೊಳಗೆ ಕೆಮ್ಮಣ್ಣು ತುಂಬಿಸಿ, ಹೊಲಗದ್ದೆಗೆ ಬಳಸುವ ರಾಸಾಯನಿಕದ ಹರಳನ್ನು ನುಂಗಿಸಿ ಕೊಲ್ಲಲಾಗುತ್ತಿತ್ತು! ಸ್ಕ್ಯಾನಿಂಗ್ ತಂತ್ರಜ್ಞಾನ ಬಂದಮೇಲೆ ಹೆಣ್ಣುಶಿಶುಹತ್ಯೆಗಿಂತ ಹೆಣ್ಣುಭ್ರೂಣಹತ್ಯೆ ಹೆಚ್ಚಾಗುತ್ತಿದೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆ, ವರದಕ್ಷಿಣೆ ಪಿಡುಗು ಇದಕ್ಕೆ ಮುಖ್ಯ ಕಾರಣಗಳು.

ವಿಜ್ಞಾನ ತಂತ್ರಜ್ಞಾನ ನಿರ್ಲಿಪ್ತ ಎನ್ನುತ್ತಾರಲ್ಲವೆ? ಆದರೆ ಅವು ಲಿಂಗ ತಾರತಮ್ಯ ಧೋರಣೆಯಿಂದ ಅಭಿವೃದ್ಧಿಯಾಗಿವೆ. *ಆಮ್ನಿಯೋಸೆಂಟೆಸಿಸ್* ಮತ್ತು ಸೋನೋಗ್ರಫಿ ಎಂಬ ತಪಾಸಣಾ ತಂತ್ರಗಳು ಸ್ತ್ರೀಭ್ರೂಣ ಹತ್ಯೆಯ ಭಾಗವಾಗಿವೆ. *ಆಮ್ನಿಯೋಸೆಂಟೆಸಿಸ್* ಎಂಬ ತಪಾಸಣೆ ಭ್ರೂಣವು ಕ್ರೋಮೋಸೋಮ್ ಸಂಬಂಧಿ ಅನುವಂಶಿಕ ಕಾಯಿಲೆಗಳಿಂದ ಬಳಲುತ್ತಿದ್ದರೆ ಪತ್ತೆ ಮಾಡಲು ಉಪಯೋಗವಾಗುತ್ತಿತ್ತು. ಆದರೀಗ ಲಿಂಗಪತ್ತೆಗೆ ಬಳಕೆಯಾಗುತ್ತಿದೆ. ಎಲ್ಲೆಡೆ ಇರುವ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಶೀನುಗಳು ಲಿಂಗಪತ್ತೆಗೆ ಬಳಕೆಯಾಗುತ್ತಿವೆ. ನವದೆಹಲಿಯೊಂದರಲ್ಲೇ ದಾಖಲಾದ ೧೮೦೦ ಸ್ಕ್ಯಾನಿಂಗ್ ಕೇಂದ್ರಗಳಿವೆ!

ಪ್ರಪಂಚದಾದ್ಯಂತ ಇರುವ ಗಂಡು ಮಗುವಿನ ಬೇಡಿಕೆಯಿಂದ ಉತ್ತೇಜಿತನಾದ ಅಮೆರಿಕದ ರೊನಾಲ್ಡ್ ಎರಿಕ್ಸನ್ ಎಂಬ ತಜ್ಞ ವೈದ್ಯ ಗರ್ಭಧಾರಣೆಗೆ ಮುನ್ನವೇ ಗಂಡುಮಗುವನ್ನು ಆಯ್ದುಕೊಳ್ಳಬಹುದಾದ ತಂತ್ರವನ್ನು ಅಭಿವೃದ್ಧಿಪಡಿಸಿ ಪೇಟೆಂಟ್ ಪಡೆದುಕೊಳ್ಳಲು ಹೊರಟಿದ್ದ. ಋತುಚಕ್ರದ ಯಾವ್ಯಾವ ದಿನಗಳಲ್ಲಿ ಹೇಗೆ ದಂಪತಿಗಳು ದೈಹಿಕ ಸಂಪರ್ಕ ಮಾಡಿದರೆ ಗಂಡುಮಗು ಹುಟ್ಟುತ್ತದೆಂದು ಹೇಳುವ ಚೀನೀ ಕ್ಯಾಲೆಂಡರ್ ಕಾಲಕಾಲಕ್ಕೆ ಮಹಿಳಾ ನಿಯತಕಾಲಿಕಗಳಲ್ಲಿ ಪ್ರಕಟವಾಗುತ್ತಿರುತ್ತದೆ. ಜಪಾನಿನ ಡಾ. ಎಹಾಚಿ ಇಜಕಾ ಶೇ. ೮೫% ಯಶಸ್ವಿಯಾದ ಗಂಡು ಹೆರುವ ತಂತ್ರವನ್ನು ಪ್ರಚಾರಪಡಿಸಿದ್ದ.

ಲಿಂಗಾನುಪಾತ ಎಲ್ಲ ಪ್ರದೇಶಗಳಲ್ಲೂ ಏಕರೂಪವಾಗಿಲ್ಲ. ಸ್ಥಳೀಯ ಸಂಸ್ಕೃತಿ, ಲಿಂಗಸೂಕ್ಷ್ಮತೆ, ಹೆಣ್ಣು-ಆಸ್ತಿ ಸಂಬಂಧ, ಆರ್ಥಿಕತೆ, ಶಿಕ್ಷಣ, ರಾಜಕೀಯ ಇತ್ಯಾದಿ ಹತ್ತುಹಲವು ಅಂಶಗಳು ಅದನ್ನು ಪ್ರಭಾವಿಸುತ್ತವೆ. ಸಾಕ್ಷರತೆ ಮತ್ತು ಜೀವನ ಮಟ್ಟ ಹೆಚ್ಚಿರುವ ಕೇರಳ ಮತ್ತಿತರ ದಕ್ಷಿಣದ ರಾಜ್ಯಗಳಲ್ಲಿ ಲಿಂಗಾನುಪಾತ ಚೆನ್ನಾಗಿದೆ. ಉತ್ತರ ಮತ್ತು ಪಶ್ಚಿಮ ಭಾರತದ ರಾಜ್ಯಗಳಲ್ಲಿ ಕಡಿಮೆ ಇದೆ. ಕರ್ನಾಟಕದಲ್ಲೇ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಉತ್ತಮವಾಗಿದ್ದರೆ ಉತ್ತರಕರ್ನಾಟಕ ಮತ್ತು ಉತ್ತಮ ನೀರಾವರಿ ಇರುವ ಪ್ರದೇಶಗಳಲ್ಲಿ ಕಡಿಮೆಯಾಗುತ್ತ ಬಂದಿದೆ.

ಬಡತನ ಇರುವುದರಿಂದ ಲಿಂಗಾನುಪಾತ ಇಳಿಯುತ್ತಿದೆ ಎಂದುಕೊಂಡೆವು. ಬಡತನವಿದ್ದರೂ ಸ್ಲಮ್ಮುಗಳಲ್ಲಿ ಲಿಂಗಾನುಪಾತ ಉತ್ತಮವಾಗಿದೆ. ಕೈಗಾರಿಕೀಕರಣ, ನೀರಾವರಿಗಳಿಂದ ಆರ್ಥಿಕ ಸ್ಥಿತಿ ಸುಧಾರಿಸಿದ ಕಡೆ(ಉದಾ: ಪಂಜಾಬ್, ಹರ್ಯಾಣ) ಲಿಂಗಾನುಪಾತ ಇಳಿದಿದೆ. ಶಿಕ್ಷಣ ದೊರೆತರೆ ಸರಿಯಾದೀತೆಂದುಕೊಂಡೆವು. ವೈದ್ಯ ಕುಟುಂಬಗಳಲ್ಲಿ ಹಾಗೂ ನಗರದ ಶಿಕ್ಷಿತ ವರ್ಗಗಳಲ್ಲಿ ಲಿಂಗಾನುಪಾತ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ, ಅಂದರೆ, ೯೧೧ ಇದೆ! ಆದರೆ ಕೇರಳ, ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಮಾತ್ರ ಲಿಂಗಾನುಪಾತ ಉತ್ತಮವಾಗಿದೆ. ಹೀಗೆ ಸುಲಭದಲ್ಲಿ ಸರಳೀಕರಿಸಲಾಗದ ಹಲವು ವೈರುಧ್ಯಗಳು ಕಂಡುಬರುತ್ತವೆ.

ಲಿಂಗಾನುಪಾತದ ಈ ಏರುಪೇರು ಪರಿಣಾಮಗಳು ಊಹಿಸಲಾಗದಷ್ಟು ಅಪಾಯಕರವಾಗಿದೆ. ಮುಖ್ಯವಾಗಿ ಸಮಾಜದಲ್ಲಿ ಹೆಣ್ಣು ಗುಣಗಳು ಕಡಿಮೆಯಾಗಿ ಅದು ಹೆಚ್ಚು ಗಂಡಾಗತೊಡಗಿ ಅನೇಕ ಸಾಮಾಜಿಕ-ಸಾಂಸ್ಕೃತಿಕ ಏರುಪೇರುಗಳಿಗೆ, ಆಘಾತಗಳಿಗೆ ಕಾರಣವಾಗುತ್ತದೆ. ಏರುತ್ತಿರುವ ಅತ್ಯಾಚಾರ ಮತ್ತು ಮಹಿಳಾ ದೌರ್ಜನ್ಯ; ಮಾನವ ಸಾಗಾಟ: ವೇಶ್ಯಾವೃತ್ತಿ; ಎಚ್ಐವಿ ಮುಂತಾದ ಲೈಂಗಿಕ ಕಾಯಿಲೆ ರೋಗಿಗಳು; ವಲಸೆ; ಇವೆಲ್ಲವೂ ಇದರ ಪರೋಕ್ಷ ಪರಿಣಾಮಗಳೇ. ಉತ್ತರ ಮತ್ತು ಪಶ್ಚಿಮ ಭಾರತದ ಎಷ್ಟೋ ಸಮುದಾಯಗಳು ಕೇರಳದಿಂದ ದುಡ್ಡುಕೊಟ್ಟು ಹೆಣ್ಣು ತರುತ್ತಿವೆ. ಹರ್ಯಾಣ ರಾಜ್ಯದಲ್ಲಿ ಹಾಗೆ ತಂದ ಹೆಣ್ಣನ್ನು ಮದುವೆಯಿಲ್ಲದೆ ಐದಾರು ಜನ ಸೇರಿ ಹಂಚಿಕೊಳ್ಳುತ್ತಿರುವ ಬಗ್ಗೆಯೂ ವರದಿಯಾಗಿದೆ.

ಹೆಣ್ಣುಗಳು ಕಾಣೆಯಾಗುತ್ತಿರುವುದರಿಂದ ಸಹಜವಾಗಿ ಎಲ್ಲ ಕ್ಷೇತ್ರಗಳಲ್ಲಿ ಅವರ ದನಿ, ಪ್ರಾತಿನಿಧ್ಯ ಕಡಿಮೆಯಾಗುತ್ತಿದೆ. ಜಾತಿ ಧರ್ಮಗಳು ತಂತಮ್ಮ ಹೆಣ್ಣುಗಳನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಬಿಗಿ ನಿರ್ಬಂಧಗಳನ್ನು ಹೇರತೊಡಗಿವೆ. ಮರ್ಯಾದಾ ಹತ್ಯೆ/ಖಾಪ್ ಪಂಚಾಯ್ತಿ/ಬಾಲ್ಯ ವಿವಾಹ ಮುಂತಾದ ಮರೆಯಾದ ಕೇಡುಗಳು ತಲೆಯೆತ್ತುತ್ತಿವೆ.


ಹಾಗಾದರೆ ಇದಕ್ಕಿಲ್ಲ ಪರಿಹಾರವೇನು? ಒಂದೇ ದಾರಿ: ಹೆಣ್ಣು ಜೀವಗಳನ್ನು ನಿರ್ಲಕ್ಷಿಸುವ ಕುಟುಂಬ ಮತ್ತು ಸಮಾಜ ಸರ್ವನಾಶದ ಕಡೆಗಷ್ಟೇ ಸಾಗುವುದೆಂಬುದನ್ನು ಮನವರಿಕೆ ಮಾಡಿಕೊಡುವ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳುವುದು.



(ಉ.ಕ.ದ ಕವಲಕ್ಕಿಯಲ್ಲಿ ಜನಪ್ರಿಯ ವೈದ್ಯೆಯಾಗಿರುವ ಎಚ್.ಎಸ್. ಅನುಪಮಾ ಕನ್ನಡದ ಪ್ರಗತಿಪರ ಚಿಂತಕಿ ಹಾಗೂ ಸಂಘಟಕಿಯೂ ಹೌದು)

ಮೂರು ಕವಿತೆಗಳು

ಕಲಾಕೃತಿಯೊಂದು



ಮುಚ್ಚಿಡುವುದಾಗದಿದ್ದಾಗ
ಬಿಕರಿಗಿಡಬಹುದಷ್ಟೆ ಬೀದಿಯಲ್ಲಿ
ಅಳೆದು ತೂಗಿ ಏರಿಳಿಯುವ ತಕ್ಕಡಿ
ಬೆಲೆಕಟ್ಟುತ್ತಾರೆ ಯಾರೋ
ಕೂಗುತ್ತಾರೆ ಹರಾಜು ಮತ್ತಿನ್ಯಾರೋ
ಪ್ರದರ್ಶನಕ್ಕಿಡುತ್ತಾರೆ
ಕಟ್ಟು ಹಾಕಿಸಿ ಮಗದೊಬ್ಬರು



ಕೈಯಿಂದ ಕೈಗಳ ದಾಟಿ
ಇದುವರೆಗೆ ಮುಚ್ಚಿಟ್ಟ
ದುಬಾರಿ ನಿಟ್ಟುಸಿರುಗಳು
ನೇತುಬಿದ್ದಿವೆಯೀಗ ಕಲಾಕೃತಿಗಳಾಗಿ!

ಬೆನ್ನಿಗೆ ತಾಗಿದ ಗೋಡೆಗೆ
ಆತುಕೊಂಡ ನಿಟ್ಟುಸಿರು
ಭಾರವಾಗುತ್ತದೆ ಮತ್ತಷ್ಟು
ಉಮ್ಮಳಿಸಿ ಅಳುತ್ತದೆ ಗೋಡೆ
ಬಿಕ್ಕುವ ನಿಟ್ಟುಸಿರು
ಕಲಾಕೃತಿಯ ನಗುವು.


–ರೂಪ ಹಾಸನ

ಎಂಥ ಚಮತ್ಕಾರ !

ಸಿಗರೇಟು ಸೇದಬೇಡಿ
ಮದ್ಯಪಾನ ಬಿಟ್ಟುಬಿಡಿ
ಹೇಳಿ ಹೇಳಿ ಪತಿಗೆ
ಸಾಕಾಗಿ ಹೋಗಿತ್ತು ಅವಳಿಗೆ.

ಆಗೋ ಬಿಟ್ಟೆ, ಇಗೋ ಬಿಟ್ಟೆ
ನನ್ನಾಣೆ, ನಿನ್ನಾಣೆ
ಮಕ್ಕಳಾಣೆ, ಮನೆದೇವರಾಣೆ
ಅಂಗೈನಲ್ಲಿರುವ ನಾಗವಳಿಯಾಣೆ
ಬಿಟ್ಟೆ, ಬಿಟ್ಟೆ, ಬಿಟ್ಟೆ.

ಬಿಟ್ಟೆ ಎಂಬುದು ಪ್ರತಿಬಾರಿ ಸುಳ್ಳಾಗಿ
ಜೋರು ಜಗಳವಾಗಿ
ಅವನ 'ಅಹಂ' ಜಾಗೃತವಾಗಿ
ಆಕಾಶಕ್ಕೆ ಎಗರುತ್ತಿದ್ದ ಜ್ವಾಲೆಯಾಗಿ.



(ಚಿತ್ರಗಳು: ರೂಪ ಹಾಸನ)

ಹುಡುಗಿ ಹತಾಶಳಾಗಲಿಲ್ಲ
ಗಾಂಧಿಯನ್ನು ಓದಿದ್ದಳಲ್ಲ
ಸ್ವಾತಂತ್ರ್ಯ ಚಳುವಳಿ ನೆನಪಿತ್ತಲ್ಲ
ಅಹಿಂಸೆಯ ಅಸ್ತ್ರಕ್ಕೆ ತುಕ್ಕು ಹಿಡಿದಿರಲಿಲ್ಲ.



ಮೌನಕ್ಕೆ ಶರಣಾದಳು
ಉಪವಾಸ ಕೂತಳು
ಅಸಹಕಾರ ಚಳುವಳಿ
ಶುರುವಚ್ಚಿಕೊಂಡಳು.


ಎಂಥಾ ಚಮತ್ಕಾರ !
ಎಂಥಾ ಚಮತ್ಕಾರ !!
ಜೋರಿಗೆ, ಜಗಳಕ್ಕೆ ಬಾಗದವನು
ಶರಣಾಗಿದ್ದ.

ಅವಳ ಮೌನಕ್ಕೆ, ಉಪವಾಸಕ್ಕೆ,
ಅವಳ ಅಸಹಕಾರಕ್ಕೆ
ಸಿಗರೇಟು ಮದ್ಯಪಾನ ನಿಜಕ್ಕೂ ಬಿಟ್ಟ
ಇನ್ನೆಂದೂ ಮುಟ್ಟೆನೆಂದು ಮಾತುಕೊಟ್ಟ.

ಪ್ರತಿಭಟನೆ, ಹೋರಾಟಕ್ಕೆ
ಅಹಿಂಸೆಯ ಅಸ್ತ್ರಗಳ ಕೊಟ್ಟಿದ್ದಕ್ಕೆ
ಹುಡುಗಿ, ತಲೆಬಾಗಿ ನಮಿಸಿದಳು
ತಾತನಿಗೆ.

ಜಿ. ಮಲ್ಲಿಕಾ ಬಸವರಾಜು

ನಾನೆಂದರೆ...



ಇದು ನಾನಲ್ಲವೆ ಅಲ್ಲ
ನನ್ನ ನೆರಳಿರಬೇಕು
ನಾನು ಹೀಗೆ ಬಣ್ಣಗೇಡಿಯಾಗಿ
ಇಡೀ ಮೈಗೆ ಕಪ್ಪು
ಸುರುವುಕೊಂಡಿರಲು ಸಾಧ್ಯವೇ ಇಲ್ಲ
ನಾನೆಂದರೆ ಪ್ರಖರ ಸೂರ್ಯರಶ್ಮಿ

ಕನಸುಗಳ ಮಾರಿಕೊಂಡ ಕವಿತೆ ಇರಬೇಕು
ಬರೀ ಖಾಲಿ ಖಾಲಿ ಭಾವಹೀನ ವ್ಯಾಕರಣ
ನಾನೆಂದರೆ ಸೆಳೆಯುವ ನಿತ್ಯ ಹರಿದ್ವರ್ಣ

ಛೇ, ರೆಕ್ಕೆ ಕತ್ತರಿಸಿಕೊಂಡ ಹಕ್ಕಿ ಇರಬೇಕು
ನಾನೆಂದರೆ ಸುಟ್ಟ ಬೂದಿಯಿಂದೆದ್ದು
ಆಗಸಕ್ಕೆ ನೆಗೆಯುವ ಫೀನಿಕ್ಸ್!

–ವೀಣಾ ಬಡಿಗೇರ

ಸಣ್ಣ ಕತೆ

ನಾನ್ಯಾರು?

ತೆಲುಗು ಮೂಲ: ಪಿ. ಸತ್ಯವತಿ
ಕನ್ನಡಕ್ಕೆ: ಡಿ.ಎನ್ ಶ್ರೀನಾಥ್

ಗೃಹಿಣಿಯಾಗುವುದಕ್ಕೆ ಮೊದಲು ಅವಳು ಯುವತಿಯಾಗಿದ್ದಳು... ಸುಶಿಕ್ಷಿತೆ, ಚತುರೆ ಮತ್ತು ಬುದ್ಧಿವಂತೆ. ಅಲ್ಲದೆ ಅವಳು ಚಂಚಲೆ ಹಾಗೂ ರೂಪವತಿಯೂ ಆಗಿದ್ದಳು.

ಅವಳ ಸೌಂದರ್ಯ, ಬುದ್ಧಿವಂತಿಕೆ ಮತ್ತು ಅವಳ ತಂದೆ ಕೊಟ್ಟ ವರದಕ್ಷಿಣೆಯಿಂದ ಸಂಪ್ರೀತನಾದ ಯುವಕನೊಬ್ಬ ಅವಳ ಕೊರಳಿಗೆ ಮಂಗಳಸೂತ್ರ ಕಟ್ಟಿ ಅವಳನ್ನು ತನ್ನ ಮನೆಗೆ ಗೃಹಿಣಿಯನ್ನಾಗಿ ಮಾಡಿಕೊಂಡು ಹೇಳಿದ, "ನೋಡು ಪ್ರಿಯೆ! ಇದು ನಿನ್ನ ಮನೆ." ಆ ಗೃಹಿಣಿ ಆ ಕೂಡಲೇ ಸೆರಗನ್ನು ಸೊಂಟಕ್ಕೆ ಕಟ್ಟಿಕೊಂಡು ಇಡೀ ಮನೆಯನ್ನು ಗುಡಿಸಿ ಸಾರಿಸಿ, ರಂಗೋಲೆ ಹಾಕಿದಳು. ಯುವಕ ಅವಳನ್ನು ಆಗಲೇ ಹೊಗಳುತ್ತಾ ಹೇಳಿದ, "ಮನೆಯನ್ನು ಓರಣವಾಗಿಡುವುದರಲ್ಲಿ ನೀನು ಚತುರೆ. ರಂಗೋಲೆ ಹಾಕುವುದರಲ್ಲೂ ನಿನ್ನದು ಎತ್ತಿದ ಕೈ, ಶಭಾಷ್! ಕೀಪ್ ಇಟ್ ಅಪ್" ಇಂಗ್ಲೀಷ್‌ನಲ್ಲಿಯೂ ಹೇಳಿ ಹೊಗಳಿ ಅವಳ ಹೆಗಲನ್ನು ಯುವಕ ತಟ್ಟಿದ.

ಗೃಹಿಣಿಗೆ ತುಂಬ ಖುಷಿಯಾಯಿತು. ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದೇ ತನ್ನ ಗುರಿಯನ್ನಾಗಿ ಮಾಡಿಕೊಂಡು ಜೀವನ ಕಳೆಯಲಾರಂಭಿಸಿದಳು. ಸದಾ ಮನೆಯನ್ನು ಗುಡಿಸಿ–ಒರೆಸಿ, ರಂಗೋಲಿಯಿಂದ ನಾನಾ ಚಿತ್ರಗಳನ್ನು, ಡಿಸೈನ್‌ಗಳನ್ನು ಬಿಡಿಸಿ ಮನೆಯನ್ನು ಸಜ್ಜುಗೊಳಿಸುತ್ತಿದ್ದಳು. ಹೀಗೆ ಅವಳ ಬದುಕು ಒರೆಸುವುದು ಮತ್ತು ರಂಗೋಲೆ ಚಿತ್ರಗಳಿಂದ ನೆಮ್ಮದಿಯಿಂದಿತ್ತು. ಆದರೆ ಅದೊಂದು ದಿನ ಅವಳು ಮನೆಯನ್ನು ಒರೆಸುತ್ತಿರುವಾಗ ಅಕಸ್ಮಾತ್ 'ನನ್ನ ಹೆಸರೇನು' ಎಂದು ಯೋಚಿಸಿ ಒಮ್ಮೆಲೆ ಕಂಪಿಸಿದಳು. ಒರೆಸುವ ಬಟ್ಟೆ ಮತ್ತು ರಂಗೋಲಿ ಪೆಟ್ಟಿಗೆಯನ್ನು ಅಲ್ಲೆ ಎಸೆದು ಕಿಟಕಿ ಬಳಿ ನಿಂತು ತಲೆ ಕೆರೆದುಕೊಳ್ಳುತ್ತ ಒಂದೇ ಸಮನೆ ಯೋಚಿಸಿದಳು. ನನ್ನ ಹೆಸರೇನು? ನನ್ನ ಹೆಸರೇನು? ಎದುರಿಗಿದ್ದ ಮನೆಯ ಕಾಂಪೌಂಡಿಗೆ ನೇಮ್ ಪ್ಲೇಟ್ ಹಾಕಲಾಗಿತ್ತು: 'ಶ್ರೀಮತಿ ಎಂ. ಸುಹಾಸಿನಿ ಎಂ.ಎ., ಪಿ.ಹೆಚ್.ಡಿ., ಪ್ರಿನ್ಸಿಪಾಲ್ 'ಎಕ್ಸ್' ಕಾಲೇಜ್'. ಹೌದು ಹೀಗೇ ನನ್ನದೂ ಒಂದು ಹೆಸರಿರಬೇಕಲ್ಲ?

ಅದನ್ನು ನಾನು ಹೇಗೆ ಮರೆತೆ? ಮನೆಯನ್ನು ಗುಡಿಸಿ ಒರೆಸುವುದರಲ್ಲಿಯೇ ನನ್ನ ಹೆಸರನ್ನು ಮರೆತುಬಿಟ್ಟೆನಲ್ಲ! ಈಗೇನು ಮಾಡಲಿ? ಅವಳು ವ್ಯಗ್ರಳಾದಳು. ಮನಸ್ಸು ಅಶಾಂತವಾಯಿತು. ಅಂದು ಅವಳು ಹೇಗೋ ತನ್ನ ಒರೆಸುವ ಕೆಲಸವನ್ನು ಪೂರೈಸಿದಳು. ಅಷ್ಟರಲ್ಲಿ ಕೆಲಸದವಳು ಬಂದಳು. ಬಹುಶಃ ಅವಳಿಗೆ ನೆನಪಿರಬೇಕೆಂದು ಯೋಚಿಸಿ ಅವಳನ್ನು ವಿಚಾರಿಸಿದಳು "ಏನಮ್ಮಾ, ನಿನಗೆ ನನ್ನ ಹೆಸರು ಗೊತ್ತಾ?"

"ನೀವೇನು ಕೇಳ್ತಿದ್ದೀರಮ್ಮ! ಒಡತಿಯರ ಹೆಸರಿನಿಂದ ನಮಗೇನಾಗಬೇಕಾಗಿದೆ? ನೀವು ನಮಗೆ ಒಡತಿ–ಉದಾಹರಣೆಗೆ ಬಿಳಿ ಬಂಗ್ಲೆಯ ಕೆಳಗಿನ ಭಾಗದಲ್ಲಿರುವ ಮನೆಯೊಡತಿಯಂತೆ–ನೀವು" ಎಂದಳು ಕೆಲಸದಾಕೆ.

"ಸರಿ, ಪಾಪ ನಿನಗೇನು ಗೊತ್ತು?" ಗೃಹಿಣಿ ಯೋಚಿಸಿದಳು. ಮಧ್ಯಾಹ್ನ ಮಕ್ಕಳು ಊಟ ಮಾಡಲು ಮನೆಗೆ ಸ್ಕೂಲಿನಿಂದ ಬಂದರು. ಮಕ್ಕಳಿಗೆ ಬಹುಶಃ ನೆನಪಿರಬೇಕೆಂದು ಗೃಹಿಣಿ ಯೋಚಿಸಿದಳು.

"ಮಕ್ಕಳೇ! ನನ್ನ ಹೆಸರೇನು ನಿಮಗ್ಗೊತ್ತಾ?" ಗೃಹಿಣಿ ಮಕ್ಕಳನ್ನೇ ಗಮನಿಸಿದಳು.

"ನೀನು ಅಮ್ಮ–ನಿನ್ನ ಹೆಸರು ಅಮ್ಮ ಅಂತಾನೆ. ನಾವು ಹುಟ್ಟಿದಾಗಿನಿಂದ ನಮಗಷ್ಟೇ ಗೊತ್ತು. ಅಪ್ಪನ ಹೆಸರಿಗೆ ಕಾಗದಗಳು ಬರುತ್ತವೆ ಅವರನ್ನು ಎಲ್ಲರೂ ಹೆಸರು ಹಿಡಿದು ಕರೀತಾರೆ. ಅದಕ್ಕೇ ನಮಗೆ ಅವರ ಹೆಸರು ಗೊತ್ತಿದೆ. ನೀನು ನಮಗೆ ನಿನ್ನ ಹೆಸರನ್ನು ಎಂದು ಹೇಳಿದ್ದೆ? ನಿನ್ನ ಹೆಸರಿಗೆ ಪತ್ರಗಳೂ ಬರಲ್ಲ!" ಮಕ್ಕಳು ಆಶ್ಚರ್ಯಗೊಂಡವು. ಗೃಹಿಣಿ ಮತ್ತೆ ಯೋಚನಾಮಗ್ನಳಾದಳು. ಹೌದು ನನಗ್ಯಾರು ಪತ್ರ ಬರೀತಾರೆ? ಅಮ್ಮ–ಅಪ್ಪ ನನಗಿದ್ದಾರೆ. ಆದ್ರೆ ಅವರು ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಫೋನ್ ಮಾಡ್ತಾರೆ. ತಂಗಿ ಮತ್ತು ಅಕ್ಕಂದಿರೂ ಇದ್ದಾರೆ. ಆದ್ರೆ ಅವರೂ ತಮ್ಮ ತಮ್ಮ ಮನೆಗಳನ್ನು ಗುಡಿಸಿ–ಒರೆಸುವುದರಲ್ಲೇ ಮಗ್ನರಾಗಿರುತ್ತಾರೆ. ಮದುವೆ ಅಥವಾ ಮಹಿಳಾ ಕಾರ್ಯಕ್ರಮಗಳಲ್ಲಿ ಭೇಟಿಯಾದಾಗ ರಂಗೋಲಿಯ ಹೊಸ ಡಿಸೈನ್‌ಗಳು ಅಥವಾ ಹೊಸ ಅಡುಗೆ ಬಗ್ಗೆಯೇ ಮಾತನಾಡುತ್ತಾರೆ. ಪತ್ರ–ಗಿತ್ರ ಏನೂ ಇಲ್ಲ. ಗೃಹಿಣಿಗೆ



ನಿರಾಸೆಯಾಯಿತು. ಮನಸ್ಸಿನ ವ್ಯಾಕುಲತೆ ಹೆಚ್ಚಾಯಿತು. ಅಷ್ಟರಲ್ಲಿ ನೆರೆಯವಳು ಮಹಿಳೆಯರ ಕಾರ್ಯಕ್ರಮವೊಂದಕ್ಕೆ ಆಮಂತ್ರಿಸಲು ಬಂದಳು. ಕಡೇಪಕ್ಷ ಇವಳಿಗಾದರೂ ನೆನಪಿರಬೇಕೆಂದು ಯೋಚಿಸಿ ಅವಳನ್ನು ಪ್ರಶ್ನಿಸಿದಾಗ ಅವಳು ಕಿಲ–ಕಿಲನೆ ನಗುತ್ತ ಹೇಳಿದಳು. "ನಾನೆಂದೂ ನಿಮ್ಮ ಹೆಸರನ್ನು ಕೇಳಲಿಲ್ಲ. ನೀವೂ ಹೇಳಲಿಲ್ಲ. ಬಲಗಡೆಯ ಬಿಳಿ ಬಂಗ್ಲೆಯವಳು ಅಥವಾ ಔಷಧಿ ಕಂಪೆನಿಯ ಮ್ಯಾನೇಜರನ ಹೆಂಡತಿ ಅಥವಾ ಬೆಳ್ಳಗೆ ತೆಳ್ಳಗಿರುವವಳು–ಹೀಗೆ ನಾವು ಪರಸ್ಪರ ನಿಮ್ಮ ಬಗ್ಗೆ ಮಾತಾಡಿಕೊಳ್ಳುತ್ತೇವೆ ಅಷ್ಟೆ".

ಇನ್ನು ಉಪಯೋಗವಿಲ್ಲ. ಮಕ್ಕಳ ಸ್ನೇಹಿತರಿಗೂ ಏನು ಗೊತ್ತಿರುತ್ತೆ? ಅದೇ ನಾನು ಕಮಲಾಳ ತಾಯಿ ಅಥವಾ ಆಂಟಿ ಎನ್ನುವುದಷ್ಟೇ ಅವರಿಗೆ ಗೊತ್ತು. ಈಗ ಗಂಡನನ್ನು ಕೇಳುವುದೇ ಒಳಿತು. ಅವರಿಗೆ ನೆನಪಿರಲೇಬೇಕು.....

"ನೋಡಿ, ನಾನು ನನ್ನ ಹೆಸರನ್ನು ಮರೆತುಬಿಟ್ಟಿದ್ದೇನೆ. ನಿಮಗಂತೂ ನೆನಪಿರಬಹುದು. ಹೇಳಿ?" ರಾತ್ರಿ ಊಟ ಮಾಡುವಾಗ ಗೃಹಿಣಿ ವಿಷಯವೆತ್ತಿದಳು.

"ಏನಾಯ್ತೆ ಈಗ! ಎಂದೂ ಕೇಳದ ಪ್ರಶ್ನೆಯನ್ನು ಇವತ್ತು ಯಾಕೆ ಕೇಳ್ತಿದ್ದೀಯ? ನಿನ್ನನ್ನು ಮದುವೆಯಾದಾಗಿನಿಂದ 'ಏನೇ, ನೋಡೇ' ಎಂದೇ ಕರೆದು ಅಭ್ಯಾಸವಾಗಿ ಹೋಗಿದೆ. ನೀನೆಂದೂ, "ನೋಡಿ, ಹೀಗೆಲ್ಲಾ ಕರೆಯಬೇಡಿ, ನನಗೇನು ಹೆಸರಿಲ್ವಾ?" ಅಂತ ಹೇಳಲಿಲ್ಲ. ಹೀಗಾಗಿ ನಾನು ಮರೆತುಬಿಟ್ಟಿದ್ದೇನೆ. ಈಗೇನಾಯ್ತು? ಎಲ್ಲರೂ ನಿನ್ನನ್ನು ಮಿಸೆಸ್ ಮೂರ್ತಿ ಅಂತ ಹೇಳ್ತಾರಲ್ವ?" ಗಂಡ ಅಟ್ಟಹಾಸ ಮಾಡಿ ನಕ್ಕ.

"ಮಿಸೆಸ್ ಮೂರ್ತಿ ಅಲ್ಲ. ನನಗೆ ನನ್ನ ನಿಜವಾದ ಹೆಸರು ಬೇಕು. ಈಗೇನು ಮಾಡ್ಲಿ?" ಗೃಹಿಣಿ ಕಳವಳಗೊಂಡಳು.

"ಇದಕ್ಕೆ ಯಾಕೆ ಯೋಚನೆ ಮಾಡ್ತೀಯ? ಯಾವುದಾದರೂ ಹೊಸ ಹೆಸರನ್ನು ಇಟ್ಟುಕೋ!" ಗಂಡ ಸಲಹೆಯಿತ್ತ.

"ನೀವೊಳ್ಳೆ! ನಿಮ್ಮ ಹೆಸರು ಸತ್ಯನಾರಾಯಣ ಮೂರ್ತಿಯಾಗಿದ್ದು, ನಿಮಗೆ ಯಾರಾದರೂ ಶಿವರಾಮ್ ಅಥವಾ ಸುಂದರ ರಾವ್ ಅಂತ ಹೆಸರಿಟ್ಟುಕೊಳ್ಳಿ ಅಂತ ಹೇಳಿದರೆ ನೀವು ಇಟ್ಟುಕೊಳ್ತೀರ? ನನಗೆ ನನ್ನ ಹೆಸರೇ ಬೇಕು" ಗೃಹಿಣಿ ಹಠ ಹಿಡಿದಳು.

"ನೀನೊಳ್ಳೆ ವಿಚಿತ್ರ ಕಣೆ! ಎಷ್ಟಾದರೂ ಓದಿದವಳಲ್ವಾ ನೀನು? ಸರ್ಟಿಫಿಕೇಟ್ಸನ್ನು ನೋಡು. ಅವುಗಳಲ್ಲಿಯಂತೂ ಹೆಸರಿರಲೇಬೇಕು. ಅಷ್ಟೂ ಕಾಮನ್‌ಸೆನ್ಸ್ ಇಲ್ಲದಿದ್ರೆ ಹೇಗೆ? ಹೋಗಿ ನೋಡು" ಗಂಡ ಮತ್ತೆ ಸಲಹೆಯಿತ್ತ.

ಗೃಹಿಣಿ ಸರ್ಟಿಪಿಕೇಟ್ಸ್ ಶೋಧನೆಯಲ್ಲಿ ತೊಡಗಿದಳು. ಅಲ್ಮಾರಿನಲ್ಲಿ ರೇಷ್ಮೆ, ಶಿಫಾನ್, ನೂಲು ಮತ್ತು ವಾಯಿಲ್ ಸೀರೆಗಳು, ಮ್ಯಾಚಿಂಗ್ ಬ್ಲೌಸುಗಳು, ಪೆಟಿಕೋಟ್, ಬಳೆಗಳು, ಮಣಿಗಳು, ಪಿನ್‌ಗಳು, ಮುತ್ತಿನಹಾರ, ಕುಂಕುಮದ ಡಬ್ಬಿಗಳು, ಗಂಧದ ಬಟ್ಟಲುಗಳು, ಬೆಳ್ಳಿ ತಟ್ಟೆ, ಬಂಗಾರದ ಒಡವೆಗಳು, ಎಲ್ಲವನ್ನು ವ್ಯವಸ್ಥಿತವಾಗಿಡಲಾಗಿತ್ತು. ಆದರೆ ಎಲ್ಲೂ ಸರ್ಟಿಫಿಕೇಟ್ಸ್‌ಗಳ ಸುಳಿವೇ ಇಲ್ಲ! ಹಾಂ, ನೆನಪಾಯಿತು. ಮದುವೆಯಾದ ನಂತರ ನಾನಿಲ್ಲಿಗೆ ಬಂದಾಗ, ಅವನ್ನು ತರಲೇ ಇಲ್ಲವೆಂದು ಅವಳು ಯೋಚಿಸಿದಳು.

"ಹೌದು, ನಾನು ಅವುಗಳನ್ನು ಇಲ್ಲಿಗೆ ತರಲೇ ಇಲ್ಲ. ನನ್ನ ಹಳ್ಳಿಗೆ ಹೋಗಿ ಸರ್ಟಿಫಿಕೇಟ್‌ಗಳನ್ನು ಹುಡುಕುವೆ. ನನ್ನ ಹೆಸರನ್ನು ತಿಳಿದುಕೊಂಡು ಇನ್ನೆರಡು ದಿನಗಳಲ್ಲಿ ಮರಳಿ ಬರುವೆ" ಅವಳು ಗಂಡನಿಗೆ ಹೇಳಿದಳು.

"ಇದೊಳ್ಳೆ ವಿಚಿತ್ರವಾಯ್ತು! ಹೆಸರಿಗೋಸ್ಕರ ಹಳ್ಳಿಗೆ ಹೋಗ್ತೀಯಾ? ನೀನು ಹಳ್ಳಿಗೆ ಹೋದರೆ ಎರಡು ದಿನ ಮನೆಯನ್ನು ಗುಡಿಸಿ-ಒರೆಸುವವರು ಯಾರು?" ಪತಿ ಪರಮೇಶ್ವರ ಅವಳನ್ನೇ ನೋಡಿದ.

ಹೂಂ, ಇವರು ಹೇಳೋದೂ ಸರಿ-ನಾನೇ ಚೆನ್ನಾಗಿ ಗುಡಿಸಿ ಒರಿಸುತ್ತೀನಲ್ಲ! ಇಷ್ಟೊಂದು ದಿನ ಈ ಕೆಲಸವನ್ನು ನಾನು ಇನ್ಯಾರಿಗೂ ಮಾಡೋದಕ್ಕೆ ಬಿಡಲಿಲ್ಲವಲ್ಲ ಅದಕ್ಕೆ....! ಎಲ್ಲರಿಗೂ ಅವರದೇ ಆದ ಕೆಲಸಗಳಿರುತ್ತವೆ! ಗಂಡನಿಗೆ ನೌಕರಿ, ಮಕ್ಕಳಿಗೆ ಓದಿಕೊಳ್ಳುವುದು-ಬರೆದುಕೊಳ್ಳುವುದು. ಪಾಪ ಎಲ್ಲರೂ ಯಾಕೆ ತಲೆಕೆಡಿಸಿಕೊಳ್ಳಬೇಕು.... ಹೀಗೆಲ್ಲಾ ಯೋಚಿಸಿ ನಾನೇ ಈ ಕೆಲಸ ಮಾಡಿಕೊಂಡು ಬಂದಿದ್ದೀನಿ. ಅವರಿಂದ ಇವೆಲ್ಲಾ ಆಗಲ್ಲವಲ್ಲ !

ಆದರೂ ಹೆಸರನ್ನು ತಿಳಿದುಕೊಳ್ಳದೆ ಬದುಕೋದು ಹೇಗೆ? ಇಷ್ಟೊಂದು ದಿನ ಈ ವಿಚಾರ ನೆನಪಿಗೆ ಬರಲಿಲ್ಲ. ಹೀಗಾಗಿ ಕಳೆದುಹೋಯ್ತು. ಈಗ ನೆನಪಿಗೆ ಬಂದ ಮೇಲೆ ಕಷ್ಟವಾಗಿದೆ.

"ಎರಡು ದಿನ ಹೇಗಾದ್ರೂ ತೊಂದ್ರೆ ತೆಗೆದುಕೊಳ್ಳಿ. ಹೋಗಿ, ನನ್ನ ಹೆಸರನ್ನು ತಿಳಿದುಕೊಂಡು ಬರೋವರ್ಗೂ ಬದುಕೋದು ಕಷ್ಟ ಅಂತ ಅನ್ನಿಸ್ತಿದೆ" ದೀನಳಾಗಿ ಪ್ರಾರ್ಥಿಸಿಕೊಂಡಳು ಗೃಹಿಣಿ ಮನೆಯಿಂದ ಹೊರಗೆ ಕಾಲಿಟ್ಟಳು.

* * * * * * *

"ಯಾಕಮ್ಮ, ಇದೇನು ಇದ್ದಕ್ಕಿದ್ದಂತೆ ಹೀಗೆ ಬಂದುಬಿಟ್ಟೆ?" ಹೀಗೆಂದು ತಂದೆ ತಾಯಿ ಅವಳನ್ನು ಸ್ನೇಹದಿಂದ ಬರಮಾಡಿಕೊಂಡು ಕ್ಷೇಮ ಸಮಾಚಾರವನ್ನು ವಿಚಾರಿಸಿದರು. ಅವರಿಗೆ ಭಯವಾಗಿತ್ತು. ಗೃಹಿಣಿ ತಾನು ಬಂದ ಉದ್ದೇಶವನ್ನು ನೆನಪಿಸಿಕೊಂಡು ಹೇಳಿದಳು "ಅಮ್ಮಾ, ನನ್ನ ಹೆಸರೇನು ಅಂತ ಹೇಳು".

"ಇದೇನು ಹೀಗೆ ಕೇಳ್ತಿದ್ದೀಯಾ? ನೀನು ನಮ್ಮ ಹಿರಿಯ ಮಗಳು. ನಿನ್ನನ್ನು ಬಿ.ಎ. ವರೆಗೆ ಓದಿಸಿದೆವು. ಐವತ್ತು ಸಾವಿರ ವರದಕ್ಷಿಣೆ ಕೊಟ್ಟು ಮದುವೆ ಮಾಡಿದೆವು. ಎರಡು ಹೆರಿಗೆ ಮಾಡಿದೆವು. ಆಸ್ಪತ್ರೆಯ ಖರ್ಚನ್ನೆಲ್ಲಾ ನಾವೇ ವಹಿಸಿಕೊಂಡೆವು. ನಿನಗೆ ಎರಡು ಸುಂದರ ಮಕ್ಕಳಿವೆ. ನಿನ್ನ ಗಂಡ ಒಳ್ಳೆಯ ನೌಕರಿಯಲ್ಲಿದ್ದಾನೆ. ಅವನು ಒಳ್ಳೆಯವನು. ಮಕ್ಕಳೂ ಬುದ್ಧಿವಂತರು."

"ಅಮ್ಮಾ, ನನಗೆ ಚರಿತ್ರೆ ಬೇಕಾಗಿಲ್ಲ. ನನಗೆ ನನ್ನ ಹೆಸರು ಬೇಕು. ಹೋಗ್ಲಿ ಕಡೇ ಪಕ್ಷ ನನ್ನ ಸರ್ಟಿಫಿಕೇಟ್ಸ್‌ಗಳು ಎಲ್ಲಿವೆ ಅಂತಲಾದ್ರೂ ಹೇಳು"

"ಗೊತ್ತಿಲ್ಲಮ್ಮ! ಈಗ್ಯೆ ಕೆಲವು ದಿನಗಳ ಹಿಂದೆಯಷ್ಟೇ ಬೀರುವಿನಲ್ಲಿದ್ದ ಹಳೆ ಕಾಗದ-ಪತ್ರಗಳು ಮತ್ತು ಫೈಲ್ಸ್‌ಗಳನ್ನೆಲ್ಲ ಹೊರಗೆ ತೆಗೆದು ಅದರಲ್ಲಿ ಗಾಜಿನ ಸಾಮಾನುಗಳನ್ನು ಇಡಿಸಿದ್ದೇನೆ. ಕೆಲವು ಬೇಕಾದ ಫೈಲ್ಸ್‌ಗಳನ್ನು ಉಪ್ಪರಿಗೆಯಲ್ಲಿ ಹಾಕಿಸಿದ್ದೇನೆ. ನಾಳೆ ನೋಡೋಣ. ಈಗೇನು ಅವಸರ? ಆರಾಮಾಗಿ ಸ್ನಾನ ಮಾಡಿ ಊಟ ಮಾಡಮ್ಮ" ತಾಯಿ ಮಗಳಿಗೆ ಸಮಾಧಾನ ಮಾಡಿದರು. ಗೃಹಿಣಿ ಆರಾಮಾಗಿ ಸ್ನಾನ ಮಾಡಿ ಊಟವನ್ನಂತೂ ಮಾಡಿದಳು. ಆದರೆ ಅವಳಿಗೆ ನಿದ್ದೆಯೇ ಬರಲಿಲ್ಲ. ನಗ್ತಾ-ಹಾಡ್ತಾ ಮನೆಯನ್ನು ಗುಡಿಸಿ-ಒರೆಸಿ ಮತ್ತು ರಂಗೋಲಿ ಹಾಕ್ತಾ ಹಾಕ್ತಾ ತನ್ನ ಹೆಸರನ್ನೇ ಮರೆತಿದ್ದರಿಂದ ಇಷ್ಟೊಂದು ಕಷ್ಟಕ್ಕಿಟ್ಟುಕೊಳ್ಳುತ್ತೆ ಅಂತ ಅವಳೆಂದೂ ಯೋಚಿಸಿಯೇ ಇರಲಿಲ್ಲ.

ಬೆಳಗಾಯಿತು. ಆದರೆ ಉಪ್ಪರಿಗೆಯಲ್ಲಿ ಸರ್ಟಿಫಿಕೇಟ್ ಹುಡುಕುವ ಕೆಲಸ ಮಾತ್ರ ಪೂರೈಸಲಿಲ್ಲ. ಈ ನಡುವೆ ಎದುರಿಗೆ ಕಂಡವರನ್ನೆಲ್ಲಾ-ಮರ-ಗಿಡಗಳನ್ನು, ಎಲೆ-ಕಡ್ಡಿಗಳನ್ನು, ಕೆರೆಯನ್ನು, ತನ್ನ ಸ್ಕೂಲ್ ಮತ್ತು ಕಾಲೇಜಿನ ಎಲ್ಲರಿಗೂ-ಕೂಗಿ ಕೂಗಿ ಪ್ರಶ್ನಿಸಿದಳು. ನನ್ನ ಹೆಸರೇನೆಂದು! ಕಡೆಗೆ ಗೃಹಿಣಿಗೆ ತನ್ನ ಸ್ನೇಹಿತೆಯೊಬ್ಬಳನ್ನು ಭೇಟಿಯಾದಾಗ ಹೆಸರು ಸಿಕ್ಕಿತು! ಆ ಗೆಳತಿ ಅವಳಂತೆಯೇ, ಅವಳೊಂದಿಗೆ ಓದಿ, ಅವಳಂತೆಯೇ ಮದುವೆ ಮಾಡಿಕೊಂಡಿದ್ದಳು. ಆದರೆ ಅವಳೂ ನಮ್ಮ ಈ ಗೃಹಿಣಿಯಂತೆ ಮನೆಯನ್ನು ಗುಡಿಸಿ-ಒರೆಸುವುದನ್ನು ಬದುಕೆಂದು ತಿಳಿಯದೆ ಅದನ್ನು ಜೀವನದ ಒಂದು ಭಾಗವೆಂದಷ್ಟೇ ತಿಳಿದಿದ್ದಳು. ಅವಳಿಗೆ ತನ್ನ ಹೆಸರು ಮಾತ್ರವಲ್ಲ, ತನ್ನ ಗೆಳತಿಯರ ಹೆಸರೂ ನೆನಪಿತ್ತು. ಅವಳು ಗೃಹಿಣಿಯನ್ನು ಕಂಡೊಡನೆಯೇ ಕೂಗಿದಳು. "ಏಯ್, ಶಾರದಾ! ನನ್ನ ಪ್ರಿಯ ಶಾರದಾ!!" ಅವಳು ಗೃಹಿಣಿಯನ್ನು ಬರಸೆಳೆದು ಅಪ್ಪಿಕೊಂಡಳು. ಬಿಸಿಲಿನ ಝಳದಿಂದ, ಬಾಯಾರಿಕೆಯಿಂದ ಬಳಲಿದ ಮತ್ತು ಮರಣಾಸನ್ನ ವ್ಯಕ್ತಿಗೆ ಯಾರೋ ಹೊಸ ತಂಬಿಗೆಯಲ್ಲಿದ್ದ ನೀರನ್ನು ಚಮಚದಿಂದ ಬಾಯಿಗೆ ಹಾಕಿ ಜೀವದಾನ ಕರುಣಿಸಿದಂತೆ ಆ ಗೆಳತಿ ಗೃಹಿಣಿಗೆ ಜೀವದಾನ ಮಾಡಿದಳು!

"ನೀನು ಶಾರದೆ, ನೀನು ಹತ್ತನೆ ತರಗತಿಯಲ್ಲಿ ಮೊದಲ ದರ್ಜೆಯಲ್ಲಿ ಪಾಸಾಗಿದ್ದೆ. ಕಾಲೇಜಿನ ಸಂಗೀತ ಸ್ಪರ್ಧೆಯಲ್ಲೂ ಮೊದಲನೆಯವಳಾಗಿದ್ದೆ. ಆಗಾಗ ಒಳ್ಳೆಯ ಪತ್ರಗಳನ್ನೂ ಬರೆಯುತ್ತಿದ್ದೆ. ನನಗೆ ನಮ್ಮ ಸ್ನೇಹಿತೆಯರೊಂದಿಗೆ ಭೇಟಿಯೂ ಆಗುತ್ತಿರುತ್ತೆ. ನಾವು ಒಬ್ಬರಿಗೊಬ್ಬರು ಪತ್ರಗಳನ್ನು ಬರೆದುಕೊಳ್ಳುತ್ತಿರುತ್ತೇವೆ. ಆದ್ರೆ, ನಿನ್ನ ಜೊತೆ ಮಾತ್ರ ಸಂಬಂಧ ಕಡಿದುಹೋಗಿದೆ. ಹೇಳು, ಹೀಗೇಕೆ ಅಜ್ಞಾತವಾಸ ಮಾಡುತ್ತಿರುವೆ?" ಗೆಳತಿ ಕಾರಣ ತಿಳಿಯಲು ಬಯಸಿದಳು.

"ಹೌದು ಪ್ರಮೀಳಾ! ನಿನ್ನ ಮಾತು ಸರಿ, ನಾನು ಶಾರದೆ. ನೀನು ಹೇಳುವವರೆಗೂ ನನಗೆ ನನ್ನ ಹೆಸರೇ ಮರೆತು ಹೋಗಿತ್ತು. ನನ್ನ ಮೆದುಳಿನ ತುಂಬಾ ಬರೇ ಒರೆಸೋದು-ಗುಡಿಸೋದು, ಗುಡಿಸೋದು-ಒರೆಸೋದೇ ತುಂಬಿ ಹೋಗಿದೆ. ನೀನು ಭೇಟಿಯಾಗದಿದ್ರೆ ನಾನು ಹುಚ್ಚಿಯಾಗಿಬಿಡ್ತಿದ್ದೆ" ಎಂದು ಶಾರದಾ ನಾಮಧಾರಿಣಿಯಾದ ಆ ಗೃಹಿಣಿ ನೇರವಾಗಿ ಮನೆಗೆ ಹೋದಳು. ಉಪ್ಪರಿಗೆ ಏರಿ, ಹಳೆ ಫೈಲುಗಳನ್ನು ಕೆದಕಿ-ಕೆದಕಿ ತನ್ನ ಸರ್ಟಿಫಿಕೇಟ್ಸ್‌ಗಳು, ತಾನು ರಚಿಸಿದ ಚಿತ್ರಗಳು, ಹಳೆ ಆಲ್ಬಮ್, ಎಲ್ಲವನ್ನೂ ಹುಡುಕಿ ತಂದಳು. ಶಾಲೆ-ಕಾಲೇಜುಗಳಲ್ಲಿ ಗೆದ್ದ ಬಹುಮಾನಗಳನ್ನೂ ಹುಡುಕಿದಳು.

ಈ ಎಲ್ಲದರೊಂದಿಗೆ ಅವಳು ತನ್ನ ಮನೆಗೆ ಮರಳಿ ಬಂದಳು. "ನೀನಿರಲಿಲ್ಲ ನೋಡು, ಮನೆ ಅನ್ನೋದು ಹೇಗಾಗಿಬಿಟ್ಟಿದೆ, ಛತ್ರದ ಥರ ಕಾಣಿಸ್ತಿದೆ. ಸದ್ಯ, ನೀನು ಬಂದೆಯಲ್ಲ. ಇನ್ನು ಹಬ್ಬ ಅಂತ್ಲೇ ತಿಳಿದುಕೋ" ಎಂದು ಗಂಡ ಸ್ವಾಗತಿಸಿದ.

"ಮನೆಯನ್ನು ಗುಡಿಸಿ ಒರೆಸಿದರಷ್ಟೆ ಹಬ್ಬವಾಗಲ್ಲ. ಹಾಂ. ಮತ್ತೊಂದು ವಿಷಯ, ಇವತ್ತಿನಿಂದ ನೀವು ನನಗೆ 'ಏನೇ-ನೋಡೇ' ಅಂತ ಕರೀಬೇಡಿ. ನನ್ನ ಹೆಸರು ಶಾರದೆ. 'ಶಾರದಾ' ಅಂತ ಕರೀರಿ! ತಿಳೀತಾ?" ಎಂದು ಏನೋ ಗೊಣಗಿಕೊಳ್ಳುತ್ತಾ ಅವಳು ಒಳಗೆ ಹೊರಟು ಹೋದಳು.

ಯಾವ ಮೂಲೆಯಲ್ಲಿ ಧೂಳಿದೆ, ಎಲ್ಲಿ ವಸ್ತುಗಳು ಅಸ್ತವ್ಯಸ್ತವಾಗಿವೆ ಎಂದು ತಿಳಿಯಲು ಶಾರದೆ ಮನೆಯನ್ನೆಲ್ಲಾ ಮೂಸಿ ಮೂಸಿ ನೋಡುತ್ತಾ ಕಡೆಗೆ ಎರಡು ದಿನದಿಂದ ಧೂಳು ಮೆತ್ತಿಕೊಂಡ ಸೋಫಾದಲ್ಲಿ ಕಾಲು ಚಾಚಿಕೊಂಡು ಕೂತು ತನ್ನ ಮಕ್ಕಳಿಗೆ, ತನಗೆ ತಂದುಕೊಟ್ಟಿದ್ದ ಆಟದ ಸಾಮಾನುಗಳನ್ನು ತೋರಿಸುವುದರಲ್ಲಿ ಕಳೆದುಹೋದಳು. *



(ತೆಲುಗಿನ ಹಿರಿಯ ಮತ್ತು ಪ್ರಸಿದ್ಧ ಲೇಖಕಿಯಾದ ಪಿ. ಸತ್ಯವತಿಯವರು ನೂರಕ್ಕೂ ಹೆಚ್ಚು ಕಥೆಗಳನ್ನೂ, ಐದು ಕಾದಂಬರಿಗಳನ್ನೂ ಬರೆದು ಆಂಧ್ರದ ಸಾಹಿತ್ಯ ಪ್ರೇಮಿಗಳ ಮನೆಮಾತಾಗಿದ್ದಾರೆ. ಅವರೀಗ ವಿಜಯವಾಡಾದ ಕಾಲೇಜೊಂದರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುತಿದ್ದಾರೆ.)

ಪ್ರಿಯ ಓದುಗರೇ,

'ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು *ಸಂಪಾದಕರು, ಹೊಸ ಮನುಷ್ಯ*-ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.

ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.

ಪತ್ರಿಕೆಯಲ್ಲಿನ ಲೇಖನಗಳ ಬಗ್ಗೆ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಬರೆಯ ಬಯಸುವವರು, ಅವನ್ನು ಸಂಕ್ಷಿಪ್ತವಾಗಿ ಬರೆದು ಆಯಾ ತಿಂಗಳ ೨೦ರೊಳಗೆ ನಮಗೆ ತಲುಪುವಂತೆ ಕಳಿಸಬೇಕು. ಈ ಮೇಲ್ ಮಾಡುವುದಾದರೆ ಅದು ನುಡಿ/ಬರಹದಲ್ಲಿ ಇರಬೇಕು.-ಸಂ.

ಇತ್ತೀಚಿನ ಮಹಿಳಾ ಸಾಹಿತ್ಯ: ಒಂದು ನೋಟ

-ಆರ್.ತಾರಿಣಿ ಶುಭದಾಯಿನಿ

ಕನ್ನಡದಲ್ಲಿ ಮಹಿಳಾ ಬರವಣಿಗೆ ಉಂಟು ಮಾಡಿದ ಸಂಚಲನವು ಸಾಹಿತ್ಯದ ಹೊಸ ಪರಿಕರಗಳನ್ನು ಹುಡುಕಿಕೊಳ್ಳಲು ಹಾಗು ವಿಮರ್ಶೆಯ ಪರಿಭಾಷೆಗಳನ್ನು ಬದಲಾಯಿಸಿಕೊಳ್ಳಲು ಪ್ರೇರಣೆ ನೀಡಿತು. ಈಗಾಗಲೇ ಮೂರು ದಶಕಗಳಿಂದ ಕ್ರಿಯಾಶೀಲವಾಗಿರುವ ಸ್ತ್ರೀಸಾಹಿತ್ಯವನ್ನು ಅದರ ಇತಿಮಿತಿಗಳ ಹೊರತಾಗಿಯೇ ನೋಡುವುದಾದರೆ ಅದೀಗ ಸಂವೇದನಾಶೀಲ ದನಿಯಾಗಿ ಮಾರ್ಪಡುತ್ತಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಈ ಬೆಳವಣಿಗೆಯ ಹಿಂದೆ ಅನೇಕ ಸ್ಥಿತ್ಯಂತರಗಳಿವೆ. ಹೆಜ್ಜೆ ಮೂಡದ ಹಾದಿಯಲ್ಲಿ ಸಾಗಿಬಂದ ಸ್ತ್ರೀಬರವಣಿಗೆಯು ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವುದಕ್ಕೆ ಸಾಹಸ ಪಟ್ಟಿತು. ಅದನ್ನು ಸಾಂವಿಧಾನಿಕ ಹಾಗು ಸಾಮಾಜಿಕ ಹಕ್ಕುಗಳಲ್ಲಿ ಸ್ಥಾಪಿಸಿಕೊಳ್ಳಲು ಹೋರಾಡಿತು. ಆನಂತರ ಹೆಣ್ಣಿನ ಸೃಜನಶೀಲ ಅಸ್ತಿತ್ವದಲ್ಲಿ ಹೆಣ್ತನದ ಅನನ್ಯತೆಗಳನ್ನು ಅರಸಿತು. ಈ ಎರಡು ಲೋಕಗ್ರಹಿಕೆಗಳು ಸ್ತ್ರೀಸಾಹಿತ್ಯ ಎನ್ನುವುದಕ್ಕೆ ಒಂದು ತಾತ್ವಿಕ ಕವಚ ತೊಡಿಸಿದವು. ಈ ಬೆಳವಣಿಗೆಯು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಹತ್ವಪೂರ್ಣವಾದುದೇ ಆದರೂ ಇಲ್ಲಿ ಬಿಡಿಸಿಕೊಳ್ಳಬೇಕಾದ ಕೆಲವು ಸಿಕ್ಕುಗಳಿದ್ದವು. ಸ್ತ್ರೀಬರವಣಿಗೆಯ ಅನನ್ಯತೆಯು ತನ್ನಷ್ಟಕ್ಕೆ ತಾನು ಸ್ವಯಂಪೂರ್ಣವೇ? ಅಥವಾ ಅದೊಂದು ಮುಖ್ಯವಾಹಿನಿ ಎನ್ನಿಸಿಕೊಳ್ಳುವುದರ ಜೊತೆಗಿನ ಸಂಘರ್ಷದ ವಿದ್ರೋಹಾತ್ಮಕ ಚಟುವಟಿಕೆಯೇ? ಈ ಪ್ರಶ್ನೆಗಳಿಗೆ ಇನ್ನೂ ಉತ್ತರ ಹೊಳೆದಂತಿಲ್ಲ.


ಕೆಲವು ಕನ್ನಡದ ಲೇಖಕಿಯರು ತಮ್ಮನ್ನು ತಾವು ಫೆಮಿನಿಸ್ಟ್ ಎಂದು ಗುರುತಿಸಿಕೊಳ್ಳಲು ಬಯಸುವುದಿಲ್ಲ. ಅವರ ನಿರಾಕರಣೆಯ ಹಿಂದೆ ಸ್ತ್ರೀ ಬರವಣಿಗೆ ಕಿರಿದು, ಅದು ಸೀಮಿತ ಚಟುವಟಿಕೆ ಎಂಬ ಅನುಮಾನವಿರಬಹುದು ಅಥವಾ ಫೆಮಿನಿಸಂ ಎಂದರೆ ಆಕ್ಟಿವಿಸಂನ ಹೆಸರಿನಲ್ಲಿ ತಮ್ಮನ್ನು ಎಲ್ಲಿ 'ಬೀದಿಗೆಳೆಯುತ್ತಾರೋ' ಎಂಬ ಆತಂಕವಿರಬೇಕು. ಹಾಗಾದರೆ ಸ್ತ್ರೀ ಅಸ್ತಿತ್ವವನ್ನು ಪ್ರಜ್ಞಾಪೂರ್ವಕವಾಗಿಯೇ ಸಂಭ್ರಮಿಸಿದ ಬರಹಗಾರ್ತಿಯರು ಹೊಸದಾದ ಸ್ತ್ರೀ ಅಸ್ಮಿತೆಯನ್ನು ಬಯಸುತ್ತಿದ್ದಾರೆಯೇ? ಇಷ್ಟಾಗಿ ಕನ್ನಡದಲ್ಲಿ ಮಹಿಳಾ ಬರವಣಿಗೆಗಳೆಂದರೆ ಅನೇಕ ಸ್ತರಗಳ, ಅನೇಕ ಸ್ಥಿತ್ಯಂತರಗಳ ಚಲನೆ ಎಂದು ಭಾವಿಸುವುದಕ್ಕೆ ಸಿದ್ಧವಾಗಿಲ್ಲ. ಸ್ತ್ರೀವಾದವೆನ್ನುವುದನ್ನು ಕ್ಲೀಷೆಯಾಗಿ ಬಳಸುತ್ತಾ ಇರುವವರು ಇನ್ನೂ ಹಳೆಯ ಮಾದರಿಗಳಲ್ಲೇ ಗಿರಕಿ ಹೊಡೆಯುತ್ತಿದ್ದು ಸ್ತ್ರೀಬರವಣಿಗೆಗಳೆಂದರೆ ಸ್ತ್ರೀಗೋಳುಗಳು ಎಂಬ ರಿಕ್ತತೆಯನ್ನು ಉಂಟು ಮಾಡಿದ್ದು ಇದಕ್ಕೆ ಕಾರಣವಿರಬಹುದು. ಲಿಂಗಭೇದವೆನ್ನುವುದು ಸಾರ್ವತ್ರಿಕವಾದ ಅನುಭವಗಳ ಆಚೆ ಇರುವ ನೋವಿನ ಅನುಭವ. ಅದನ್ನು ಕೇವಲ ಮಾನವಾನುಭವದ ವ್ಯಾಪ್ತಿಯಲ್ಲಿ ನೋಡಲಾಗದು.

ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಸಾಮಾಜಿಕ ಅನುಭವವೂ ಲಿಂಗದ ಕುರುಹಿನ ಹಿನ್ನೆಲೆಯಲ್ಲಿಯೇ ವಿಶಿಷ್ಟವೆನಿಸುವಂತದ್ದು. ಇದನ್ನು ಸಾಮಾಜಿಕ ಪ್ರತಿನಿಧೀಕರಣದ ಸಂಗತಿಯನ್ನಾಗಿ ಮಾತ್ರ ನೋಡದೆ ಲೋಕಗ್ರಹಿಕೆಯ ಹೊಸ ಮಾದರಿಯನ್ನಾಗಿ ಗ್ರಹಿಸಬೇಕಾದ ಅನಿವಾರ್ಯತೆಯನ್ನು ಇಂದಿನ ಸ್ತ್ರೀ ಬರಹಗಳು ಮನಗಾಣಿಸುತ್ತಿವೆ. ಆದುದರಿಂದಲೇ ಮುಖ್ಯವಾಹಿನಿ ಎನ್ನುವುದನ್ನು ಮತ್ತೆ ವಿವರಿಸಿಕೊಳ್ಳಬೇಕಾದ ಹಂತಕ್ಕೆ ಅವು ಬಂದು ತಲುಪಿವೆ. ಈ ಹಿಂದಿನ ಚಳವಳಿ ಹಾಗು ತಾತ್ವಿಕತೆಗಳ ಬೆಂಬಲವು ನಿರೂಪಿಸಿದ ಲೋಕಗ್ರಹಿಕೆಗಳಿಗಿಂತ ಹೊಸದಾದ ಪುನರ್ ಮನನವಿದು. ಬಂಡಾಯದ ಟಿಸಿಲಾಗಿ ಹುಟ್ಟಿದ ಸ್ತ್ರೀ ಬರಹವು ಎಚ್.ಎಸ್.ರಾಘವೇಂದ್ರರಾವ್ ಅವರು ಗುರುತಿಸಿದಂತೆ ಒಂದು ಅರ್ಥಪೂರ್ಣ ನೆಲೆಗೆ ತನ್ನನ್ನು ತಾನು ವಿಸ್ತರಿಸಿಕೊಂಡಿತು(ನೋಡಿ. *ಸಂಗಡ*). ಇದೊಂದು ಪಲ್ಲಟ. ವಾಚಾಳಿತನದಿಂದ ಅರ್ಥಗ್ರಹಿಕೆಯ ವಿಸ್ತರಣೆಗೆ ಎಳಸುವುದು ಹಾಗು ಸ್ತ್ರೀ ಅಸ್ಮಿತೆಯನ್ನು ಇಟ್ಟುಕೊಂಡೇ ಇತರೆ ಅನುಭವಗಳಿಗೆ ಕೈಚಾಚುವುದು ಇವು ಈ ಪಲ್ಲಟದಿಂದ ಉಂಟಾದ ಬದಲಾವಣೆಗಳು. ಇದೀಗ ಮಹಿಳಾ ಸಾಹಿತ್ಯವು ತನ್ನತನದ ಪರಿಧಿಯಲ್ಲಿ ನಿಂತುಕೊಂಡೇ ಜಗತ್ತಿನ ಅನುಭವಗಳ ಜೊತೆ ಅನುಸಂಧಾನ ಮಾಡತೊಡಗಿದೆ ಎಂದು ಗುರುತಿಸುವಷ್ಟರ ಮಟ್ಟಿಗೆ ಬೆಳೆದಿದೆ.


ಈ ಮೇಲೆ ಹೇಳಿದ ದಾಟುವಿಕೆಗಳು ಮಹಿಳಾ ಅಭಿವ್ಯಕ್ತಿಯನ್ನು ಸೂಕ್ಷ್ಮವಾದ ವಲಯಕ್ಕೆ ಮುಟ್ಟಿಸಿವೆ. ಜಗತ್ತನ್ನು ಒಂದು ಇಡಿಯಾಗಿ ಸಮಗ್ರತೆಯಲ್ಲಿ ನೋಡುವ ದೃಷ್ಟಿಕೋನಕ್ಕಿಂತ ಭಿನ್ನ ಸಂವೇದನೆಗಳ ಕೊಲಾಜ್ ರೀತಿಯ ಚಾಲನೆಗೆ ಬಂದಿದ್ದು ಇದು ಅನಿವಾರ್ಯವೂ ಆಗಿದೆ ಎನ್ನಿಸುತ್ತದೆ. ಅಧಿಕಾರದದೊಡನೆ ವ್ಯಾಪಕವಾಗಿ ಗುರುತಿಸಿಕೊಳ್ಳುವುದು ಬೇರೆ; ಆದರೆ ಅದರ ವ್ಯಾಪ್ತಿಗಳಲ್ಲಿ ಮಾತನಾಡುವಾಗ ಭಿನ್ನವಾದ ನಿಲುವುಗಳಲ್ಲಿ ಇರಬೇಕಾಗುತ್ತದೆ. ಪ್ರಾದೇಶಿಕತೆ, ಜಾತಿ, ವರ್ಗ ಇತ್ಯಾದಿ ಸಂವೇದಿಗಳನ್ನು ಮಹಿಳಾ ಸತ್ವಕ್ಕೆ ಅಂಟಿಸಿದಾಗ ಉಂಟಾಗುವ ಸಾಂಸ್ಕೃತಿಕ ಒಳನೋಟಗಳು ಉಪಯುಕ್ತವೆನಿಸುತ್ತವೆ. ಕೆಲವೊಮ್ಮೆ ಇವು ಅತಿಯಾಗಿ ಸಾಂಸ್ಕೃತಿಕ ವಿಮರ್ಶೆಯ ತಕ್ಕಡಿಗಳನ್ನೇ ಕೆಳಗಿಳಿಸುವಂತಹ ಚೌಕಾಸಿ ವ್ಯಾಪಾರ ಮಾಡುವಾಗ ಈ ನಿಶ್ಚಿತತೆಗಳ ಪ್ರಸ್ತುತತೆಯ ಬಗ್ಗೆ ಹೇಸಿಗೆ ಹುಟ್ಟುವುದುಂಟು. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡೇ ಇಲ್ಲಿ ಆದ ಬದಲಾವಣೆಯನ್ನು ಕುರಿತು ಹೇಳುವುದಾದರೆ ಮಹಿಳಾ ಕ್ರಿಯಾಶೀಲತೆಯನ್ನು ಈ ಭಿನ್ನ ಪಾತಳಿಗಳಲ್ಲಿಟ್ಟು ನೋಡುವುದು ಹಾಗು ಬೇರೆ ಬೇರೆ ನೆಲೆಗಳಿಂದ ಅಧಿಕಾರ ಕೇಂದ್ರಗಳನ್ನು ಪ್ರಶ್ನಿಸಬಹುದಾದ ಅವಕಾಶಗಳನ್ನು ಈ ಬಗೆಯ ನಿಲುವುಗಳಿಂದ ಪಡೆದುಕೊಳ್ಳುವುದಾಗಿದೆ. ಒಟ್ಟಿನಲ್ಲಿ 'ಪೊಲಿಟಿಕಲಿ ಕರೆಕ್ಟ್' ಎನಿಸುವ ಸಾಹಿತ್ಯ ರಚನೆಗಳನ್ನು ಸಂದೇಹಿಸಿ ಮುನ್ನಡೆಯುವ ಅವಕಾಶವನ್ನು ಇಂದಿನ ಮಹಿಳಾ ಸಾಹಿತ್ಯ ಪಡೆದುಕೊಳ್ಳುತ್ತಲಿದೆ ಎಂದು ಹೇಳಬಹುದು.

ಇದೀಗ ಮಹಿಳಾ ಸಾಹಿತ್ಯದ ನಡೆ ಹಿಂಸಾತ್ಮಕವಾದ ನೆಲೆಗಳನ್ನು ಗುರುತಿಸಿಕೊಳ್ಳುವುದರತ್ತ ಸಾಗಿದೆ. ಹಿಂಸೆಯು ಗಂಡು ಹೆಣ್ಣಿನ ಹಿಂಸೆಯಾಗಿರುವಂತೆಯೇ ಸಮುದಾಯಗಳ ನಡುವಿನ ಹಿಂಸೆಯಾಗಿದೆ ಹಾಗೂ ಇದಕ್ಕಾಗಿ ದೇಹವನ್ನು ಶಿಕ್ಷಿಸುವ ಪರಿಪಾಠ ಬೆಳೆದು ಬರುತ್ತಿದೆ. ಸಾಹಿತ್ಯದಲ್ಲಿ ಆದ ಗಮನಾರ್ಹ ಬದಲಾವಣೆ ಎಂದರೆ ಜೆಂಡರ್‌ಅನ್ನು ಪ್ರತಿರೋಧದ ಹಿನ್ನೆಲೆಯಲ್ಲಿ ಗ್ರಹಿಸಿ ಬರೆಯುತ್ತಿದ್ದ ಎಂಬತ್ತರ ದಶಕದ ಕವಯಿತ್ರಿಯರಿಗಿಂತ ಅದನ್ನು ಹಿಂಸೆಯ ನೆಲೆಯಲ್ಲಿ ನೋಡುವುದು ಈ ತಲೆಮಾರಿನವರ ನಡೆಯಾಗಿದೆ. ಆದುದರಿಂದ ನೋವು ಅವರ ಕವನಗಳಲ್ಲಿ ಸ್ಥಾಯಿಯಾಗಿ, ವಿಷಾದ ಮೂಡಿಸುತ್ತದೆ. ಅಡುಗೆ ಕೋಣೆ, ಹೆರಿಗೆ, ಮಕ್ಕಳು, ತಾಯ್ತನ ಮುಂತಾದ ಅನುಭವಗಳು ಮಾಸಿಲ್ಲ; ಆದರೆ ಅವುಗಳನ್ನು ಕೋಮುವಾದ, ಜಾಗತೀಕರಣ, ರಾಜಕಾರಣಗಳ ಸಂದರ್ಭಗಳಲ್ಲಿ ಪ್ರಸ್ತುತಗೊಳಿಸಿಕೊಳ್ಳುವುದು ಕವಯಿತ್ರಿಯರ ವಿನ್ಯಾಸಗಳಲ್ಲಿ ಕಾಣುತ್ತದೆ. ಹಾಗೆ ಹೆಣ್ತನದ ವಿಸ್ತರಣೆಯಾಗಿ ಬರುವ ಕಾರುಣ್ಯವು ಮತ್ತೆ ಪರ್ಯಾಯವಾದಿ ಮಾನವತಾವಾದಕ್ಕೆ ಎಳಸುತ್ತಿರುವಂತೆ ತೋರುತ್ತದೆ. ವಿನಯಾ, ತೇಜಶ್ರೀ, ಕವಿತಾ ರೈ, ಭಾರತೀದೇವಿ, ಅಕ್ಷತಾ ಇವರ ಕವಿತೆಗಳು ಸ್ತ್ರೀವಾದವನ್ನು ವಿಭಿನ್ನವಾಗಿ ವಿಸ್ತರಿಸುವ ದಿಸೆಯಲ್ಲಿ ಕ್ರಿಯಾಶೀಲವಾಗಿವೆ.

ಬರಹಗಾರ್ತಿಯರ ಹೊಸ ತಲೆಮಾರು ತಮ್ಮ ಹಿರಿಯರಂತೆ ಕಾವ್ಯದ ವ್ಯಾಮೋಹಿಗಳೇ ಆಗಿದ್ದು ಸಂವೇದನಾಶೀಲವಾಗಿ ಬರೆಯಬೇಕೆಂದರೆ ಅದು ಕಾವ್ಯದಲ್ಲಿ ಸಾಧ್ಯ ಎಂಬ ನಂಬಿಕೆಯಿಂದ ಕಾವ್ಯವನ್ನೇ ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ಬಹುತೇಕ ಕನ್ನಡದ ಹೊಸ ತಲೆಮಾರಿನ ಕವಯಿತ್ರಿಯರು ಭಕ್ತಿಮಾರ್ಗದ ಲಯಗಳನ್ನು ಬಳಸಿ ಬರೆಯುತ್ತಿರುವವರು. 'ನಾನು' ಎಂಬ ಸಹಜವಾದ ಅಸ್ಮಿತೆಯಲ್ಲಿ ಮಾತನಾಡುತ್ತಲೇ ಜಗತ್ತಿನ ಆಧ್ಯಾತ್ಮವನ್ನು ತಡಕಾಡುವ ರೀತಿಯದು. ಈ ದಿಸೆಯಲ್ಲಿ ಇವರು ಮಹತ್ವಾಕಾಂಕ್ಷಿಗಳಲ್ಲ. ಆದರೆ ಇದೇ ಅಂಶ ಇವರ ಕಾವ್ಯಕ್ಕೆ ತಾಜಾತನವನ್ನು ತಂದುಕೊಡುತ್ತಿದೆ ಎಂಬುದು ಮುಖ್ಯವಾಗಿ ಕಾಣುತ್ತದೆ. ಸನ್ನೆಗೋಲುಗಳನ್ನು ಬಳಸಿ ಮೀಟುವ ಅನುಭವಗಳು ವೈದೇಹಿಯವರ 'ತಿಳಿಸಾರು' ರೂಪಕ ವಿವರಿಸುವಂತೆ ಲಿಮಿಟೆಡ್ ಪರ್‌ಫೆಕ್ಷನ್ ಮಾದರಿಯವು. ಇದರ ಜೊತೆಗೆ ಹೊಸ ಕವಯಿತ್ರಿಯರು ಜಾಗತೀಕರಣದ ಸಂದರ್ಭದಲ್ಲಿ ಬರೆಯುತ್ತಿರುವಾಗ ಹಿಂಸೆ ಮತ್ತು ಆಧುನಿಕ ಜೀವನಶೈಲಿಗೆ ಪ್ರತಿಕ್ರಿಯಿಸುತ್ತಾರೆ. ಆಧುನಿಕೋತ್ತರವಾದವು ಕನ್ನಡಕ್ಕೆ ನೇರವಾಗಿ ಬಂದಿಲ್ಲವಾದರೂ ಅದರ ಪರಿಣಾಮದಲ್ಲೆಂಬಂತೆ ಬರೆಯುತ್ತಿರುವ ಹೊಸ ಕವಯಿತ್ರಿಯರು ಇದ್ದಾರೆ. ಪವಿತ್ರಾ ಪ್ರಿಯಭಾಷಿಣಿ, ಲಾವಣ್ಯಪ್ರಭ, ಎಂ.ಆರ್.ಭಗವತಿ, ಹೇಮಾ ವೆಂಕಟ್, ಛಾಯಾ ಭಗವತಿ, ರೋಸಿ ಡಿಸೋಜಾ ಮುಂತಾದವರ ಕವಿತೆಗಳನ್ನು ಒಂದು ಚೌಕಟ್ಟಿನಲ್ಲಿಡಲು ಆಗದು. ಇವರ ಭಾಷೆಯ ಸೊಗಡು, ಜೀವಕಾರುಣ್ಯದ ಚಿಂತನೆಗಳು ಒಮ್ಮೊಮ್ಮೆ



ಎಂ.ಆರ್ ಭಗವತಿ ಪವಿತ್ರ ಛಾಯಾ ಭಗವತಿ ಕಾವ್ಯಾ ಸ್ಮಿತಾ ಮಾಕಳ್ಳಿ



ಅನಸೂಯಾ ಹೇಮಾ ವೆಂಕಟ್ ರೂಪಶ್ರೀ ರೋಸಿ ಡಿ'ಸೋಜಾ

ಸಂಕೀರ್ಣವಾಗಿ ಮತ್ತೊಮ್ಮೆ ಆಧುನಿಕ ಜಗತ್ತಿನ ಸಾಂದ್ರ ಅನುಭವಗಳ ಚಿತ್ರಣವಾಗಿ ನಿಲ್ಲುತ್ತವೆ. ಇದಕ್ಕೆ ಮೊನ್ನೆ ಮೊನ್ನೆಯಷ್ಟೆ ಕಾವ್ಯ ಬರೆಯಲಾರಂಭಿಸಿರುವ ಕಾವ್ಯಾ ಕಡಮೆ, ರೂಪಶ್ರೀ, ಸ್ಮಿತಾ ಮಾಕಳ್ಳಿ ಮುಂತಾದವರನ್ನು ಸಹ ಸೇರಿಸಬಹುದು. ಇವರೆಲ್ಲರಲ್ಲಿ ಕಾಣುವುದು ಕಾವ್ಯಕ್ಕೆ ಬೇಕಾದ ಫ್ರೆಶ್‌ನೆಸ್. ಮತ್ತೆ ಇದಷ್ಟೇ ಸಾಕೇ? ಎಂದರೆ ಹೊಸ ತಲೆಮಾರಿನ ಕವಯಿತ್ರಿಯರ ಕಾವ್ಯದಲ್ಲಿ ಗಮನಾರ್ಹವೆನಿಸುವ ತಿರುವುಗಳಿವೆಯಾದರೂ ಮಹತ್ವದ ಕಾವ್ಯ ಎನ್ನುವುದನ್ನಿನ್ನೂ ಇವರ ಕಾವ್ಯ ಕೊಟ್ಟಿಲ್ಲ ಎಂಬ ಭಾವ ಉಳಿಯುತ್ತದೆ.

ವೀಣಾ ಶಾಂತೇಶ್ವರ, ವೈದೇಹಿ ಕನ್ನಡ ಕಥನದ ಅದರಲ್ಲಿಯೂ ಸ್ತ್ರೀವಾದಿ ಕಥನದ ಎರಡು ಮಾದರಿಗಳು: ಒಂದು, ಪ್ರತಿರೋಧವನ್ನು ರಾಜಕೀಯವಾದ ದನಿಯಲ್ಲಿ ತುಂಬಿದರೆ ಇನ್ನೊಂದು ಮಾದರಿ ಸ್ತ್ರೀ ಅನನ್ಯತೆಗಳನ್ನು ಪ್ರತಿಪಾದಿಸಿ ಪ್ರತಿರೋಧವನ್ನು ಪರೋಕ್ಷವಾಗಿ ಕಲ್ಪಿಸಿತು. ಶತಮಾನ ಕೊನೆಯಾಗುವ ಹೊತ್ತಿಗೆ ಅನೇಕ ಕತೆಗಾರ್ತಿಯರು ಸ್ತ್ರೀವಾದವನ್ನು ಅರ್ಥಪೂರ್ಣವಾಗಿ ಗ್ರಹಿಸತೊಡಗಿದರು. ಇವರ ಕಥೆಗಳಲ್ಲಿ ಸಾಮಾಜಿಕತೆ ಎನ್ನುವುದು ಹೊಸ ಲೋಕಗ್ರಹಿಕೆಯಲ್ಲಿ ಬರತೊಡಗಿತು. ಅವುಗಳಲ್ಲಿ ಹೆಸರಿಸಬಹುದಾದ ಅಂಶಗಳೆಂದರೆ ಪ್ರಾದೇಶಿಕತೆ, ಸ್ತ್ರೀಸಂವೇದನೆ, ಭಾಷಿಕ ಭಿನ್ನತೆಗಳು ಮತ್ತಿತರ ಅಂಶಗಳು. ಇಲ್ಲಿನ ಬರಹಗಳ ರಾಜಕೀಯ ಬಹುಆಯಾಮಗಳದು. ಗಾಂಧಿಯನ್ನು ನೆನಪಿಸಿಕೊಟ್ಟ ನಾಗವೇಣಿ, ದಟ್ಟ ಪ್ರಾದೇಶಿಕತೆಯ ವಾಸನೆಯಲ್ಲಿ ಸ್ತ್ರೀಸಂವೇದನೆಯನ್ನು ಮೂಡಿಸಿದ ವಿನಯಾ, ಕಿಚನ್ ಪ್ಯಾರಡೈಸ್‌ನಲ್ಲಿ ಪತ್ರೊಡೆಯ ವಾಸನೆ ಮೂಡಿಸಿದ ಸುನಂದಾ ಕಡಮೆ, ಗಂಡು ಹೆಣ್ಣಿನ ಸಂಬಂಧಗಳನ್ನು ಆಳವಾಗಿ ಧ್ಯಾನಿಸುವ ಸುಮಂಗಲಾ–ಇವರುಗಳೆಲ್ಲ ಒಂದು ಫಸಲನ್ನು ತೆಗೆದಿದ್ದಾರೆ. ಈಗಲೂ ಇವರುಗಳೆಲ್ಲ ಬರೆಯುತ್ತಿದ್ದರೂ ಇವರ ಕತೆಗಾರಿಕೆಯು ಮತ್ತೆ ಮತ್ತೆ ವಸ್ತು ಹಾಗು ಅಭಿವ್ಯಕ್ತಿಯ ಸವಾಲುಗಳನ್ನು ಎದುರಿಸಬೇಕಾಗಿದೆ. ಕನ್ನಡ ಕತೆಗಳು ಮತ್ತು ಸ್ತ್ರೀಕಥನಗಳು ಎಂಬುದರ ನಡುವಿನ ಅನುಸಂಧಾನ ಈ ಕತೆಗಾರ್ತಿಯರ ಮುಖ್ಯಾಂಶ. ಇದೇ ಸಂದರ್ಭದಲ್ಲಿ ವಿಷಾದ ಮೂಡಿಸುವ ಸಂಗತಿ ಎಂದರೆ ಹೊಸ ಪೀಳಿಗೆಯಲ್ಲಿ ಕತೆಗಾರ್ತಿಯರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತ ಬಂದಿರುವುದು. ಕಾವ್ಯದಲ್ಲಿ ತಳೆದ ಆಸಕ್ತಿ ಕಥನ ಕಟ್ಟುವುದರಲ್ಲಿ ಇಲ್ಲದಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಬಹುಶ: ಬರಹಗಾರ್ತಿಯರ ಆಸಕ್ತಿ ಅಂಕಣ ಹಾಗು 'ಇತರೆ' ಪ್ರಕಾರಗಳತ್ತ ಹರಿದಿರುವುದು ಎನ್ನಿಸುತ್ತದೆ. ಇದೇ ಕಾರಣದಿಂದಲೇ ಕಾದಂಬರಿಗಳನ್ನು ಬರೆದ ಯುವ ಬರಹಗಾರ್ತಿಯರ ಸಂಖ್ಯೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಮುದ್ದು ತೀರ್ಥಹಳ್ಳಿ ಒಬ್ಬಳ ಹೆಸರು ಮಾತ್ರ ಇಲ್ಲಿ ನೆನಪಾಗುತ್ತಿದೆ. ಆದರೆ ಆಕೆಯ ಬೆಳವಣಿಗೆಯನ್ನು ಈಗಲೇ ನಿರ್ಣಯಿಸುವುದು ಕಷ್ಟ ಎನ್ನಿಸುತ್ತದೆ.

ಮುಕ್ತಗದ್ಯ ವ್ಯಾಮೋಹಿಗಳು ಹೆಚ್ಚುತ್ತಿರುವ ಈ ಶತಮಾನದಲ್ಲಿ ರೇಟಿಂಗ್ ಇರುವುದು ಲಲಿತವಾದ ಅಥವಾ ಸರಳವಾದ ತರ್ಕವಿಟ್ಟು ಬರೆಯುವಂತಹ ಲೇಖನಗಳ ಬಗ್ಗೆ. ಈ ಜಾಗದಲ್ಲಿ ಅಂಕಣ ಬರೆಯುವುದಕ್ಕೆ ಆಸಕ್ತಿ ತೋರುತ್ತಿರುವವರು ಯುವ ಲೇಖಕಿಯರು(ದೀಪಾ ಹಿರೇಗುತ್ತಿ, ವಿನಯಾ, ರೂಪಾ ಹಾಸನ ಮುಂತಾದವರು ಇಲ್ಲಿ ನೆನಪಾಗುತ್ತಿದ್ದಾರೆ). ಅಲ್ಲದೆ ಬ್ಲಾಗುಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡವರಲ್ಲಿ ಸಹ ಯುವ ಲೇಖಕಿಯರೇ ಹೆಚ್ಚು. ಆದರೆ ಇವರು ಪ್ರಿಂಟ್ ಮೀಡಿಯಾದ ಕಡೆಗೆ ಅಷ್ಟಾಗಿ ಉತ್ಸುಕರಾಗಿಲ್ಲವಾದ ಕಾರಣ ಇವರೊಂದಿಗೆ 'ಓದುಗರೊಡನೆ' ಸಂವಾದ ಸಾಧ್ಯವಾಗುತ್ತಿಲ್ಲ.

ವಿಮರ್ಶೆ ಮತ್ತು ಸಂಶೋಧನೆಗಳು ಮೊದಲಿನಿಂದಲೂ ಲೇಖಕಿಯರನ್ನು ಆಕರ್ಷಿಸಿದ್ದು ಕಡಿಮೆ. ಆದರೆ ಈ ಶತಮಾನದ ಬೆಳವಣಿಗೆ ಎಂದರೆ ಸ್ತ್ರೀವಾದದ ವ್ಯಾಪಕ ಓದಿನಿಂದ ಕನ್ನಡದಲ್ಲಿ ಸ್ತ್ರೀವಾದಿ ಅಧ್ಯಯನಗಳು ಆರಂಭವಾಗಿದ್ದು ಅದರ ಮುಂಚೂಣಿಯಲ್ಲಿ ಮಹಿಳೆಯರೇ ಇದ್ದಾರೆ. ಸ್ತ್ರೀವಾದವನ್ನು ಆಯ್ಕೆಯ ವಿಷಯವನ್ನಾಗಿ ಮಾಡಿಕೊಂಡು ವಿಮರ್ಶೆ ಮತ್ತು ವೈಚಾರಿಕ ಬರಹಗಳೆರಡನ್ನೂ ಮಿಳಿತಗೊಳಿಸಿ ಬರೆದ ಲೇಖಕಿಯರು ಇದ್ದಾರೆ. ಇದರರ್ಥ ಇವರು ಸ್ತ್ರೀವಾದಕ್ಕೊಂದು ದಿಕ್ಸೂಚಿಯಾಗಬಲ್ಲ ತಾತ್ವಿಕತೆ ಹೊರತೆಗೆದಿದ್ದಾರೆ ಎಂದರ್ಥವಲ್ಲ. ಇಲ್ಲಿಯೂ ಗೊಂದಲಗಳು ಮುಂದುವರೆದಿದ್ದು ಸ್ತ್ರೀವಾದವನ್ನು ಪರಿಭಾವಿಸುವ ಬಗ್ಗೆ ಸಂದಿಗ್ಧಗಳನ್ನು ಎದುರಿಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಹಳೆಯ ತಲೆಮಾರಿನ ಸುಮಿತ್ರಾಬಾಯಿಯಂತವರನ್ನು ಬಿಟ್ಟರೆ, ಆಶಾದೇವಿ, ಸಬಿತಾ ಬನ್ನಾಡಿ, ಕವಿತಾ ರೈ ಮುಂತಾದ ಕೆಲವೇ ಜನ ವಿಮರ್ಶಕರು ತಾವು ಮುಖ್ಯವಾಹಿನಿಯನ್ನು ಅನುಸರಿಸಬೇಕೊ ಅಥವಾ ಸ್ತ್ರೀವಾದಿ ಪರಿಕರಗಳನ್ನು ಬಳಸಿ ಹೊಸ ಮಾರ್ಗ ಕಂಡುಕೊಳ್ಳಬೇಕೊ ಎಂಬುದರ ಬಗ್ಗೆ ಗೊಂದಲದಲ್ಲಿದ್ದಂತೆಯೇ ತೋರುತ್ತದೆ. ಸಂಶೋಧನೆಯೆಂಬ 'ಗಂಡು ಕ್ಷೇತ್ರ'ದಲ್ಲಂತೂ ಹೆಣ್ಣು ವಿದ್ವಾಂಸರ ಸಂಖ್ಯೆ ಕಡಿಮೆಯೇ. ಸಂಶೋಧನಾ ಪರಿಕರಗಳಲ್ಲಿ ಹೊಸ ಚಿಂತನಾ ಮಾರ್ಗಗಳನ್ನು ಬಳಸಬಲ್ಲ, ಅದಕ್ಕೆ ಹೆಣ್ಣುನೋಟದ ಸ್ಪರ್ಶ ನೀಡಬಲ್ಲ ವಿದ್ವಾಂಸರು ಹೊಸ ತಲೆಮಾರಿನಲ್ಲಿ ಅಪರೂಪವಾಗಿದ್ದಾರೆ. ಮೊನ್ನೆ ಮೊನ್ನೆ ನಿಧನ ಹೊಂದಿದ ವಸು, ಪಾತರದವರ ಬಗ್ಗೆ ಕೆಲಸ ಮಾಡಿದ ಶೈಲಜಾ ಹಿರೇಮಠ, ಭಾಷೆಯ ಬಗ್ಗೆ ಕೆಲಸ ಮಾಡುತ್ತಿರುವ ಶಶಿಕಲಾ ಹೀಗೆ ಹಲವರ ಹೆಸರುಗಳು ಮಾತ್ರವೇ ಗಮನಕ್ಕೆ ಬರುತ್ತವೆ. ಹಾಗೆಯೇ ವೈಚಾರಿಕವಾಗಿ ಸ್ತ್ರೀವಾದಿ ತಾತ್ವಿಕತೆಯನ್ನು ವಿಸ್ತರಿಸುವ ಚಿಂತಕಿಯರು ಕನ್ನಡದಲ್ಲಿ ಅಪರೂಪವಾಗಿದ್ದಾರೆ. ಸ್ವಲ್ಪ ಮಟ್ಟಿಗೆ ಈ ಕೊರತೆ ತುಂಬಿದವರಲ್ಲಿ ಅನಸೂಯ ಕಾಂಬಳೆ ಮತ್ತು ಅನುಪಮಾ ಎಚ್.ಎಸ್. ಇದ್ದಾರೆ. ಇಷ್ಟಾದರೂ ಇಪ್ಪತ್ತೊಂದನೇ ಶತಮಾನ ನಿರೀಕ್ಷಿಸುವ ಹೊಸ ನುಡಿಗಟ್ಟು, ಹೊಸ ತಾತ್ವಿಕತೆಗಳು ಮಹಿಳಾ ಬರವಣಿಗೆಗಳಲ್ಲಿ ಬರಬೇಕಾದ ಅವಶ್ಯಕತೆಯಿದೆ. ಸಿದ್ಧತೆಯೇನೊ ನಡೆಯುತ್ತಿದೆ. ಆದರೆ ಗರಿಗಳು ಇನ್ನೂ ಪೂರ್ಣವಾಗಿ ಬಿಚ್ಚಿಕೊಂಡಿಲ್ಲ. ಅದರ ಅರಳುವಿಕೆಗೆ ಕಾಯುವುದರಲ್ಲಿ ಸಂತೋಷವಿದೆ. *



(ಕನ್ನಡದ ಭರವಸೆಯ ಕವಯಿತ್ರಿಯೂ, ಸಾಹಿತ್ಯ ಚಿಂತಕಿಯೂ ಆಗಿರುವ ತಾರಿಣಿ ಶುಭದಾಯಿನಿಯವರು ಸದ್ಯ ಚಿತ್ರದುರ್ಗದ ಸರ್ಕಾರಿ ಪ್ರದ.ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿದ್ದಾರೆ)

~~~~~~

Statement about Ownership and other particulars about Newspaper 'Hosa Manushya'

FORM 1V(See Rule 8)

1. Place of publication:	Shimoga
2. Printers name:	D.S. Nagabhushana
Nationality:	Indian
Address:	HIG-5, 'Nudi', Kallahalli Extn., Vinobanagara, Shimoga-577204
3. Publishers Name:	D.S.Nagabhushana
Nationality:	Indian
Address:	Same as above
4. Editor's name:	D.S.Nagabhushana
Nationality:	Indian
Address:	Same as above
5. Name of Individuals who own the News paper:	D.S.Nagabhushana,
Address:	Same as above

I, D.S.Nagabhushana hereby declare that the particulars given above are true to the best of my knowledge and belief.

Shimoga
31.3.2015

Sd/-
D.S.Nagabhushana
~~~~~~

ನಾನೇಕೆ ಬರೆಯಲಾರಂಭಿಸಿದೆ ?

–ಡಾ. ಎಚ್. ನಾಗವೇಣಿ

ಇತ್ತ ಕಡೆ ಅಮ್ಮನ ಜೋಗುಳ, ಅತ್ತ ಕಡೆ ಹಿತ್ತಲ ಸೆರಗಲ್ಲಿದ್ದ ಕಡಲಮ್ಮನ ಜೋಗುಳ. ಈ ಜೋಗುಳಗಳ ಹಿತವನ್ನು ಉಣ್ಣುತ್ತಲೇ ತೊಟ್ಟಿಲು ಬಿಟ್ಟಿಳಿದ ನಂತರದಲ್ಲಿ ನಾನು... ಅಮ್ಮನ ತೊಡೆಯೇರಿ ಕೂತು ತನ್ಮಯತೆಯಿಂದ ಕೇಳಿಸಿಕೊಂಡಿದ್ದು ಅಮ್ಮ ಹಾಡುತ್ತಿದ್ದ ಪಾಡ್ದನಗಳನ್ನು. ಪಾಡ್ದನ ಎಂದರೆ ಹಾಡುವ ದನಿ. ತುಳುನಾಡಿನಲ್ಲಿ, ಯಾವುದೋ ಕಾಲದಲ್ಲಿ ಹುಟ್ಟಿ ಪ್ರಭುತ್ವದ ದ್ವೇಷಕ್ಕೋ ಅಥವಾ ಉಳ್ಳವರ ಹುನ್ನಾರಕ್ಕೋ ಬಲಿಯಾಗಿ ಮರಳಿ ಬರಲಾಗದ 'ಮಾಯದ ಲೋಕ'ಕ್ಕೆ ಸಂದಿ ಹೋದ ದುರ್ಬಲ ವರ್ಗದ ಸಾಂಸ್ಕೃತಿಕ ವೀರ ವೀರೆಯರ ತುಳು ಕಥನಕಾವ್ಯವದು. ಅಮ್ಮ ಪಾಡ್ದನ ಹಾಡುವಾಗ, ಆ ಪಾಡ್ದನದೊಳಗಿನ ದಾರುಣ ಸತ್ವ–ಸತ್ಯಗಳನ್ನು ಎಳ್ಳಷ್ಟೂ ಜೀರ್ಣಿಸಿಕೊಳ್ಳಲಾಗದ ಬಾಲ್ಯವು ಅದಾಗಿತ್ತು. ಅಮ್ಮ ನನ್ನನ್ನು ಬಲಪಕ್ಕದಲ್ಲಿ ಮಲಗಿಸಿಕೊಂಡು 'ಸಿರಿಪಾಡ್ದನ'ವನ್ನು ಹೇಳುವಾಗಲೆಲ್ಲ, ಯಾವುದೋ ಒಂದು ಹಂತದಲ್ಲಿ ತಮ್ಮ ಹಾಡುಕಥನವನ್ನು ನಿಲ್ಲಿಸಿ 'ಅಂತಾ ಸಿರಿಗೇ ನ್ಯಾಯ ಸಿಕ್ಕದ ಮೇಲೆ ಇಲ್ಲಿನ ಬೇರೆ ಹೆಣ್ಮಕ್ಕಳಿಗೆ ನ್ಯಾಯ ಸಿಗುವುದುಂಟೆ?' ಎಂದು ಹೇಳಿ ಮತ್ತೆ ಪಾಡ್ದನವನ್ನು ಮುಂದುವರಿಸುವುದಿತ್ತು. ಅನಕ್ಷರಸ್ಥೆಯಾಗಿದ್ದ ನನ್ನ ಅಮ್ಮ, ಪಾಡ್ದನಗಳಲ್ಲಿರುವ ಉಪಮೆ–ರೂಪಕಗಳನ್ನು ಕೇಳುಗರಾಗಿದ್ದ ತನ್ನ ಮಕ್ಕಳಿಗೆ ಆಗಾಗ್ಗೆ ವಿಸ್ತರಿಸಿ ಹೇಳುವುದಿತ್ತು.

ಹೀಗೇ ಬಾಲ್ಯವರಳುವವರೆಗೂ ಅಂಗಳ – ಚಾವಡಿಯಲ್ಲಿ ನನ್ನಮ್ಮನ ಪಕ್ಕ ಕೂತು ಮೇಲಂಗಳ, ಕೆಳ ಅಂಗಳ, ಬೈಲುಗದ್ದೆ, ಮಜಲುಗದ್ದೆ, ಬೊಟ್ಟುಗದ್ದೆ, ಕೆರೆ ತೋಡು ಬೇಲಿಗಳನ್ನು ನೋಡುತ್ತಿದ್ದವಳಿಗೆ ನಿಧಾನಕ್ಕೆ ಅರಿವಾಗತೊಡಗಿದ್ದು – ಓ...ಅಲ್ಲೇ ಬೇಲಿಯಲ್ಲೆ ನಿಲ್ಲಬೇಕಾದ ಜಾತಿಯವರು ಯಾರು? ಯಾವ ಜಾತಿಯವ್ರು ಗದ್ದೆಗಿಳಿಯಬಹುದು? ಅಂಗಳವೇರಬಹುದಾದ ಜಾತಿಯವ್ರು ಯಾರು? ಯಾವ ಜಾತಿಯವ ನಮ್ಮ ಮನೆ ಚಾವಡಿ, ದಾಟಬಹುದು–ಎಂದು. ಇವೆಲ್ಲವನ್ನೂ 'ಯಾವ ರೂಪದಲ್ಲಾದರೂ ದಾಖಲಿಸಬೇಕು' ಎಂಬ ಪ್ರಜ್ಞೆಯನ್ನು ನನ್ನೊಳಗೆ ಹುಟ್ಟಿಸಿರಬೇಕು.

ನನ್ನ ಬಾಲ್ಯದ ಪರಿಸರದಲ್ಲಿ, ಋತುಮಾನಕ್ಕೆ ತಕ್ಕಂತೆ ನಡೆಯುತ್ತಿದ್ದ ನೇಮ, ಕೋಲ, ಬಂಡಿ, ಜಾತ್ರೆ, ಕಂಬಳ, ಕೋಳಿಕಟ್ಟ, ಯಕ್ಷಗಾನ, ತಾಳಮದ್ದಲೆ, ನಾಗಮಂಡಲ, ಹರಿಕಥೆ, ಹಬ್ಬ ಹರಿದಿನಗಳನ್ನು ಸಂಭ್ರಮಿಸುತ್ತ ನಾನು 'ದೊಡ್ಡವ'ಳಾಗುತ್ತಿದ್ದಂತೆ, ನನ್ನ ಮತ್ತೊಬ್ಬ 'ಅಮ್ಮ'ನೇ ಆಗಿದ್ದ ಕಡಲಮ್ಮನ ಸೆರಗಿಗೆ ಕೋಮು ಜ್ವಾಲೆ ಹತ್ತಿಕೊಂಡಿದ್ದು ನನಗಾದ ಮೊದಲ ಆಘಾತ!

ನನ್ನ ಅಮ್ಮ – ಅವರ ಅಮ್ಮನಮ್ಮನ ಕಾಲಕ್ಕಿಂತ ಹಿಂದಿನಿಂದಲೂ ಕಡಲಮ್ಮನ ಹುಕುಂ – ಆಣೆಯಿದೆಯೇನೋ ಅನ್ನುವಂತೆ ಕಡಲ ಒಡಲಿಂದ ಮೀನು ಬಾಚುವ ಹಾಗು ಮಾರುವ ಕೆಲಸದಲ್ಲಿ ಪರಸ್ಪರ ಕೈ ಜೋಡಿಸಿ, ಕಡಲಮ್ಮನ ಅವಳಿ ಸಂತಾನವೆಂಬಂತೆ ಬದುಕಿದ್ದ ಬೆಸ್ತರು ಮತ್ತು ಬ್ಯಾರಿಗಳ ನಡುವೆ 'ಕಡಲ ಹಕ್ಕಿನ' ನಿಪವಿಟ್ಟುಕೊಂಡು ಕೋಮು ಕಿಚ್ಚನ್ನ್ಯಾರೋ ಹಚ್ಚಿಬಿಟ್ಟಿದ್ದರು. ನನ್ನ ಬಾಲ್ಯದ ಗೆಳತಿ ಖೈರುನ್ನೀಸ, ಮೈಮೂನ, ಜುಬೇದರು 'ಕನ್ನಡ ಶಾಲೆ' ಬಿಟ್ಟು ಅಡುಗೆಮನೆ ಸೇರಿದ್ದು ಆ ನಂತರದಲ್ಲೇ. ಹಿಂದೆಲ್ಲ ಅಮ್ಮನ ನಾಲ್ಕಾರು ಬಾಣಂತನಕ್ಕೆ ಒದಗಿ ಬಂದಿದ್ದ ಹೆಂಗರುಳಿನ ಸೈಯದ್ ಬ್ಯಾರಿಯವರ ಮಡದಿ ಪಾತುಂಯ್ಖ ಇದ್ದಕ್ಕಿದ್ದಂತೆ ಅಮ್ಮನ 'ಕಣ್ಣಿಂದ ಕಣ್ಮರೆಯಾದಾಗ' ಅಮ್ಮ ಪರಿತಪಿಸಿದ್ದು ಅಷ್ಟಿಷ್ಟಲ್ಲ. ಅಮ್ಮನ ಈ 'ನೋವಿನ ಕ್ಷಣ'ಗಳೆಲ್ಲವು ನನ್ನನ್ನು ಬರೆಯಲು ಪ್ರೇರೇಪಿಸಿರಬೇಕು.

ತುಳು, ಕನ್ನಡ ದ್ವಿಭಾಷಿಕ ಪರಿಸರದಲ್ಲಿ ಬೆಳೆದ ನಾನು ಆಟವಾಡಿದ್ದೆಲ್ಲ ಬ್ರಾಹ್ಮಣರ ಮಡಿ ಅಂಗಳದಲ್ಲೇ. ಬ್ರಾಹ್ಮಣೇತರ ತುಳುವಳಾದ ನನಗೆ, ಬ್ರಾಹ್ಮಣರ ಅಂಗಳದ 'ಮಡಿಯ ಉರಿ'ಯ ಪರಿಚಯ ಚೆನ್ನಾಗಿಯೇ ಆಗಿತ್ತು. ನನ್ನ ಅಪ್ಪ–ಅಮ್ಮ ತಮ್ಮ ಜಾತಿಗಿಂತ ಕೆಳಗಿನವರಲ್ಲಿ ಆಚರಿಸುತ್ತಿದ್ದ 'ಮಡಿ'ಗಿಂತ, ಈ ಮಡಿ ಸ್ವಲ್ಪ ಭೀಕರವಾಗಿದ್ದ ಕಾರಣ, ಬ್ರಾಂಮಣರ ಮಡಿಯ ಬಗ್ಗೆ ನನ್ನ ಒಲವು ಹೆಚ್ಚಾಗಿತ್ತು. ಅಮ್ಮನನ್ನು ಈ ಬಗ್ಗೆ ಪ್ರಶ್ನಿಸಿದರೆ – ಅದು ಅನಾದಿ ಕಾಲದಿಂದಲೇ ನಡೆದು ಬಂದಿದ್ದು, ಈಗದ್ದಲ್ಲ. ಅವರನ್ನು ಮುಟ್ಟಿ ನೀನು ಯಾವ ಸ್ವರ್ಗಕ್ಕೆ ಏರ್ಲಿಕ್ಕಿದೆ ಈಗ...! ಎಂದು ಗದರುವುದಿತ್ತು. ಈ ಎಲ್ಲ ಉತ್ತರ ಕಾಣದ ನನ್ನ ಗೊಂದಲಗಳು, ನನ್ನನ್ನು ಕಾಡುತ್ತಿದ್ದರಿಂದಲೇ, ದೊಡ್ಡವರು ಬರೆದ 'ಬೂಕು'ಗಳನ್ನು ನಾನು ಓದತೊಡಗಿದೆ. ಕಣ್ಣಿಗೆ ಕಾಣದ ದೇವರು – ದಿಂಡರ ಶ್ರೇಷ್ಠತೆಯ ಬಗ್ಗೆ ಬರೆಯದೆ, ತಮ್ಮ ಮನೆ ಮತ್ತು ಮನೆಯಂಗಳದಲ್ಲಿ ಧ್ವನಿ ಇಲ್ಲದೆ ಬದುಕುತ್ತಿದ್ದ ಯಃಕಶ್ಚಿತ್ 'ಜೀವ'ಗಳನ್ನೇ ಮುಖ್ಯವಾಗಿರಿಸಿಕೊಂಡು ಬರೆದ 'ಮಲೆಗಳಲ್ಲಿ ಮದುಮಗಳು' ಮತ್ತು 'ಮರಳಿ ಮಣ್ಣಿಗೆ' ಯಂತ ಕಾದಂಬರಿಗಳು ನನ್ನ ಬರೆಯುವ ಹಾದಿಗೆ ಬೆಳಕು ತೋರಿದ್ದರಿಂದಲೇ ನಾನೂ ಬರೆಯುವ ಹಾದಿ ಹಿಡಿದೆ. ಮೇಲ್ವರ್ಗದ ಹಿಡಿತಕ್ಕೆ, ದಿಟ್ಟಿಗೆ ನಿಲುಕದ; ಅವರ ಸಂವೇದನೆ – ಅರಿವಿಗೆ ಒಗ್ಗದ, ಬ್ರಾಹ್ಮಣೇತರರ ಅಂಗಳ ಅಡುಗೆಮನೆಯ ಮೂಲೆ ಮೂಲೆಗಳೂ ನನ್ನ 'ಶೂದ್ರ ದಿಟ್ಟಿಗೆ' ನಿಲುಕಿದ್ದರಿಂದ, ಅವೆಲ್ಲವೂ ನನ್ನ ಸೃಜನಶೀಲ ಬರವಣಿಗೆಯಲ್ಲಿ ನೇಯ್ಗೆಗೊಂಡವು. ನಾನು ಬರೆದೆ – ಹುಟ್ಟ ಬರಹಗಾರ್ತಿಯಾದೆ.




ಪುಸ್ತಕಾವಲೋಕನ

ಪು: **ಆರನೇ ಹೆಂಡತಿಯ ಆತ್ಮಕಥೆ** ಮೂಲ: **ತೆಹಮಿನಾ ದುರ್ರಾನಿ** ಕನ್ನಡಕ್ಕೆ: **ರಾಹು** ಪ್ರ: **ಸೃಷ್ಟಿ ಪಬ್ಲಿಕೇಶನ್ಸ್** , ಬೆಂಗಳೂರು ಪುಟಗಳು: ೬೦೮ ಬೆಲೆ: **೪೦೦/–**

ಬೆಂಕಿಯ ಬೆಡಗಿಗೆ ರೆಕ್ಕೆ ಚಾಚುವವರ ಕತೆ

ಇದೊಂದು ಕೆಂಡದಂತೆ ಸುಡುವ ಗುಣದ ಅಪರೂಪದ ಶೈಲಿಯ ಕೃತಿ_ ಸುಡುವಿಕೆಗೆ ಒಳಗಾಗಿಯೂ ಕೈಗಳು ಕೆಂಡವನ್ನು ಬಿಡುವುದಿಲ್ಲ! ಅಗಾಧ ಅನುಭವವನ್ನು ಹೊಂದಿದ್ದೂ ಒಪ್ಪವಾದ ರೂಪವನ್ನು ಹೊಂದಿರುವುದು ಇದರ ವಿಶೇಷ. ತಕ್ಷಣಕ್ಕೆ ಇದೊಂದು ಹಾದರದ, ಪತ್ನಿಪೀಡಕನ, ಪತಿಪೀಡನೆಯನ್ನು ಅಸಾಧ್ಯ ಸಹನೆಯಿಂದ ಒಪ್ಪಿಕೊಂಡ ಹೆಂಗಸಿನ, ಭ್ರಷ್ಟ ರಾಜಕಾರಣದ ಪಾಪಿ ದೇಶದ, ಸ್ಕಿಸೋಫ್ರೀನಿಕ್ ವ್ಯಕ್ತಿತ್ವದ ನಂಬಲಸಾಧ್ಯ ವ್ಯಕ್ತಿತ್ವಗಳ ರೋಚಕ ಕತೆಯಂತೆ ಕಾಣುತ್ತದೆ. ಆದರೆ ಕ್ರಮೇಣ ತಾನು ಹೇಳುವ ಸತ್ಯದ ಹಲವು ಮಗ್ಗುಲುಗಳಿಗಾಗಿ ಓದುಗರನ್ನು ಕಾಡುತ್ತದೆ. ಮನುಷ್ಯನ ಮೂಲ ಪ್ರವೃತ್ತಿಗಳಾದ ಕಾಮ ಮತ್ತು ಆಕ್ರಮಣಗಳು ಹಳಿತಪ್ಪಿದರೆ ಆಗುವ ಅನಾಹುತಗಳ ಸರಪಣಿಯೇ ಇಲ್ಲಿದೆ. ಅದರಲ್ಲೂ, ಇವೆರಡನ್ನೂ ಗಂಡಿನ ಹಕ್ಕು ಎಂದು ನಂಬಿದ ಹಾಗೂ ಹಾಗೆ ನಂಬುವಂತೆ ಒಪ್ಪಿಗೆ ನೀಡಿದ ಸಮಾಜದವೊಂದು ಅಂತಿಮವಾಗಿ ತಲುಪುವ ದುರಂತವನ್ನು ಈ ಕೃತಿ ನಿರ್ಭಿಡೆಯಿಂದ ಕಣ್ಣೆದುರು ತೆರೆದಿಡುತ್ತದೆ.

ಪಾಕಿಸ್ತಾನದ ರಿಸರ್ವ್ ಬ್ಯಾಂಕ್‌ನ ಗವರ್ನರ್‌ನ ಮಗಳು ತೆಹಮಿನಾ. ತನ್ನ ಹದಿನೆಂಟನೇ ವಯಸ್ಸಿನಲ್ಲಿಯೇ ಹಟಹಿಡಿದು ಅನೀಸ್‌ನನ್ನು ಮದುವೆಯಾದವಳು. ಅವನೊಬ್ಬ ಸಾಮಾನ್ಯ ಹುದ್ದೆಯಲ್ಲಿದ್ದ ಸಾಮಾನ್ಯ ವ್ಯಕ್ತಿಯಾಗಿದ್ದ. ಆಕಸ್ಮಿಕವಾಗಿ ಇವರಿಗೆ ಮುಸ್ತಫಾ ಖಾರ್‌ನ ಪರಿಚಯವಾಗುತ್ತದೆ. ಆತ ಪಾಕಿಸ್ತಾನದ ಪಂಜಾಬ್ ಪ್ರಾಂತದ ಮುಖ್ಯಮಂತ್ರಿಯಾಗಿದ್ದವನು. ಪಂಜಾಬಿನ ಸಿಂಹ ಎಂದೇ ಪ್ರಸಿದ್ಧನಾದವನು. ಬುಟ್ಟೋಗೆ ಆತ್ಮೀಯನಾಗಿದ್ದು ಅವನ ನಂತರದ ಎರಡನೇ ಪ್ರಭಾವಿ ರಾಜಕಾರಣಿಯಾಗಿದ್ದ. ಅತ್ಯಂತ ವಿಕ್ಷಿಪ್ತ ವ್ಯಕ್ತಿಯಾಗಿದ್ದ ಈತನ ಸೆಳೆತಕ್ಕೆ ಒಳಗಾದ ತೆಹಮಿನಾ ಅವನನ್ನು ಮದುವೆಯಾಗಿ ಅನುಭವಿಸಿದ ಘೋರ ಬದುಕು ಮತ್ತು ಅವಳು ಹತ್ತಿರದಿಂದ ಕಂಡ ಪಾಕಿಸ್ತಾನದ ರಾಜಕಾರಣದ ಹಲವು ವಿವರಗಳು ಅವಳ ಆತ್ಮಚರಿತ್ರೆಯನ್ನು ಆವರಿಸಿಕೊಂಡಿದೆ.



ತೆಹಮಿನಾಳನ್ನು ಪಾರ್ಟಿಯೊಂದರಲ್ಲಿ ನೋಡಿದ ಖಾರ್ ಅವಳೇ ಅವನ ಬಲೆಗೆ ಬೀಳುವಂತೆ ಚಾಣಾಕ್ಷ ಬಲೆ ಹೆಣೆಯುತ್ತಾನೆ. ತೆಹಮಿನಾ ಅವನನ್ನು ಭೇಟಿಯಾದಾಗ ಆಗಲೇ ಅವನಿಗೆ ಐದು ಸಲ ಮದುವೆಯಾಗಿತ್ತು. ಅದೆಷ್ಟೋ ಮಕ್ಕಳೂ ಇದ್ದರು. ಆದರೂ ಸೆಳೆಯುವ

ಕಣ್ಣುಗಳ ಚಿತ್ತಾಕರ್ಷಕ ವ್ಯಕ್ತಿತ್ವದ ಹಾಗೂ ಸಮಾಜವಾದದ ಮಾತುಗಳ ಮೂಲಕ ಮೋಡಿ ಮಾಡುತ್ತಿದ್ದ ಇವನೆಡೆಗೆ ವಿಶೇಷ ಅಸಕ್ತಿ ಬೆಳೆಸಿಕೊಂಡಳು. ದಮನಿತರ ಪರವಾದ ಅವನ ಮಾತುಗಳು ಅವಳ ನೀರಸ ಶಿಸ್ತುಬದ್ಧ ಬದುಕಿನಲ್ಲಿ ಅಲೆಗಳನ್ನು ಹುಟ್ಟಿಸತೊಡಗಿತು. 'ಬದುಕಿನಲ್ಲಿಯೇ ಮೊಟ್ಟ ಮೊದಲ ಬಾರಿಗೆ ನಾನು ಬಾಳಿಗೊಂದು ಅರ್ಥಕಂಡುಕೊಂಡೆ. ಕೇವಲ ಅಸ್ತಿತ್ವದ ಆಚೆಗಿನ ಒಂದು ಮಹತ್ತರ ಉದ್ದೇಶವನ್ನು ಗುರುತಿಸಿಕೊಂಡೆ' (ಪು.೬೯) ಅಂದುಕೊಂಡ ಇಪ್ಪತ್ತರ ಈಕೆ ನಲವತ್ತರ ಆತನಿಂದ ಇನ್ನಿಲ್ಲದ ಆಕರ್ಷಣೆಗೆ ಒಳಗಾದಳು. ಮುಂದೆ ನಡೆದಿದ್ದೆಲ್ಲಾ ಅವನು ಅವಳನ್ನು ವಶಪಡಿಸಿಕೊಳ್ಳಲು ಹೂಡುವ ಅಧ್ಭುತ ಆಟಗಳು. ಮಹಾನ್ ಕಾಮಪಟುವಾದ ಆತ ಅವಳನ್ನು ಸಂಪೂರ್ಣ ಆಕ್ರಮಿಸಿಕೊಂಡ. ಅವನ ಪತ್ನಿ ಶೆರ್ರಿ ಅವನ ಕ್ರೌರ್ಯದ ಬಗ್ಗೆ ಹೇಳಿದ್ದನ್ನು ನಂಬದ ಆಕೆ 'ಇಂಥ ಬಲಿಷ್ಠ, ಚರಿಶ್ಮ್ಯಾಟಿಕ್ ವ್ಯಕ್ತಿತ್ವದ ಮುಸ್ತಾಫಾನಿಗೆ ಶೆರ್ರಿ ತಕ್ಕ ಹೆಣ್ಣಲ್ಲ'(ಪು.೭೬) ಎಂಬ ನಿಲುವಿಗೆ ಬಂದ ಆಕೆ ವಿಚ್ಛೇದನ ಪಡೆದು ಮುಸ್ತಾಫನನ್ನು ಮದುವೆಯಾಗುತ್ತಾಳೆ. ಒಬ್ಬ ಗವರ್ನರ್ ತನ್ನ ಪ್ರೇಯಸಿಯೊಂದಿಗೆ ಹಾದರ ಮಾಡಲು ಏನೆಲ್ಲಾ ಮಾಡಿದ ಹಾಗೂ ತನ್ನ ಗಂಡನನ್ನು ತಾನು ಹೇಗೆಲ್ಲಾ ವಂಚಿಸಿದೆ ಎಂಬುದನ್ನು ಮುಚ್ಚುಮರೆ ಇಲ್ಲದೆ ತೆಹಮಿನಾ ಬರೆದುಕೊಂಡಿದ್ದಾಳೆ.

ಮದುವೆಗೆ ಮುಂಚೆ ಹಾಗಿದ್ದ ಆತ ಮದುವೆಯಾಗುತ್ತಿದ್ದಂತೆಯೇ ವರ್ತಿಸಿದ ರೀತಿ ಆಘಾತಕಾರಿಯಾದುದು. ಹಲವು ಪ್ರಕರಣಗಳಲ್ಲಿ ಒಂದನ್ನು ಇಲ್ಲಿ ಗಮನಿಸಬಹುದು: 'ಒಂದು ರಾತ್ರಿ ಇದ್ದಕ್ಕಿದ್ದಂತೆ ಗರ್ಭಿಣಿ ತೆಹಮಿನಾಳನ್ನು ಮುಸ್ತಫಾ ಅವಳ ಮೊದಲ ಗಂಡನ ಜೊತೆಗಿನ ಪ್ರಸ್ತದ ರಾತ್ರಿಯ ಎಲ್ಲ ವಿವರ ನೀಡುವಂತೆ ಹೇಳುತ್ತಾನೆ. ಆಕೆ ಹಿಂಜರಿದಾಗ ಅವನು ಗಪ್ಪನೆ ಅವಳ ಬಲ ಮುಂಗೈ ಹಿಡಿದು ಹಿಸುಕಿ ಹುರಿಗೆ ಹೊಡೆದ. ನೋವಿನಿಂದ ಅರಚಿ ಕೆಳಗೆ ಕುಸಿದಳು. ಮತ್ತೆ ಪೀಡಿಸಿದ. ತೃಪ್ತನಾಗದ ಅವನು ಅವಳನ್ನು ಹಾಸಿಗೆಯ ಮೇಲೆ ಹಾಕಿ ಅವಳ ಹೊಟ್ಟೆಯ ಆಚೆ–ಈಚೆ ಕಾಲುಹಾಕಿಕುಳಿತು ಕಪಾಳಕ್ಕೆ ಹೊಡೆದ. ತಿರುತಿರುಗಿ ಅಂಗೈ, ಮುಂಗೈ, ಹಿಂಗೈಗಳಿಂದ ಹೊಡೆದ. ಅವಳ ನೀಳವಾದ ಕೂದಲನ್ನು ಹಿಡಿದು ಜಗ್ಗಲಾರಂಭಿಸಿದ. ಬಾಯಿಂದ ಆಕ್ರಂದನ ಬಂದರೆ ಇನ್ನಷ್ಟು ಹೊಡೆದ. ಕೂದಲನ್ನು ಜಗ್ಗುತ್ತಾ ತಲೆಯನ್ನು ಅತ್ತ ಇತ್ತ ಎತ್ತಿ ಎತ್ತಿ ಬಡಿಯುತ್ತಿದ್ದ. ಅವಳ ಜಡೆ ಹಿಡಿದುಕೊಂಡೇ ಆತ ಹಾಸಿಗೆಯಿಂದ ಜಿಗಿದ. ಅವಳು ಹಾಸಿಗೆಯಿಂದ ಕೆಳಗೆ ಬಿದ್ದಳು. ಅವಳನ್ನು ಅನಾಮತ್ತಾಗಿ ಎತ್ತಿ ಗೋಡೆಗಳಿಗೆ ಆ ಕಡೆ ಈ ಕಡೆ ಅಪ್ಪಳಿಸಿದ. ಅವಳಿಗೆ ಮುಂದೆ ಏನಾಯ್ತೆಂದೇ ಗೊತ್ತಾಗಲಿಲ್ಲ. ಅಂಗಲಾಚಿ ಬಾತ್ ರೂಮಿಗೆ ಹೋಗಲು ಅನುಮತಿ ಕೇಳಿದಳು. ಅಲ್ಲಿನ ಕನ್ನಡಿಯಲ್ಲಿ ಅವಳಿಗೆ ಕಂಡ ಮುಖ ಯಾವುದೋ ಪೈಶಾಚಿಕ ಮಾಟಗಾತಿಯಂತೆ ತೋರುತ್ತಾ ಅವಳೇ ಕಿರುಚುವಂತಿತ್ತು. ಹಾಗೇ ಸ್ವಲ್ಪ ಹೊತ್ತಿನಲ್ಲಿ ಅವಳಿಗೆ ಮತ್ತೆ ಭೀತಿ ಆವರಿಸಿಕೊಂಡಿತು. ಯಾಕೆಂದರೆ ಅವನು ಹೇಳಿದ ಸಮಯದೊಳಗೆ ಅವಳು ರೂಮಿಗೆ ವಾಪಾಸಾಗಬೇಕು. ಇಲ್ಲದಿದ್ದರೆ ಇನ್ನೊಂದು ಘನಘೋರ ಹಿಂಸೆ. ಆದರೆ ಅವಳು ವಾಪಾಸಾದಾಗ ಅವನು ಬದಲಾಗಿದ್ದ. ಬಿಕ್ಕಿ ಬಿಕ್ಕಿ ಅತ್ತು ಕಾಲಿಗೆರಗಿ ಕ್ಷಮೆ ಬೇಡಿದ.' ಇದು ಅವಳ ಮುಂದಿನ ಹದಿಮೂರು ವರ್ಷಗಳ ಕಾಲದ ದಾಂಪತ್ಯದಲ್ಲಿ ಪುನರಾವರ್ತನೆಯಾಗುತ್ತದೆ. ಅದರ ನಡುವೆ ಅವಳು ನಾಲ್ಕು ಮಕ್ಕಳಿಗೆ ಜನ್ಮ ನೀಡುತ್ತಾಳೆ. ಆದರೆ ಅವಳು ಮಾತ್ರವಲ್ಲ, ಇಲ್ಲಿ ಬರುವ ಹಲವು ಮಹಿಳೆಯರು ವಿಚ್ಛೇದನಕ್ಕೆ ಹೆದರಿ ದಾಂಪತ್ಯವನ್ನು ಹೇಗಾದರೂ ಉಳಿಸಿಕೊಳ್ಳಲು ಹೆಣಗುವುದೂ ಕಂಡುಬರುತ್ತದೆ. ಅವನಿಂದ ತಪ್ಪಿಸಿಕೊಳ್ಳುವುದೆಂದರೆ ಮಕ್ಕಳನ್ನು ಕಳೆದುಕೊಳ್ಳುವುದು ಅಥವಾ ಜೀವವನ್ನೇ ಕಳೆದುಕೊಳ್ಳುವುದು ಎಂಬ ಪರಿಸ್ಥಿತಿಯಲ್ಲಿ ಆತ ಅವಳ ತಂಗಿಯ ಜೊತೆ ಹಾದರ ಶುರುಮಾಡಿದಾಗ ಅವಳು ಇನ್ನಿಲ್ಲದ ಧೈರ್ಯ ವಹಿಸಿ ಅವನಿಂದ ದೂರವಾಗುತ್ತಾಳೆ.

ಅವನ ಅಸೀಮ ಕ್ರೌರ್ಯಗಳನ್ನೆಲ್ಲಾ ಅವಳು ಅಷ್ಟು ವರ್ಷ ಸಹಿಸಬೇಕಾದ ಅಗತ್ಯವಿತ್ತೇ ಎನ್ನುವ ಪ್ರಶ್ನೆ ಹುಟ್ಟುತ್ತದಾದರೂ, ನಿಜ ಹೇಳಬೇಕೆಂದರೆ ಅವಳಿಗೆ ಸರಿಯಾದ ಪ್ರಶ್ನೆ ಹುಟ್ಟುವುದೇ ತಡವಾಗಿ. ಇಂಗ್ಲಿಷ್ ಶಿಕ್ಷಣ ಪಡೆದಿದ್ದ ಅವಳಿಗೆ, ನನ್ನನ್ನು ಹೀಗೆ ನಡೆಸಿಕೊಳ್ಳುವ ಅಧಿಕಾರ ಇವನಿಗೆ ಕೊಟ್ಟವರಾರು ಎಂದು ತಿಳಿಯಲು ಹತ್ತು ವರ್ಷಗಳು ಬೇಕಾಯ್ತು. ಅವಳ ಸ್ಥಿತಿಯಾಗಲೀ ಅವಳ ಮನೆಯ ಆಳು ಅನಕ್ಷರಸ್ಥೆ ದಾಯಿಯ ಸ್ಥಿತಿಯಾಗಲೀ ಬೇರೆಯಲ್ಲ!

ಇನ್ನೊಂದು ವೈಚಿತ್ರ್ಯವೆಂದರೆ, ರಾಜಕಾರಣದಲ್ಲಿ ಅತೀವ ಆಸಕ್ತಿಯಿದ್ದ ಆಕೆ ಪಾಕಿಸ್ತಾನದ ಸ್ಥಿತಿ ಸುಧಾರಿಸಿ ಅಲ್ಲಿನ ಬಡವರಿಗೆ ಬಿಡುಗಡೆ ಸಿಗಬೇಕೆಂಬ ತನ್ನ ಕನಸನ್ನು ಮುಸ್ತಾಫಾ ನನಸು ಮಾಡುತ್ತಾನೆ ಎಂದು ನಂಬಿದ್ದಳು. ಅದಕ್ಕಾಗಿ ಏನೆಲ್ಲ ತ್ಯಾಗ ಮಾಡಿದಳು. ಅವನು ಜೈಲಿನಲ್ಲಿದ್ದಾಗ ಅವನ ಕೊರಳ ಧ್ವನಿಯಾಗಿ ಕೆಲಸ ಮಾಡಿದಳು. ಸಾರ್ವಜನಿಕ ಭಾಷಣದಲ್ಲಿ ಅವನೊಬ್ಬ ಹರಿಕಾರ ಎಂಬಂತೆ ಮಾತನಾಡಿದಳು. ಚುನಾವಣೆಯಲ್ಲಿ ಅವನನ್ನು ಗೆಲ್ಲಿಸಿದಳು. ಅವಳನ್ನು ಆಗೆಲ್ಲಾ ಬಾಯಿ ತುಂಬ ಹೊಗಳಿದ ಮುಸ್ತಾಫಾ ಹೊರ ಬಂದ ಮೇಲೆ ಅವಳನ್ನು ಮೂಲೆಗುಂಪು ಮಾಡಿದ. ಹಳೇ ಹಿಂಸೆ ಮುಂದುವರಿಸಿದ. ಆದರೆ ಅಷ್ಟರಲ್ಲಿ ಅವಳು ರಾಜಕಾರಣದ ಪಟ್ಟು ಕಲಿತಿದ್ದಳು.

ತೆಹಮಿನಾ ಬಗ್ಗೆ ಪ್ರಶ್ನೆ ಹುಟ್ಟುವುದು ಇಲ್ಲಿಯೇ. ಇಂತಹ ಒಬ್ಬ ಕ್ರೂರಿಯನ್ನು ಅವಳು ಪಾಕಿಸ್ತಾನದ ಭವಿಷ್ಯ ಬದಲಿಸಬಲ್ಲ ರಾಜಕಾರಣಿ ಎಂದು ನಂಬಿದ್ದು ಹೇಗೆ? ಯಾವುದೇ ವ್ಯಕ್ತಿ ವೈಯಕ್ತಿಕವಾಗಿ ಪಶುಸದೃಶ ಅಧಃಪತನಕ್ಕಿಳಿದಿರುವಾಗ ಆತನಿಂದ ಸಾರ್ವಜನಿಕ ಜೀವನದಲ್ಲಿ ಉದ್ಧಾರಕನ ಪಾತ್ರ ನಿರೀಕ್ಷಿಸಬಹುದೇ? ತೆಹಮಿನಾ ಆಗಲೀ ಜನಸಾಮಾನ್ಯರಾಗಲೀ ಹೀಗೆ ಮತ್ತೆ ಮತ್ತೆ ಮೋಸಹೋಗುವುದರ ಹಿಂದಿರುವ ಮಾಸ್ ಸೈಕಾಲಜಿ ಏನು? ಆತನೇ ತೆಹಮಿನಾಳೊಂದಿಗೆ, "ಜನರು ಕುರಿಯಿದ್ದಂತೆ. ದಾರಿ ಗೊತ್ತಿರುವ ಯಾರೊಬ್ಬರೂ ಜನರನ್ನು ತಮ್ಮ ಹಿಂದೆ ಬೆಂಬತ್ತಿಸಿಕೊಂಡು ಬೇಕಾದ ದಿಕ್ಕಿನಲ್ಲಿ ನಡೆಸಬಹುದು" (೩೭೮) ಎನ್ನುತ್ತಾನೆ. ಕ್ರಮೇಣ, "ಅವನು ನನ್ನ ಮನೋಲೋಕದ ಹೀರೋ ಆಗಿದ್ದನೆ ಹೊರತು ವಾಸ್ತವದಲ್ಲಿ ಅವನೆಂದೂ ಆ ಆದರ್ಶ ವ್ಯಕ್ತಿಯಾಗಿ ಅವತರಿಸಿರಲಿಲ್ಲ. ನಾನೇ ನನ್ನ ಭ್ರಮೆ ವಿಭ್ರಮೆಗಳನ್ನೇ ನೈಜವೆಂದು ಭಾವಿಸಿದ್ದೆ – ಎಲ್ಲ ನನ್ನ ಭ್ರಾಂತಿ!" (೫೭೪) ಎಂಬುದು ಅವಳಿಗೆ ತಿಳಿಯುತ್ತದೆ.

ತೆಹಮಿನಾ ಒಂದು ಹಂತದಲ್ಲಿ ಮುಸ್ತಾಫಾಗೆ ಹೇಳುವ ಈ ಮಾತುಗಳು ಈ ಕೃತಿಯ ಮುಖ್ಯ ಮಾತುಗಳಾಗಿವೆ: "ನೀನು ಹೆಣ್ಣಿನ ಅಂತಃಚೇತನವನ್ನು ಅರ್ಥವಾಡಿಕೊಂಡಿಲ್ಲ. ಅದು ಸದಾ ಸ್ವತಂತ್ರವಾಗಿರುವಂಥದ್ದು, ಮುಕ್ತವಾಗಿರುವಂಥದ್ದು. ನಿಜವಾದ ಅರ್ಥದಲ್ಲಿ ಯಾರ ಅಂಕೆಗೂ ಒಳಗಾಗದ ಅದರ ಶಕ್ತಿಸಾಮರ್ಥ್ಯ ಅಪಾರವಾದುವು; ಯಾರೂ ಅಳೆದು ಅಂದಾಜಿಸಲಾಗದಂಥವು. ನೀನು ತಿಳಿದುಕೊಂಡಿರುವಂತೆ ಹೆಣ್ಣು ಪುರುಷನ ಕೈಗೊಂಬೆಯಲ್ಲ. ಅವನ ಕಾಮಪಿಪಾಸೆಯನ್ನು ತಣಿಸುವ ಯಃಕಶ್ಚಿತ್ ಭೋಗದ ವಸ್ತುವೂ ಅಲ್ಲ. ಅವಳಿಗೆ ಅವಳದೇ ಆದ ಅಸ್ತಿತ್ವ ಇರುತ್ತದೆ. ಆ ಅಸ್ತಿತ್ವವನ್ನು ಅರ್ಥಪೂರ್ಣಗೊಳಿಸುವ ಹಂಬಲದಿಂದ ಅವಳು ಎಷ್ಟೋ ಸಲ ಕಲ್ಪನಾತೀತವಾದ ಕಷ್ಟ–ನಷ್ಟಗಳನ್ನು ಅನುಭವಿಸುತ್ತಾಳೆ. ಕೆಲವೊಮ್ಮೆ ತನ್ನನ್ನೇ ಅರ್ಪಿಸಿಕೊಂಡು ಹುತಾತ್ಮಳಾಗುತ್ತಾಳೆ. ಕ್ಷಮಯಾಧರಿತ್ರಿಯಂತೆ ಎಲ್ಲವನ್ನೂ ಸಹಿಸಿಕೊಳ್ಳುತ್ತ ತಾಪ ಸಾಗರದೆಡೆಗೆ ಧುಮ್ಮಿಕ್ಕಿ ಹರಿಯುವ ನದಿಗೆ ಸಹನೆಯ ಅಣಕಟ್ಟು ಕಟ್ಟುತ್ತಾಳೆ. ಸಂಯಮ ಸಹನೆಗಳಿಗೆ ಸಂಕೇತವಾಗುತ್ತಾಳೆ. ಸಾಕಾರವೂ ಆಗುತ್ತಾಳೆ. ಇದನ್ನೇ ನಿಮ್ಮಂಥವರು ಅವಳ ದೌರ್ಬಲ್ಯವೆಂದು ಬಗೆದು ತೊತ್ತಳ ತುಳಿಯಲು ಎಳಸುತ್ತೀರಿ. ಇದು ನಿಮ್ಮ ದೃಷ್ಟಿದೋಷವೇ ವಿನಾ ಅವಳ ದೌರ್ಬಲ್ಯವಲ್ಲ." (೫೫೮)

ತನ್ನ ಅರಿವು ಮತ್ತು ಬರಹವನ್ನು ಅಸ್ತ್ರವಾಗಿಸಿಕೊಂಡು ಆಕೆ ಗೆಲ್ಲುತ್ತಾಳೆ. ನಿನಗೆ ಖಾರ್‌ನ ಮಾಜಿ ಹೆಂಡತಿ ಎಂಬ ಗುರುತು ಬಿಟ್ಟು ಅಸ್ತಿತ್ವವೇ ಇಲ್ಲ ಎಂದು ಅಪಮಾನಿಸಿದ್ದ ಆತನಿಗೆ: "ಇನ್ನು ಮುಂದೆ ಮುಸ್ತಫಾ ಖಾರ್ ಎಂದರೆ ತೆಹಮಿನಾ ದುರಾನಿಯ ಮಾಜಿ ಗಂಡನೆಂದೇ ಗುರುತಿಸುತ್ತಾರೆ. ನೀನು ಈ ದೇಶದ ಮಂಡೂಕ. ನಾನೋ ಸಪ್ತ ಸಾಗರಗಳನ್ನು ದಾಟಿ ಸರ್ವತೀರಗಳಲ್ಲೂ ಅಲೆದಾಡುವ ತಿಮಿಂಗಿಲ!" (೫೮೯)ಎಂಬಲ್ಲಿಗೆ ಬೆಳೆಯುತ್ತಾಳೆ.

ಇದು ತೆಹಮಿನಾ ಎಂಬ ಹೆಣ್ಣು ಮುಸ್ತಾಫಾ ಎಂಬ ಫ್ಯೂಡಲ್ ಗಂಡಿನ ಕತೆಯಷ್ಟೇ ಆಗದೆ, ಪಾಕಿಸ್ತಾನ ಎಂಬ ಹೆಣ್ಣಿನ ಮೇಲೆ ಅಲ್ಲಿನ ಭ್ರಷ್ಟ ರಾಜಕಾರಣಿಗಳ ದುರಾಕ್ರಮಣದ ಕತೆಯೂ ಆಗಿದೆ. 'ಹೆಣ್ಣು' ಮತ್ತು 'ದೇಶವೆಂಬಹೆಣ್ಣಿ'ನ ಅಂತಃಸತ್ವವನ್ನು ಹಾಳುಗೆಡವುತ್ತಾ ತಾವೂ ನಾಶವಾಗುತ್ತಿರುವ ದುರಂತದ ಕಥನವೂ ಆಗಿದೆ. ಮೂರ್ಖತನವನ್ನು ದಾಟಿ ತಾಳ್ಮೆ ಮತ್ತು ಧೈರ್ಯವನ್ನು ಬಿಂಬಿಸುವ ಕಥನವೂ ಹೌದು.

ಮೂಲ ಕೃತಿಯ ಅಚ್ಚುಕಟ್ಟುತನ ಅನುವಾದದಲ್ಲೂ ಇದೆ. ಎಲ್ಲೂ ಇಲ್ಲಿ ಬಳಸಿದ ಭಾಷೆ ನಮ್ಮ ಓದಿಗೆ ಅಡ್ಡಿ ಆಗುವುದಿಲ್ಲ. ಮೂಲದ 'ಮೈ ಫ್ಯೂಡಲ್ ಲಾರ್ಡ್' ಎಂಬ ಹೆಸರು 'ಆರನೆಯ ಹೆಂಡತಿಯ ಆತ್ಮಕತೆ' ಎಂದಾದಾಗ ಸ್ವಲ್ಪ ರೋಚಕತೆಯ ಕಡೆ ಗಮನ ಬೀಳುತ್ತದೆ ಎಂಬುದು ಬಿಟ್ಟರೆ ಈ ಅನುವಾದಕ್ಕೆ ನೂರಕ್ಕೆ ನೂರು ಅಂಕ ಸಲ್ಲುತ್ತದೆ.

–ಡಾ. ಸಬಿತಾ ಬನ್ನಾಡಿ

~~~~~~~~~~~~~~~~~~~~~~~~~~~~~~

ಪ್ರಗತಿಪರ ಚಿಂತಕಿ ಮತ್ತು ಇತಿಹಾಸ ತಜ್ಞೆ ಡಾ. ವಸು ಮಳಲಿ ಅವರ ಅಕಾಲಿಕ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ –ಸಂ
~~~~~~~~~~~~~~~~~~~~~~~~~~~~~~

ಹೊಸ ಮನುಷ್ಯ ಪತ್ರಿಕೆಯ
ಮಹಿಳಾ ಸಂಚಿಕೆಗೆ ಶುಭಾಶಯಗಳು



-ಮೋಹನ ಡಿ ಶಾಸ್ತ್ರಿ
ಮತ್ತು ಕುಟುಂಬ
ಶಿವಮೊಗ್ಗ


'ಹೊಸ ಮನುಷ್ಯ' ಪತ್ರಿಕೆಯ
ಮಹಿಳಾ ಸಂಚಿಕೆಗೆ ಶುಭಾಶಯಗಳು



ಜಿ.ಎಂ. ಪಾಟೀಲ್
ಮತ್ತು ಆರ್.ಜಿ. ಪಾಟೀಲ್
ಸಿವಿಲ್ ಕಂಟ್ರಾಕ್ಟರುಗಳು
ಹುಬ್ಬಳ್ಳಿ

ದೂ: 9591317402

ತಿಂಗಳ ಸಾಲುಗಳು...



ಅನ್ಯಾಯವನ್ನು ನೋಡುತ್ತಾ ಸುಮ್ಮನಿರುವನೂ
ಅನ್ಯಾಯವೆಸಗುತ್ತಿರುವವನಷ್ಟೇ ಅಪರಾಧಿ.

-ಡಾ. ರಾಮಮನೋಹರ ಲೋಹಿಯಾ

ಪತ್ರಿಕೆಗೆ ಶುಭ ಕೋರುತ್ತಾ...

-ಬಿ.ಸುರೇಶ

ಡಾ. ವಿಜಯಾ

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

Regd. News Paper RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)